ದೆಹಲಿ ಕರ್ನಾಟಕ ಸಂಘದ

# ಅಭಿಮತ

ಜನವರಿ 2012 ಬೆಲೆ ರೂ. 1.




## ರಾಜಧಾನಿಗೆ ಶತಮಾನದ ಸಂಭ್ರಮ



# ಅಭಿನಂದನೆ

ಹಿರಿಯ ವಿದ್ವಾಂಸ ಡಾ. ಸಿ.ಪಿ. ಕೃಷ್ಣಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ 78ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ಡಿಸೆಂಬರ್ 9, 10, 11, 2011ರಂದು ಮೂರು ದಿನಗಳ ಕಾಲ ನಡೆಯಿತು. ಈ ಕಾರ್ಯಕ್ರಮದಲ್ಲಿ ಬದುಕಿನ ವಿವಿಧ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆಗೈದು ಕನ್ನಡ-ನಾಡು-ನುಡಿ, ಸಂಸ್ಕೃತಿಗೆ ಸೇವೆ ಸಲ್ಲಿಸಿದ ಅನೇಕ ಗಣ್ಯರನ್ನು ಗುರುತಿಸಿ ಗೌರವಿಸಲಾಯಿತು. ಅಂತಹ ಗಣ್ಯರಲ್ಲಿ ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ.ನಾಗರಾಜ ಅವರನ್ನು ಗೌರವಿಸಲಾಯಿತು.

## ಯಕ್ಷಗಾನದ ಮೋಡಿಗೆ ಒಳಗಾದ ಕ್ಯಾಥರಿನ್ ಅವರೊಡನೆ ಸಂವಾದ

ದೆಹಲಿಯ ಚುಮು ಚುಮು ಚಳಿಯ ಮಧ್ಯೆ ಕರ್ನಾಟಕ ಸಂಘದಲ್ಲೊಂದು ಕಾರ್ಯಕ್ರಮ ಏರ್ಪಾಡಾಗಿತ್ತು. ಡಿಸೆಂಬರ್ 17ರ ಸಂಜೆಯ ಈ ಕಾರ್ಯಕ್ರಮದಲ್ಲಿ ಜರ್ಮನ್‌ನ ವುರ್ಜ್‌ಬರ್ಗ್ ವಿಶ್ವವಿದ್ಯಾಲಯದ ಇಂಡೋಲಜಿ ವಿಭಾಗದ ಅಧ್ಯಾಪಕಿ ಕ್ಯಾಥರಿನ್ ಬಿಂದರ್ ಜೊತೆ ಹರಟೆ. ಒಂದು ಗಂಟೆ ಕಾಲದ ನಡೆದ ಹರಟೆಯನ್ನು ಒಂದೇ ಶಬ್ದದಲ್ಲಿ ವರ್ಣಿಸುವುದಾದರೆ ಅದ್ಭುತ ಅಷ್ಟೇ.

ಕನ್ನಡದ ನೆಲದಲ್ಲಿ ಹುಟ್ಟಿ ಬೆಳೆದ ಎಷ್ಟೋ ಜನ ತಮ್ಮ ಸಂಸ್ಕೃತಿ, ಭಾಷೆ, ಕಲೆಯಿಂದ ಮುಖ ಹೊರಳಿಸಿ ಹಣ, ಉದ್ಯೋಗದ ಕಾರಣದಿಂದ ತಮ್ಮದೆನ್ನುವ ಎಲ್ಲವನ್ನು ಮರೆತು ಮತ್ತೆಲ್ಲೋ ನೋಡುತ್ತಿರುವಾಗ ಪಶ್ಚಿಮದ ನೆಲದಲ್ಲಿ ಹುಟ್ಟಿ ಬೆಳೆದ ಮಹಿಳೆಯೊಬ್ಬಳು ಕನ್ನಡದ ಭಾಷೆ ಮತ್ತು ಯಕ್ಷಗಾನದತ್ತ ಆಕರ್ಷಣೆ ಹೊಂದಿ ದೂರದ ಜರ್ಮನಿಯಲ್ಲಿನ ಯುವ ಪೀಳಿಗೆಗೆ ಕಲಿಸುತ್ತಿರುವ ಕ್ಯಾಥರಿನ್ ಬಿಂದರ್ ಒಂದು ಗಂಟೆ ಕಾಲ ತಾನು ಹೇಗೆ ಒಬ್ಬ ವಿದೇಶಿ ಮಹಿಳೆಯಾಗಿಯು ಕೂಡ ಯಕ್ಷಗಾನದ ಮೋಡಿಗೆ ಒಳಗಾದೆ ಮತ್ತು ಶಾಸ್ತ್ರೋಕ್ತ ಅಭ್ಯಾಸ ನಡೆಸಿದೆ ಎಂಬುದನ್ನು ವಿವರಿಸಿದರು.

ಚಿಕ್ಕಂದಿನಿಂದಲೂ ಕೂಡ ಪಾಶ್ಚಿಮಾತ್ಯ ಶಾಸ್ತ್ರೀಯ ಸಂಗೀತ ಅಭ್ಯಾಸ ನಡೆಸಿದ್ದ ಕ್ಯಾಥರಿನ್ ಕಾಲೇಜ್‌ನಲ್ಲಿದ್ದಾಗ ಭಾರತೀಯ ಜನಪದ ಪ್ರಕಾರಗಳಲ್ಲಿ ಆಸಕ್ತಿ ಹೊಂದಿದ್ದರು. ಕಥಕ್, ಭರತನಾಟ್ಯ ಹಾಗು ಯಕ್ಷಗಾನದ ಬಗ್ಗೆ ಇಂಡೋಲಜಿ ಅಭ್ಯಾಸ ನಡೆಸುವಾಗ ತಿಳಿದುಕೊಂಡ ಕ್ಯಾಥರಿನ್ 1998ರಲ್ಲಿ ಭಾರತೀಯ ಸಾಂಸ್ಕೃತಿಕ ಸಂಸ್ಥೆ ಫೆಲೋಶಿಪ್ ಪಡೆದು ದಕ್ಷಿಣ ಕರ್ನಾಟಕಕ್ಕೆ ಬಂದು ಯಕ್ಷಗಾನದ ಬಗ್ಗೆ ಮೇಲ್ಮಟ್ಟದ ಅಭ್ಯಾಸ ನಡೆಸಿದರು. ನಂತರ ಮತ್ತೆ 2001ರಲ್ಲಿ ಉಡುಪಿಗೆ ಬಂದು ಸಂಜೀವ್ ಸುವರ್ಣಾ ಅವರಲ್ಲಿ ಯಕ್ಷಗಾನ ತರಬೇತಿ ಪಡೆದ ಕ್ಯಾಥರಿನ್ ಬಡಗುತಿಟ್ಟು ಅಭ್ಯಾಸ ನಡೆಸಿದರು. ನಿರರ್ಗಳ ಕನ್ನಡ ಮತ್ತು ತುಳು ಮಾತನಾಡಬಲ್ಲ ಕ್ಯಾಥರಿನ್ ಎರಡು ವರ್ಷಕ್ಕೊಮ್ಮೆ ಭಾರತಕ್ಕೆ ಬಂದು ಯಕ್ಷಗಾನ ಅಭ್ಯಾಸ ನಡೆಸುತ್ತಾರೆ. ಪತಿ ಯೇಮ್ಸ್ ಮತ್ತು ತನ್ನ ತಾಯಿ ತಂದೆ ಹಾಗು ಅತ್ತೆ ಮಾವ ಭಾರತೀಯ ನೃತ್ಯ ಪ್ರಕಾರಗಳ ಅಭ್ಯಾಸಕ್ಕೆ ಸಾಕಷ್ಟು ಪ್ರೋತ್ಸಾಹ ನೀಡುತ್ತಾರೆ ಎನ್ನುವ ಕ್ಯಾಥರೀನ್ ತಮ್ಮ ಮಕ್ಕಳಿಗೆ ಉಷಾ ಮತ್ತು ಯಶೋದರಾ ಎನ್ನುವ ಭಾರತೀಯ ಹೆಸರುಗಳನ್ನೇ ಇಟ್ಟಿದ್ದಾರೆ.


ಜರ್ಮನಿಯಲ್ಲಿ ಕಥಕ್ ಅಭ್ಯಾಸ ಕೂಡ ನಡೆಸುತ್ತಿರುವ ಕ್ಯಾಥರಿನ್ 'ಯಕ್ಷಗಾನ ರಂಗಭೂಮಿ' ಎನ್ನುವ ವಿಷಯದ ಬಗ್ಗೆ ಪಿ.ಎಚ್.ಡಿ. ಪ್ರಬಂಧವನ್ನು 2008ರಲ್ಲಿ ಮಂಡಿಸಿದ್ದಾರೆ. ಇಂದು ಯುರೋಪಿನ ಅನೇಕ ಕಡೆ ಯಕ್ಷಗಾನ ಹಾಗೂ ಕನ್ನಡವನ್ನು ಬೆಳೆಸುವ ನಿಟ್ಟಿನಲ್ಲಿ ಪ್ರಯತ್ನಿಸುತ್ತಿರುವುದೂ ಅಲ್ಲದೆ ಕನ್ನಡದ 'ಅಭಿಮನ್ಯು ಕಾಳಗ' ಪ್ರಸಂಗವನ್ನು ಜರ್ಮನಿ ಭಾಷೆಗೆ ಭಾಷಾಂತರಿಸಿದ್ದಾರೆ. ಸದ್ಯ ಕ್ಯಾಥರಿನ್ ವುರ್ಜ್‌ಬರ್ಗ್ ವಿಶ್ವವಿದ್ಯಾಲಯದ 'ಇಂಡೋಲಜಿ' ವಿಭಾಗದಲ್ಲಿ ಅಡ್ವಾನ್ಸ್ ಕನ್ನಡವನ್ನು ಬೋಧಿಸುತ್ತಿದ್ದಾರೆ.

ಯಕ್ಷಗಾನದ ಬಹುಪಾಲು ಪದ್ಯಗಳು ಕನ್ನಡದಲ್ಲಿಯೇ ಇರುವುದರಿಂದ, ಭಾವ ಗ್ರಹಿಸಲು ಕನ್ನಡವನ್ನು ಕಲಿಯಲು ನಿರ್ಧರಿಸಿದ ಕ್ಯಾಥರಿನ್‌ಗೆ ಪ್ರಾರಂಭದಲ್ಲಿ ಬಹಳ ಕಷ್ಟವೆನಿಸಿದರೂ, ನಂತರ ಗುರು ಸಂಜೀವ್ ಸುವರ್ಣ ಮತ್ತು ವಿವೇಕ ರೈ ಅವರುಗಳ ನೆರವಿನಿಂದ ಕನ್ನಡ ಕಲಿತಿದ್ದಾಗಿ ಸ್ಮರಿಸುತ್ತಾರೆ.

ಕರ್ನಾಟಕದಲ್ಲಿಯೇ ಕನ್ನಡವನ್ನು ಕಲಿಯುವವರಿಲ್ಲದಂತಹ ಪರಿಸ್ಥಿತಿಯಲ್ಲಿ ಜರ್ಮನಿಯಲ್ಲಿ ಕನ್ನಡ ಕಲಿಯುವವರಿದ್ದಾರೆಯೇ ಎಂಬ ಕುತೂಹಲದ ಪ್ರಶ್ನೆಗೆ ಕ್ಯಾಥರಿನ್ ಉತ್ತರಿಸಿದ್ದು ಹೀಗೆ-"ಮೊದಲು ಜರ್ಮನಿಯಲ್ಲಿ ಅಷ್ಟಾಗಿ ವಿದ್ಯಾರ್ಥಿಗಳು ಕನ್ನಡವನ್ನು ಕಲಿಯಲು ಮುಂದಾಗುತ್ತಿರಲಿಲ್ಲ. ಹಿಂದಿಯನ್ನು ಕಲಿಯಲು ಹೆಚ್ಚು ಆಸಕ್ತಿಯನ್ನು ತೋರುತ್ತಿದ್ದರು. ಅದಕ್ಕೆ ಕಾರಣವೆಂದರೆ ಹಿಂದಿಯಲ್ಲಿ ಅತ್ಯುತ್ತಮ ಶಿಕ್ಷಕರು, ಅನುವಾದಕರು ಇದ್ದಾರೆ. ಆದರೆ ಕನ್ನಡದಲ್ಲಿ ಇದಾವುದು ಇರಲಿಲ್ಲ. ಕರ್ನಾಟಕ ಸರ್ಕಾರದಿಂದಲೂ ಅಷ್ಟಾಗಿ ಸಹಾಯ ದೊರೆಯುತ್ತಿರಲಿಲ್ಲ. ಆದರೆ ಇಂದು ಕರ್ನಾಟಕ ಸರ್ಕಾರದಿಂದಲೂ ಸ್ವಲ್ಪ ಸಹಕಾರ ಸಿಗುತ್ತಿದೆ. ಅಲ್ಲದೇ ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಉಪಕುಲಪತಿಯಾದ ಪ್ರೊ. ವಿವೇಕ್ ರೈ ಅವರು ನಮ್ಮ ವಿಶ್ವವಿದ್ಯಾಲಯಕ್ಕೆ ಬಂದ ಮೇಲೆ ಪರಿಸ್ಥಿತಿ ಸ್ವಲ್ಪ ಬದಲಾಗಿದೆ. ಇಂದು ಅಲ್ಲಿಯ ವಿದ್ಯಾರ್ಥಿಗಳು ಕನ್ನಡದ ಬಗ್ಗೆ ಆಸಕ್ತಿ ತೋರುತ್ತಿದ್ದಾರೆ. ಈಗ ನಮ್ಮ ವಿಭಾಗದಲ್ಲಿ 35 ವಿದ್ಯಾರ್ಥಿಗಳು ಕನ್ನಡವನ್ನು ಕಲಿಯುತ್ತಿದ್ದಾರೆ. ಗ್ರಂಥಾಲಯಗಳಲ್ಲಿ, ವಸ್ತು ಸಂಗ್ರಹಾಲಯಗಳಲ್ಲಿ, ದ್ವಿಭಾಷಿಗಳಾಗಿಯೂ ಸಹ ಉದ್ಯೋಗಾವಕಾಶಗಳು ದೊರೆಯುತ್ತಿವೆ. ಈ ನಿಟ್ಟಿನಲ್ಲಿ ವುರ್ಜ್‌ಬರ್ಗ್ ವಿಶ್ವವಿದ್ಯಾಲಯವೂ ಪ್ರಯತ್ನಿಸುತ್ತಿದೆ".

ಪಾಂಡವರು ಅರಗಿನ ಮನೆಯಲ್ಲಿದ್ದಾಗ ಅವರನ್ನು ಕೊಲ್ಲುವ ಯೋಜನೆ ರೂಪಿಸುವ ಕೌರವರ ಪ್ರಸಂಗವನ್ನು ಆಂಗಿಕ ಅಭಿನಯದ ಮೂಲಕ ತೋರಿಸಿದ ಕ್ಯಾಥರಿನ್ ಭಾರತೀಯ ರಂಗ ಕಲೆಗಳ ಬಗ್ಗೆ ಆಳವಾದ ಅಧ್ಯಯನದಲ್ಲಿ ತೊಡಗಿರುವ ವಿದ್ವಾಂಸೆ. ಇರುವುದೆಲ್ಲವನ್ನು ಬಿಟ್ಟು ಇರದುದರೆಡೆಗೆ ತುಡಿಯುವ ನಮ್ಮ ತಲೆಮಾರು ಜರ್ಮನ್ ದೇಶದ ಕ್ಯಾಥರಿನ್‌ನಿಂದ ಕಲಿಯುವುದು ಬೇಕಾದಷ್ಟಿದೆ.

ಸಾಹಿತ್ಯಿಕ ಉಪಸಮಿತಿಯ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಅವರು ಕ್ಯಾಥರಿನ್ ಅವರನ್ನು ಪರಿಚಯಿಸಿದರು. ಕನ್ನಡ ಮಾತನಾಡಬಲ್ಲ, ಯಕ್ಷಗಾನ ಅಭಿನಯ ಮಾಡಬಲ್ಲ, ಜರ್ಮನ್ ವಿದ್ವಾಂಸೆ ಕ್ಯಾಥರಿನ್ ನೆರೆದಿದ್ದ ಕನ್ನಡಾಭಿಮಾನಿಗಳ ಹತ್ತಾರು ಕುತೂಹಲಭರಿತ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡಿ ಅಪಾರ ಪ್ರಶಂಸೆಗೆ ಪಾತ್ರರಾದರು.



ಅಭಿಮತ
ಸಂಪುಟ 22 ಸಂಚಿಕೆ 4
ಜನವರಿ 2012, ಬೆಲೆ ರೂ. 1

**ಪ್ರಧಾನ ಸಂಪಾದಕರು**
ಉಷಾ ಭರತಾದ್ರಿ

**ಸಂಪಾದಕ ಮಂಡಳಿ**
ಚೆನ್ನು ಎಸ್. ಮಠದ
ರೇಣುಕಾ ಎಸ್. ನಿಡಗುಂದಿ
ಸಂತೋಷ್ ಕುಮಾರ್ ಉಪಾಧ್ಯಾಯ
ಚಂದ್ರಶೇಖರ ಎನ್.ಪಿ.

**ದೆಹಲಿ ಕರ್ನಾಟಕ ಸಂಘದ**
**ಕಾರ್ಯಕಾರಿ ಸಮಿತಿ**

**ಅಧ್ಯಕ್ಷರು**
ಡಾ. ವೆಂಕಟಾಚಲ ಜಿ. ಹೆಗಡೆ

**ಉಪಾಧ್ಯಕ್ಷರು**
ಉಷಾ ಭರತಾದ್ರಿ
ಬಿ.ಕೆ. ಬಸವರಾಜು

**ಪ್ರಧಾನ ಕಾರ್ಯದರ್ಶಿ**
ಸಿ.ಎಂ. ನಾಗರಾಜ

**ಖಜಾಂಚಿ**
ಕೆ.ಆರ್. ರಾಮಮೂರ್ತಿ

**ಜಂಟಿ ಕಾರ್ಯದರ್ಶಿಗಳು**
ಎನ್.ಆರ್. ಶ್ರೀನಾಥ್
ರೇಣುಕಾ ಎಸ್. ನಿಡಗುಂದಿ

**ಸಮಿತಿ ಸದಸ್ಯರು**
ಆಂಜನಿ ಗೌಡ
ಎಸ್.ಸಿ. ಹೇಮಲತ
ಟಿ.ಎಂ. ಮೈಲಾರಪ್ಪ
ಪಿ.ಸಿ. ಶ್ರೀನಿವಾಸ
ಸಿ.ಆರ್. ಶ್ರೀನಿವಾಸ
ಜಿ.ಬಿ. ಹೆಗಡಿ
ಆನಂದ ಈಶ್ವರಪ್ಪ ಮುರಗೋಡ
ಬಿ. ನಾರಾಯಣ
ಆರ್. ರೇಣುಕುಮಾರ್
ಎಸ್. ಕೃಷ್ಣ ಭಟ್
ಶಶಿಕಾಂತ್ ಪಾಟೀಲ್

**DELHI KARNATAKA SANGHA**
Rao Tularam Marg, Sector-12, R K Puram,
New Delhi-110022.
Phone: 011-26109615. 011-65643615
email:dksangha@gmail.com
website : www.delhikarnatakasangha.com

# ಮನದ ಮಾತು

2011 ಕಾಲಗರ್ಭದಲ್ಲಿ ಲೀನವಾಗಿ 2012 ಶುರುವಾಗಿದೆ. ಬಹುಶ: 2011ರ ಹೆಬ್ಬಯಕೆ ಲೋಕಪಾಲ್ ಮಸೂದೆ ಸಂಸತ್ತಿನ ಉಭಯ ಸದನಗಳಲ್ಲಿ ಅಂಗೀಕಾರವಾಗಿ 2012 ಹೊಸ ಆಶಯಗಳನ್ನು ಹೊತ್ತು ತರಬಹುದೆಂದು ಆಶಿಸಿದ್ದ ನಮಗೆ ಮತ್ತೆ ನಿರಾಶೆ. ಗಡಗಡ ನಡುಗಿಸುವ ಚಳಿಯಲ್ಲಿ ಸಂಸತ್ತು ನಡುರಾತ್ರಿಯವರೆಗೂ ಕಲಾಪ ನಡೆಸಿದರೂ ಮಸೂದೆ ಬೆಳಕು ಕಾಣಲಿಲ್ಲ. ಲೋಕಸಭೆಯ ಎಡರು ತೊಡರುಗಳಿಂದ ಹೇಗೋ ಸಾಗಿ ಬಂದ ಮಸೂದೆ ರಾಜ್ಯಸಭೆಯಲ್ಲಿ ಮುಗ್ಗರಿಸಿತು. ತತ್ಪರಿಣಾಮ 2012ರಲ್ಲೂ ಈ ಮಸೂದೆ ಕನಸಾಗಿ ಉಳಿಯುವಂತಾಯಿತು. ಇದಕ್ಕೆ ಕಾರಣ ನಮ್ಮ ರಾಜಕೀಯ ಪಕ್ಷಗಳ ಸ್ವಹಿತ ಧೋರಣೆ, ತಂತ್ರ ಕುತಂತ್ರ, ಒಬ್ಬರ ಕಾಲನ್ನು ಮತ್ತೊಬ್ಬರು ಎಳೆಯಲೇಬೇಕೆಂಬ ನಿಲುವು ಹಾಗೂ ಜನಹಿತವನ್ನು ಮರೆತು ರಾಜಕೀಯ ಹಿತದತ್ತ ನಟ್ಟಿರುವ ದೃಷ್ಟಿ. ಇನ್ನೊಂದು ದುರಂತ ಎಂದರೆ ಅಣ್ಣಾತಂಡ ಪ್ರಾರಂಭದಲ್ಲಿ ತನಗೆ ದೊರೆತ ಅಪಾರ ಬೆಂಬಲದಿಂದ ಕೊಂಚ ಮಟ್ಟಿಗೆ ವಿವೇಕ ರಹಿತವಾಗಿ ವರ್ತಿಸಿದ್ದು, ತಾವೇ ಅಪ್ರತಿಮರು ಎಂದು ಬೀಗಿದ್ದು. ಹೀಗಾಗಿ ಜನ ಸ್ವಲ್ಪ ಹಿಂದೆ ಸರಿದರು. ನಮ್ಮ ಜನ ಅತಿರೇಕಗಳನ್ನು ಎಂದೂ ಸಹಿಸುವುದಿಲ್ಲ ಎಂಬುದನ್ನು ಅಣ್ಣಾ ತಂಡ ಅರಿತರೆ 2011ರಲ್ಲಿ ಅದ್ಭುತವಾಗಿ ಶುರು ಮಾಡಿದ್ದ ಜನಾಂದೋಲನಕ್ಕೆ ಮತ್ತೆ ಚಾಲನೆ ಕೊಡಬಹುದು ಎಂಬುದು ನಮ್ಮ ಆಶಯ. ಹೇಳೋರು, ಕೇಳೋರು ಯಾರೂ ಇಲ್ಲ ಅಂದರೆ ರಾಜಕೀಯ ಪಕ್ಷಗಳು ಈ ಅದ್ಭುತ ಮಸೂದೆಯನ್ನು ಮತ್ತೆ ಶೈತ್ಯಾಗಾರಕ್ಕೆ ರವಾನಿಸುವುದು ಖಚಿತ.

2011ರಲ್ಲಿ ಕನ್ನಡಿಗರು ಅತ್ಯಂತ ಹೆಮ್ಮೆಯಿಂದ ಸಂಭ್ರಮಿಸಿದ ಘಟನೆ ನಡೆಯಿತು. ಕಳೆದ 25 ವರ್ಷಗಳಿಂದ ನಾಡು ಹಾಗೂ ದೇಶವನ್ನು ಪ್ರತಿನಿಧಿಸಿದ್ದ ಅತ್ಯಂತ ಪ್ರತಿಭಾನ್ವಿತ ಕ್ರಿಕೆಟ್ ಆಟಗಾರ ರಾಹುಲ್ ದ್ರಾವಿಡ್ 2011ರ ಡಿಸೆಂಬರ್ 14ರಂದು ಕ್ಯಾನ್‌ಬೆರಾದ Bradman Oration ನಲ್ಲಿ ಮಾತನಾಡುವ ಸೌಭಾಗ್ಯ ಪಡೆದರು. ಅದ್ಭುತ ಸಾಧನೆಗಳನ್ನು ಸದ್ದುಗದ್ದಲವಿಲ್ಲದೆ ಮಾಡಿದ ಕರ್ನಾಟಕದ ದ್ರಾವಿಡ್ ಈ ಅವಕಾಶ ಪಡೆದ ಪ್ರಥಮ ಭಾರತೀಯ. ಆಗ ದ್ರಾವಿಡ್ ಮಾಡಿದ ಸದ್ವಿವೇಕದ ಗಂಭೀರ ಭಾಷಣ ಇಡೀ ಜಗತ್ತಿನಲ್ಲಿ ಪ್ರಶಂಸೆಗೆ ಪಾತ್ರವಾಗಿದೆ. "ಭಾರತೀಯ ಕ್ರಿಕೆಟ್ ನಮ್ಮ ದೇಶದ ವೃದ್ಧಿಯನ್ನು ಬಿಂಬಿಸುತ್ತದೆ. ದೇಶದ ಜತೆ ಅದೂ ಬೆಳೆದಿದೆ. ದೇಶದ ಅರ್ಥ ವ್ಯವಸ್ಥೆ ಬದಲಾದ ಹಾಗೆ, ಸಮಾಜ ಮತ್ತು ಸಂಸ್ಕೃತಿ ನವನವೀನ ಅಂಶಗಳನ್ನು ಮೈಗೂಡಿಸಿಕೊಂಡು ಅಭಿವೃದ್ಧಿಯ ಪಥದಲ್ಲಿ ಸಾಗಿದಂತೆ ಕ್ರಿಕೆಟ್ ಕೂಡ ಪ್ರಗತಿಯಿಂದ ಪ್ರಗತಿಯತ್ತ ನಡೆದಿದೆ" – ಎಂದು ಈ ಸಂದರ್ಭದಲ್ಲಿ ದ್ರಾವಿಡ್ ನುಡಿದರು. ಅಷ್ಟೇ ಅಲ್ಲ, ಕ್ರಿಕೆಟ್ ಆಟದ ಘನತೆಯನ್ನು ಕಾಪಾಡಿಕೊಳ್ಳಲು ಇಡೀ ವಿಶ್ವಕ್ಕೆ ಅತ್ಯಮೂಲ್ಯ ಸಲಹೆಗಳನ್ನು ನೀಡಿದರು. ನಮ್ಮ ಪ್ರೀತಿಯ ದ್ರಾವಿಡ್ ಅವರಿಗೆ ನಮ್ಮ ಅಭಿನಂದನೆಗಳು ಸಲ್ಲುತ್ತವೆ.

2011ರ ಅಂತ್ಯದ ದಿನಗಳವರೆಗೆ ನಮ್ಮೊಂದಿಗಿದ್ದ 2012ಕ್ಕೆ ಇನ್ನೇನು ಪದಾರ್ಪಣ ಮಾಡಬೇಕು ಅನ್ನುವಷ್ಟರಲ್ಲಿ ವಿಧಿವಶರಾದ ಮಾಜಿ ಮುಖ್ಯಮಂತ್ರಿ ಸಾರೆಕೊಪ್ಪ ಬಂಗಾರಪ್ಪ ನಮ್ಮ ನೆನಪಿನಲ್ಲಿ ಸದಾ ಚಿರಾಯು. ಎಪ್ಪತ್ತೊಂಭತ್ತು ವರ್ಷಗಳ ವಯೋವೃದ್ಧರಂತೆ ಕಾಣದೆ ಸದಾ ಇಪ್ಪತ್ತೆಂಟರ ಯುವಕರಂತೆ ಕಂಗೊಳಿಸುತ್ತಿದ್ದ ಬಂಗಾರಪ್ಪನವರು ನಮ್ಮ ನಾಡು ಕಂಡ ವರ್ಣರಂಜಿತ ರಾಜಕಾರಣಿ. ತಮ್ಮದೇ ಆದ ತತ್ವ, ಚಿಂತನೆಗಳಲ್ಲಿ ಪ್ರಗಾಢ ನಂಬಿಕೆ ಹೊಂದಿದ್ದ ಅವರು ಆ ನಂಬಿಕೆ ಹುಸಿಯಾಗಲು ಎಂದೂ ಬಿಡಲಿಲ್ಲ. ತತ್ವ ಹಾಗೂ ಚಿಂತನೆಗಳಿಗೆ ಅವಕಾಶ ಕಡಿಮೆ ಅನ್ನಿಸಿದಾಗಲೆಲ್ಲ ಅವರು ಪಕ್ಷಗಳನ್ನು ಬದಲಿಸಿದರೇ ಹೊರತು ತಾವು ನಂಬಿದ್ದ ಸಿದ್ಧಾಂತಗಳಿಂದ ಹೊರಬರಲಿಲ್ಲ. ಬಂಗಾರಪ್ಪ ನಾಡು ಕಂಡಂತ ಅಪರೂಪದ ಜನಪರ ರಾಜಕಾರಣಿ. ಕನ್ನಡ ಸಾಹಿತ್ಯದ ಅಪೂರ್ವ ಕಾವ್ಯಗಳನ್ನು ಮನದಟ್ಟು ಮಾಡಿಕೊಂಡಿದ್ದ ಅವರು ಕನ್ನಡ ಜನರ ಸಂಸ್ಕೃತಿಯನ್ನು ಉಳಿಸಲು ತಮ್ಮ ಅಧಿಕಾರಾವಧಿಯಲ್ಲಿ ಪರಿಶ್ರಮಿಸಿದರು. ಕರ ಕುಶಲ ಕರ್ಮಿಗಳ ಉತ್ತೇಜನಕ್ಕಾಗಿ ಜಾರಿಗೆ ತಂದ 'ವಿಶ್ವ', ಹಳ್ಳಿಗಾಡಿನ ಚಿಕ್ಕಪುಟ್ಟ ದೇಗುಲಗಳ ಸಂರಕ್ಷಣೆಗಾಗಿ ಅನುಷ್ಠಾನಗೊಳಿಸಿದ 'ಆರಾಧನ' – ಅವರ ಸಂಸ್ಕೃತಿ ಪ್ರೇಮಕ್ಕೆ ಸಾಕ್ಷಿ. ಏಕೆಂದರೆ ಜನಪದರ ಚಿಕ್ಕ ಪುಟ್ಟ ದೇಗುಲಗಳು, ಕಲೆ, ಕಲಾತ್ಮಕ ಕಸುಬು ಸಂಸ್ಕೃತಿಯ ಅವಿಭಾಜ್ಯ ಅಂಗವೆಂದು ಅವರಿಗೆ ಗೊತ್ತಿತ್ತು. ಅಲ್ಲದೆ ಅವರು ಜಾರಿಗೆ ತಂದ ಆಶ್ರಯ ಯೋಜನೆ ನಿರ್ವಸತಿಗರಿಗೆ ತಲೆಯ ಮೇಲೊಂದು ಸೂರು ಕಲ್ಪಿಸಿತ್ತು. ವಿಧಿವಶರಾದ ಸಂದರ್ಭದಲ್ಲಿ ಬಂಗಾರಪ್ಪನವರು ಯಾವುದೇ ಅಧಿಕಾರದಲ್ಲಿರಲಿಲ್ಲ. ಆದರೂ ಪಕ್ಷಾತೀತವಾಗಿ, ಜಾತ್ಯಾತೀತವಾಗಿ ಅಪಾರ ಸಂಖ್ಯೆಯಲ್ಲಿ ಮೌನವಾಗಿ ಹರಿದು ಬಂದ ಜನಸ್ತೋಮ ಅಗಲಿದ ಕನಸುಗಾರ ನಾಯಕನಿಗೆ ಶ್ರದ್ಧಾಂಜಲಿ ಸಲ್ಲಿಸಿತು;ಇಡೀ ಕರ್ನಾಟಕ ಕಣ್ಣಿಂದ ತೊಟಕ್ಕನೆ ಧುಮುಕಿದ ಕಣ್ಣ ಹನಿಯೊಡನೆ ಬಂಗಾರಪ್ಪನವರನ್ನು ಬೀಳ್ಕೊಟ್ಟಿತು. ಬಂಗಾರಪ್ಪನವರ ಅಗಲಿದ ಆತ್ಮಕ್ಕೆ ನಮ್ಮ ಆಶ್ರುಪೂರ್ವಕ ಭಾಷ್ಪಾಂಜಲಿ.

**ಎಲ್ಲರಿಗೂ ಹೊಸ ವರ್ಷದ ಹಾಗೂ ಸಂಕ್ರಾಂತಿ ಹಬ್ಬದ ಹಾರ್ದಿಕ ಶುಭಾಶಯಗಳು.**

■ ಉಷಾ ಭರತಾದ್ರಿ

ಅಂತರಾಳದಿಂದ...

# ಹೊಸ ವರುಷದ ಹೊಸ್ತಿಲಲ್ಲಿ

ಹೊಸ ವರ್ಷವನ್ನು ಹೊಸ ಆಶಯಗಳೊಂದಿಗೆ ಆರಂಭಿಸಬೇಕು. ಮೊದಲಲ್ಲಿ ದೆಹಲಿಯ ಕನ್ನಡಿಗರೆಲ್ಲರಿಗೂ ಹೊಸ ವರ್ಷದ ಶುಭಾಶಯಗಳು. ಈ ಹೊಸ ವರ್ಷ ಎಲ್ಲರಿಗೂ ಹರುಷವನ್ನು ತರಲಿ ಎಂದು ಹಾರೈಸುತ್ತೇನೆ. ಈ ಹೊಸ ವರುಷದ ಹೊಸ್ತಿಲಲ್ಲಿ ಕಾಲಿಡುತ್ತಿರುವ ನಮಗೆ ಇನ್ನೊಂದು ಸಂತಸದ ಸಂಗತಿಯೆಂದರೆ ಪ್ರಸ್ತುತ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ತನ್ನ ಒಂದು ವರ್ಷದ ಕಾರ್ಯಾವಧಿಯನ್ನು ಮುಗಿಸಿ ಎರಡನೆಯ ವರ್ಷದ ಕಾರ್ಯಕಲಾಪಗಳ ಆಯೋಜನೆಯತ್ತ ಹೆಜ್ಜೆ ಹಾಕುತ್ತಿದೆ.

ಕಳೆದ ಒಂದು ವರ್ಷದ ಕಾಲಾವಧಿಯಲ್ಲಿ ದೆಹಲಿ ಕರ್ನಾಟಕ ಸಂಘವನ್ನು ಹಲವಾರು ಉಪಯುಕ್ತ ಚಟುವಟಿಕೆಗಳ ಹಾಗೂ ಕಾರ್ಯಕ್ರಮಗಳ ಬುಗ್ಗೆಯಾಗಿ ರೂಪಿಸುವ ಪ್ರಯತ್ನವನ್ನು ಕಾರ್ಯಕಾರಿ ಸಮಿತಿ ಮಾಡಿದೆ. ನಾನು ಈ ಎಲ್ಲ ಕಾರ್ಯಕ್ರಮಗಳ ಹಾಗೂ ಚಟುವಟಿಕೆಗಳ ಪಟ್ಟಿಯನ್ನು ಮಾಡಲು ಹೋಗುವುದಿಲ್ಲ. ಅದು ಈ ಪುಟ್ಟ ಲೇಖನದಲ್ಲಿ ಸಾಧ್ಯವೂ ಇಲ್ಲ. ಒಂದು ಮುಖ್ಯವಾದ ಮಾತೆಂದರೆ ನಾವು ದೆಹಲಿ ಕರ್ನಾಟಕ ಸಂಘವನ್ನು ತಮ್ಮೆಲ್ಲರ ಸಂಘವನ್ನಾಗಿ ಮಾಡುವತ್ತ ಸಫಲರಾಗಿದ್ದೇವೆಂದುಕೊಂಡಿದ್ದೇವೆ. ಕಾರ್ಯಕಾರಿ ಸಮಿತಿಗೆ ಸಂಘದ ಆಗುಹೋಗುಗಳನ್ನು ನಿಯಮಾವಳಿಗಳ ಪ್ರಕಾರ ನಿಯಂತ್ರಿಸುವ ಜವಾಬ್ದಾರಿಯಿದೆ.

ಆದರೆ ಸಂಘದ ಕಾರ್ಯಕ್ರಮಗಳಲ್ಲಿ...ಈ ಎಲ್ಲ ಚಟುವಟಿಕೆಗಳಲ್ಲಿ ಪ್ರೀತಿಯಿಂದ ಒಳಗೊಳ್ಳುವ ಕೆಲಸವನ್ನು ತಾವೆಲ್ಲರೂ ಮಾಡಿದ್ದೀರಿ. 'ಹೀಗಲ್ಲಾ ಹಾಗೆ ಮಾಡಿ' ಎಂಬ ನಲ್ಮೆಯ ಒತ್ತಾಸೆಯನ್ನು ನಮ್ಮೆಲ್ಲರ ಮೇಲೆ ತಂದು ದೆಹಲಿ ಕರ್ನಾಟಕ ಸಂಘ ವಿಶಿಷ್ಟವಾದ ಹಾಗೂ ಜನಪರವಾದ ಕಾರ್ಯಕ್ರಮಗಳನ್ನು ಉತ್ತಮವಾಗಿ ಆಯೋಜಿಸುವಂತೆ ಮಾಡಿದ್ದೀರಿ. ಅದಕ್ಕಾಗಿ ತಮಗೆಲ್ಲ ಹೃತ್ಪೂರ್ವಕವಾದ ಕ್ರತಜ್ಞತೆಗಳು. ಮುಂಬರುವ ದಿನಗಳಲ್ಲೂ ನಾವು ಈ ಬಗೆಯ ಪ್ರಯತ್ನಗಳಲ್ಲಿ ತೊಡಗಿಕೊಳ್ಳಲು ತಮ್ಮಿಂದ ಉತ್ಸಾಹದಾಯಕವಾದ ಪ್ರತಿಕ್ರಿಯೆ ದೊರೆಯಲಿ ಎಂದು ಹಾರೈಸುತ್ತೇವೆ.

ದೆಹಲಿ ಕರ್ನಾಟಕ ಸಂಘದ ಚಟುವಟಿಕೆಗಳಲ್ಲಿ ಮಕ್ಕಳಿಗೆ ಆದ್ಯತೆಯನ್ನು ಕೊಡುವುದರ ಬಗ್ಗೆ ನಾವು ಕಾಳಜಿವಹಿಸಿದ್ದೇವೆ. ಕನ್ನಡದ ತರಗತಿಗಳು ನಿರಂತರವಾಗಿ ನಡೆಯುತ್ತಿವೆ. ಮಕ್ಕಳಿಗಾಗಿಯೇ ಒಂದು ಕಾರ್ಯಕ್ರಮವನ್ನು ಆಯೋಜಿಸುವ ವಿಚಾರವಿದೆ. ಸಂಘದ ಸದಸ್ಯರ ಮಕ್ಕಳು ಹಲವಾರು ಸಾಂಸ್ಕ್ರತಿಕ ಚಟುವಟಿಕೆಗಳಲ್ಲಿ ಪರಿಣತಿ ಪಡೆದವರಾಗಿದ್ದಾರೆ. ನರ್ತನಪಟುಗಳು, ಗಾಯಕರು, ವಾದಕರು, ನಟರು...ಏನೆಲ್ಲ ಪರಿಣತಿಗಳು ಅವರ ಬಳಿಯಿವೆ? ಒಂದೆರಡು ದಿನಗಳ ಮಕ್ಕಳ ಮತ್ತು ಯುವ ಸಾಂಸ್ಕೃತಿಕ ಉತ್ಸವವನ್ನು ರೂಪಿಸಬಹುದು. ಚಿಣ್ಣರ ಹಾಗೂ ಯುವ ಪ್ರತಿಭೆಗಳಿಗೆ ಇದು ವೇದಿಕೆಯಾಗಬಹುದು.

ದೆಹಲಿಯಲ್ಲಿ ಮತ್ತು ದೆಹಲಿಯ ಸುತ್ತಮುತ್ತ ಹಲವಾರು ಕನ್ನಡಿಗರ ಹೋಟೆಲುಗಳು ಇವೆ. ದೆಹಲಿಯ ಬಾಂಧವರಿಗೆ ಕರ್ನಾಟಕದ ರುಚಿರುಚಿಯಾದ ತಿಂಡಿತಿನಿಸುಗಳನ್ನು ಉಣಬಡಿಸುವ ಕೆಲಸವನ್ನು ನೂರಾರು (ಅಲ್ಲ...ಸಾವಿರಾರು) ಜನ ಮಾಡುತ್ತಿದ್ದಾರೆ. ಅವರನ್ನೆಲ್ಲಾ ಕಲೆ ಹಾಕಿ ಸಂಘದ ಆವರಣದಲ್ಲಿ ಕರ್ನಾಟಕದ ವಿವಿಧ ಭಾಗಗಳ ಊಟತಿಂಡಿಗಳ ಸಮಾವೇಶವನ್ನು ಮಾಡಬಹುದು. ಉತ್ತಮ ಹೋಟೆಲುಗಳಿಗೆ, ಅತ್ಯುತ್ತಮ ತಿಂಡಿಗಳಿಗೆ ಬಹುಮಾನ ನೀಡಬಹುದು. ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವವರನ್ನು ಗುರುತಿಸಿ ಗೌರವಿಸಬಹುದು.

ಸಾವಿರಾರು ಜನ ಎಡತಾಕುವ ಡೆಲ್ಲಿಹಾತ್‌ನಲ್ಲಿ ಎಲ್ಲ ರಾಜ್ಯಗಳ ಊಟತಿಂಡಿಗಳ ಮಳಿಗೆಗಳಿವೆ. ಕರ್ನಾಟಕವನ್ನು ಪ್ರತಿನಿಧಿಸುವ ಯಾವ ಊಟತಿಂಡಿಯ ತಾಣವೂ ಅಲ್ಲಿಲ್ಲ. ಆಗಾಗ್ಗೆ ಕರ್ನಾಟಕದ ಕಲಾವಿದರು, ಕಸೂತಿಗಾರರು ಅಲ್ಲಿಗೆ ಬರುತ್ತಿರುತ್ತಾರೆ. ಕನ್ನಡದ ಹತ್ತಾರು ಶಬ್ದಗಳು ಕಿವಿಯ ಮೇಲೆ ಬೀಳುತ್ತಿರುತ್ತವೆ. ಬಂದವರಿಗೂ ಅಷ್ಟೇ ಕುತೂಹಲ. ಅಲ್ಲಿಗೆ ಕನ್ನಡದ ಬಾಂದವ್ಯ ಮುಗಿದು ಹೋಯಿತು. ಹಾಗಾಗದೆ ಕರ್ನಾಟಕದ ಛಾಪು ಉಳಿಯುವಂತೆ ಈ ಡೆಲ್ಲಿಹಾತ್‌ನಲ್ಲಿ ಏನಾದರೂ ಕೆಲಸವಾಗಬೇಕು. ಕರ್ನಾಟಕದ ಹೋಟೆಲ್‌ಗಳು ತಯರಾಗಬೇಕು. ಕರ್ನಾಟಕದ ಕುರಿತಾಗಿ ಉತ್ತರ ಭಾರತದ ಹಾಗೂ ಇಡೀ ಪ್ರಪಂಚದ ಪ್ರಚಾರ ಪಡೆಯಲು ಇದೊಂದು ವಿಶಿಷ್ಟವಾದ ಅವಕಾಶ. ಸರಕಾರ ಇದನ್ನು ಗಮನಿಸಬೇಕು. ಈ ದಿಶೆಯಲ್ಲಿ ಕರ್ನಾಟಕ ಸರಕಾರದೊಂದಿಗೆ ಸೇರಿ ಕೆಲಸ ಮಾಡಬೇಕಾಗಿದೆ.

ಇತ್ತೀಚೆಗೆ ಡಾ. ಮಾಧವ ಗಾಡಗೀಳರ ನೇತೃತ್ವದ ಸಮಿತಿಯೊಂದು ಪಶ್ಚಿಮ ಘಟ್ಟಗಳ ಕುರಿತಾಗಿ ವಿವರವಾದ ವರದಿಯನ್ನು ನೀಡಿದೆ. ಪಶ್ಚಿಮ ಘಟ್ಟಗಳ ಮೇಲೆ ಬೆಳವಣಿಗೆಯ ನೆಪದಲ್ಲಿ ಆಗುತ್ತಿರುವ ಆಕ್ರಮಣಗಳನ್ನು ಹೇಗೆ ತಡೆಹಿಡಿಯಬೇಕು ಎಂಬುದರ ಬಗ್ಗೆ ಅದು ಹಲವಾರು ಸಲಹೆಗಳನ್ನು ನೀಡಿದೆ. ಕರ್ನಾಟಕದ ಹತ್ತಾರು ಜಿಲ್ಲೆಗಳಲ್ಲಿ ಪಶ್ಚಿಮ ಘಟ್ಟಗಳು ಚಪ್ಪರದಂತೆ ಸುಂದರವಾಗಿ ಹಬ್ಬಿಕೊಂಡಿವೆ. ಕಾಡು-ಖನಿಜಗಳ ಹೊರತಾಗಿ ಕನ್ನಡದ ಜನಮನದ ಹಲವು ಸಾಂಸ್ಕೃತಿಕ ಪದರುಗಳು ಈ ಭಾಗದಲ್ಲಿ ತುಂಬಿಕೊಂಡಿವೆ. ಈ ಬೆಳವಣಿಗೆಯೆಂಬ ಪೆಡಂಭೂತ ಈ ಪದರುಗಳನ್ನು ನಿಧಾನವಾಗಿ ಕಬಳಿಸುತ್ತಿದೆ. ಪರಿಸರವೆಂದರೆ ಬರೀ ಕಾಡು-ಖನಿಜ-ಮರಗಿಡ-ಪಶುಪಕ್ಷಿಪ್ರಾಣಿಗಳು ಮಾತ್ರವಲ್ಲ. ಇಡೀ ಜನಸಮುದಾಯದ ಬದುಕು ಈ ಪರಿಸರದೊಂದಿಗೆ ಜತೆಜತೆಯಾಗಿದೆ. ಈ ವಿಚಾರಗಳ ಕುರಿತಾಗಿ ನಾವು ಚರ್ಚಿಸಬೇಕಾಗಿದೆ ಮತ್ತು ಈ ಪರಿಸರವನ್ನು ಕಾಪಾಡಿಕೊಳ್ಳುವುದರತ್ತ ಸಹಾಯಹಸ್ತವನ್ನು ನೀಡಬೇಕಾಗಿದೆ. ಈ ಕುರಿತಾಗಿ ಸಂಘದ ಅಶ್ರಯದಲ್ಲಿ ಚರ್ಚೆಗೆ ಅನುವು ಮಾಡಿಕೊಳ್ಳಬೇಕಿದೆ.

ರಾಷ್ಟ್ರದ ರಾಜಧಾನಿ ನವದೆಹಲಿಯ ಹಲವು ಸುಂದರ ರಸ್ತೆಗಳಿಗೆ ಬೇರೆಬೇರೆ ರಾಜ್ಯಗಳ ಹಾಗೂ ದೇಶದ ಗಣ್ಯವ್ಯಕ್ತಿಗಳ ಹೆಸರನ್ನು ಇರಿಸಲಾಗಿದೆ. ಕರ್ನಾಟಕದ ಮಹನೀಯರುಗಳ ಹೆಸರು ಮಾತ್ರ ಎಲ್ಲೂ ಕಾಣುವುದಿಲ್ಲ. ಯಾಕೆ ಹೀಗೆ? ಎಲ್ಲೋ ಮೂಲೆಯಲ್ಲಿ ಯಾರದ್ದಾದರೂ ಹೆಸರು ಇದ್ದರೂ ಇರಬಹುದು. ಆದರೆ ಅದರಿಂದ ಆಗುವ ಪ್ರಯೋಜನವೇನು? ಬೇರೆ ರಾಜ್ಯಗಳಿಗೆ ಹೋಲಿಸಿದರೆ ಒಂದು ಬಗೆಯ ತಾರತಮ್ಯವೇ ಗೋಚರವಾಗುತ್ತದೆ. ಅಥವಾ ನಮ್ಮ ದೆಹಲಿಯಲ್ಲಿನ ಕನ್ನಡದ ರಾಜಕೀಯ ಶಕ್ತಿಗಳು ಈ ದಿಶೆಯಲ್ಲಿ ಯೋಚಿಸಲಿಲ್ಲವೇ? ರಸ್ತೆಗಳಿಗೆ ಹೆಸರಿಸುವುದು ಏನು ಮಹಾ? ಎಂಬ ಪ್ರಶ್ನೆಯನ್ನು ನಾವು ಕೇಳಿಕೊಂಡು ಸುಮ್ಮನಾಗಿ ಬಿಡಬಹುದು. ಆದರೆ, ಈ ಬಗೆಯ ಸಂಕೇತಗಳಿಗೆ ಅದರದ್ದೇ ಆದ ಸಾಧ್ಯತೆಗಳಿವೆ. ಅವನ್ನು ಗಮನಿಸಿ ನಾವು ಈ ದಿಶೆಯಲ್ಲಿ ಪ್ರಯತ್ನಶೀಲರಾಗಬೇಕಾಗಿದೆ.

ಹೀಗೆ ಹತ್ತು ಹಲವಾರು ವಿಚಾರಗಳು ಮನದಲ್ಲಿ ಮೂಡಿ ಬರುತ್ತಿವೆ. ಎಲ್ಲವನ್ನೂ ಮಾಡಲು ಸಾಧ್ಯವೇ ಎಂಬ ಭಾವವೂ ಇದೆ. ಆದರೆ ಈ ಆಶಯಗಳು ನಮ್ಮನ್ನು ಹಿಡಿದಿಡುತ್ತವೆ. ಒಂದು ಬಗೆಯ ಸಂತಸ ಹಾಗೂ ಉತ್ಸಾಹವನ್ನು ನೀಡುತ್ತದೆ. ನಮ್ಮ ಅಸ್ಥಿತ್ವದ ಭಾಗವಿದು. ಹೀಗಾಗಿ ಈ ಬಗೆಯ ಆಶಯಗಳಿಗೆ ಬೆಲೆ, ವೇಳೆ ಹಾಗೂ ರಾಜಕೀಯ ಬಂಧಗಳನ್ನು ಹಾಕಲಾಗದು. ಪೀಳಿಗೆಯಿಂದ ಪೀಳಿಗೆಗಳಿಗೆ ಈ ಆಶಯಗಳು ಸಾಗಿಕೊಂಡು ಬಂದಿವೆ. ಹೀಗೆ ಸಾಗಿಕೊಂಡು ಹೋಗದೆ ಇರುವ ಹಾಗೆ ನೋಡಿಕೊಳ್ಳುವ ಎಚ್ಚರವೂ ನಮ್ಮದಾಗಬೇಕಾಗಿದೆ.

■ ವೆಂಕಟಾಚಲ ಹೆಗಡೆ

### ಅಂಬಿಕೇಶ್ ಮೆಮೋರಿಯಲ್ ಕ್ರಿಕೆಟ್ ಪಂದ್ಯಾವಳಿ

ದೆಹಲಿ ಕರ್ನಾಟಕ ಸಂಘ ಆಯೋಜಿಸುವ ಅಂಬಿಕೇಶ್ ಮೆಮೋರಿಯಲ್ ಕ್ರಿಕೆಟ್ ಪಂದ್ಯಾವಳಿಯು ಫೆಬ್ರವರಿ 4,5 ಮತ್ತು 11, 2012ರಂದು ನಡೆಯಲಿದೆ.

ಸ್ಥಳ : ಫೆಬ್ರವರಿ 4, 5 ಮತ್ತು 11, 2012-ಸಿವಿಲ್ ಸರ್ವೀಸಸ್ ಅಥಾರಿಟಿ ಗ್ರೌಂಡ್ಸ್, ವಿನಯ್ ಮಾರ್ಗ-ನೆಹರು ಪಾರ್ಕ್ ಸಮೀಪ.

ಹೆಚ್ಚಿನ ವಿವರಗಳಿಗೆ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ : 26109615 / 65643615

## ಮುನ್ನೋಟ

ದೆಹಲಿ ಕರ್ನಾಟಕ ಸಂಘದ ಎಲ್ಲಾ ಸದಸ್ಯರುಗಳಿಗೂ ಹಾಗೂ ನಮ್ಮ ಎಲ್ಲಾ ಕನ್ನಡಿಗರಿಗೂ ಹೊಸ ವರ್ಷದ ಹಾಗೂ ಸಂಕ್ರಾಂತಿಯ ಶುಭಾಶಯಗಳು.

ಡಿಸೆಂಬರ್ ತಿಂಗಳ ಕೊನೆಯಲ್ಲಿ ಸಂಘದಲ್ಲಿ ಎರಡು ಅದ್ಭುತ ಕಾರ್ಯಕ್ರಮಗಳು ನಡೆಯಿತು. ಸಂಘದ ಹಿರಿಯ ಸದಸ್ಯರಾದ ಎಂ. ಡಿ. ಬೀಳಗಿ ಅವರ 'ಏಜೆಂಟ್ ಕೋಬ್ರಾ' ಪುಸ್ತಕ ಬಿಡುಗಡೆ ಸಮಾರಂಭ ಜೊತೆಗೆ ಕ್ಷೀರಸಾಗರ ಮಿತ್ರಕೂಟ, ಮಂಡ್ಯ ಅವರ 'ಮೈಲಾರ ಮಹಾದೇವ' ನಾಟಕ. ಮೈಲಾರ ಮಹದೇವ ನಾಟಕ ಕಾರ್ಯಕ್ರಮವನ್ನು ಉದ್ಘಾಟಿಸಿದ ಮಂಡ್ಯದ ಶಾಸಕರಾದ ಶ್ರೀ ಶ್ರೀನಿವಾಸರವರಿಗೆ ಸಂಘದ ಪರವಾಗಿ ಧನ್ಯವಾದಗಳು.

ಹೊಸ ವರ್ಷದಲ್ಲಿ ಮಕರ ಸಂಕ್ರಾಂತಿಯ ಶುಭದಿನಂದು ನಡೆಯಲಿರುವ ಮೊದಲನೆಯ ಕಾರ್ಯಕ್ರಮ ದೆಹಲಿ ಕರ್ನಾಟಕ ಸಂಘ ಹಾಗೂ ಗಡಿನಾಡ ಕನ್ನಡಿಗರ ಮಾಸ ಪತ್ರಿಕೆ ಕನ್ನಡ ಕೈರಳಿ ಜೊತೆಯಾಗಿ ಆಚರಿಸುವ ದೆಹಲಿ-ಕಾಸರಗೋಡು ಉತ್ಸವ-2012. ಎರಡನೆಯದಾಗಿ ದೆಹಲಿ ಕರ್ನಾಟಕ ಸಂಘ ಹಾಗೂ ಸಾಹಿತ್ಯ ಅಕಾಡೆಮಿ ಸಂಯುಕ್ತವಾಗಿ ಹಮ್ಮಿಕೊಂಡಿರುವ ಗೌರೀಶ್ ಕಾಯ್ಕಿಣಿಯವರ ಜನ್ಮಶತಮಾನೋತ್ಸವ ಕಾರ್ಯಕ್ರಮ ಜನವರಿ 21 ಮತ್ತು 22ರಂದು ನಡೆಯಲಿದೆ.

21ರಂದು ಬೆಳಿಗ್ಗೆ 8ರಿಂದ 2ಗಂಟೆಯವರೆಗೆ ಪ್ರಸಿದ್ಧ ಮ್ಯಾಕ್ಸ್ ಹಾಸ್ಪಿಟಲ್‌ನವರು ನಮ್ಮ ಎಲ್ಲಾ ಕನ್ನಡದ ಮಹಿಳೆಯರಿಗೆ ಆದಿನ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಿದ್ದು ಅದರಲ್ಲಿ ಇ.ಸಿ.ಜಿ., ಬ್ಲಡ್ ಶುಗರ್, ಬಿ.ಪಿ. ಚೆಕ್‌ಅಪ್ ಮುಂತಾದ ತಪಾಸಣಾ ಕಾರ್ಯಕ್ರಮಗಳು ನಡೆಯಲಿದೆ. ದಯಮಾಡಿ ಈ ಶಿಬಿರದಲ್ಲಿ ಪಾಲ್ಗೊಳ್ಳಿ.

22ರಂದು ಗೌರೀಶ್ ಕಾಯ್ಕಿಣಿ ಜನ್ಮಶತಮಾನೋತ್ಸವ ಕಾರ್ಯಕ್ರಮದ ಅಂಗವಾಗಿ 8ನೇ ಜ್ಞಾನ ಪೀಠಪ್ರಶಸ್ತಿ ಪುರಸ್ಕೃತ ಡಾ. ಚಂದ್ರಶೇಖರ ಕಂಬಾರ ಅವರು ರಚಿಸಿದ ನಾಟಕ 'ಸಾಂಬಶಿವ ಪ್ರಹಸನ' ನಡೆಯಲಿದೆ. ಹಾಗೂ ಡಾ. ಚಂದ್ರಶೇಖರ ಕಂಬಾರ ಅವರನ್ನು ಅಭಿನಂದಿಸಲಾಗುವುದು.

ಅಮೆರಿಕದ ಬಾಸ್ಟನ್‌ನಲ್ಲಿ ನವರಸ್ ಡಾನ್ಸ್ ಥಿಯೇಟರ್ ಕಂಪೆನಿಯ ನಿರ್ದೇಶಕರಾಗಿರುವ ಪ್ರಖ್ಯಾತ ನೃತ್ಯಗಾರ್ತಿ ಅಪರ್ಣಾ ಸಿಂಧೂರ್ ಅವರ ನೃತ್ಯ ಕಾರ್ಯಕ್ರಮವನ್ನು ಜನವರಿ 29ಕ್ಕೆ ಆಯೋಜಿಸಲಾಗಿದೆ.

ಪ್ರತಿವರ್ಷದಂತೆ ಸಂಘದ ಆಟೋಟ ಸ್ಪರ್ಧೆಗಳು ಈ ಬಾರಿ ನಡೆಯಲಿವೆ. ಮೊದಲಿಗೆ ಅಂಬಿಕೇಶ್ ಮೆಮೋರಿಯಲ್ ಕ್ರಿಕೆಟ್ ಪಂದ್ಯಾವಳಿ ಫೆಬ್ರವರಿ 4, 5 ಮತ್ತು 11ರಂದು ನಡೆಯಲಿದ್ದು, ಎಲ್ಲಾ ಕ್ರಿಕೆಟ್ ಪ್ರೇಮಿಗಳು ಜನವರಿ 20ರ ಒಳಗಾಗಿ ತಮ್ಮ ತಂಡವನ್ನು ನೊಂದಾಯಿಸಬೇಕಾಗಿ ವಿನಂತಿ. ವಾರ್ಷಿಕೋತ್ಸವವು ಫೆಬ್ರವರಿ 26ರಂದು ನಡೆಯಲಿದೆ. ಬನ್ನಿ ಎಲ್ಲರೂ ಕೂಡಿ ಕ್ರಿಕೆಟ್ ಹಾಗೂ ಆಟೋಟ ಸ್ಪರ್ಧೆಗಳನ್ನು ಅದ್ದೂರಿಯಿಂದ ಯಶಸ್ವಿಗೊಳಿಸೋಣ.

■ ಸಿ.ಎಂ. ನಾಗರಾಜ

---

# ದೆಹಲಿ ಕರ್ನಾಟಕ ಸಂಘ *ಹಾಗೂ* ಕನ್ನಡ ಕೈರಳಿ

**(ಗಡಿನಾಡ ಕನ್ನಡಿಗರ ಮಾಸಿಕ ಪತ್ರಿಕೆ)**

**ಸಂಯುಕ್ತವಾಗಿ ಆಯೋಜಿಸುವ**

## ದೆಹಲಿ-ಕಾಸರಗೋಡು ಉತ್ಸವ-2012

**14.01.2012, ಶನಿವಾರ ಮಧ್ಯಾಹ್ನ 3.00ರಿಂದ**

**ಸ್ಥಳ : ಸಂಘದ ಸಭಾಂಗಣ**

ಮಧ್ಯಾಹ್ನ 3.00ಕ್ಕೆ ಕನ್ನಡ ಚಲನಚಿತ್ರ **'ಕವಳ'**
ನಿರ್ದೇಶನ : ಕಿರಣ್‌ರಾಜ್ ಕೆ.ಕಾಸರಗೋಡು

ಸಂಜೆ 4.30ಕ್ಕೆ **'ಬೊಂಬೆಯಾಟ'**
ಶ್ರೀ ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘ, ಕಾಸರಗೋಡು
(ಕರ್ನಾಟಕ ರಾಜ್ಯೋತ್ಸವ-2010 ಪ್ರಶಸ್ತಿ ಪುರಸ್ಕೃತರು)

ಸಂಜೆ 5.30ಕ್ಕೆ **ಉದ್ಘಾಟನೆ**

ಸ್ವಾಗತ ಮತ್ತು ಪ್ರಾಸ್ತಾವಿಕ : ಶ್ರೀ ರವಿ ನಾಯ್ಕ್
ವ್ಯವಸ್ಥಾಪಕ ಸಂಪಾದಕರು, ಕನ್ನಡ ಕೈರಳಿ

ಅಧ್ಯಕ್ಷತೆ : ಡಾ.ವೆಂಕಟಾಚಲ ಹೆಗಡೆ,
ಅಧ್ಯಕ್ಷರು, ದೆಹಲಿ ಕರ್ನಾಟಕ ಸಂಘ

ಉದ್ಘಾಟನೆ : ಸನ್ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆ
ಮಾನ್ಯ ಕಾರ್ಮಿಕ ಮತ್ತು ಸಮಾಜ ಕಲ್ಯಾಣ ಸಚಿವರು, ಭಾರತ ಸರ್ಕಾರ

### ಮುಖ್ಯ ಅತಿಥಿಗಳು

**ಶ್ರೀ ವಿ. ಧನಂಜಯ ಕುಮಾರ್,** ವಿಶೇಷ ಪ್ರತಿನಿಧಿಗಳು, ಕರ್ನಾಟಕ ಸರ್ಕಾರ
**ಶ್ರೀ ಎನ್.ಬಿ. ಅಬೂಬಕರ್,** ಅಧ್ಯಕ್ಷರು, ಕೆ.ಎಮ್.ಡಿ.ಸಿ. ಬೆಂಗಳೂರು
**ಶ್ರೀ ಬೈಕೆರೆ ನಾಗೇಶ್,** ಹೆಚ್ಚುವರಿ ವಿಶೇಷ ಪ್ರತಿನಿಧಿಗಳು, ಕರ್ನಾಟಕ ಸರ್ಕಾರ, ನವದೆಹಲಿ
**ಶ್ರೀ ಕೆ.ವಿ.ಆರ್. ಟ್ಯಾಗೋರ್,** ನಿವೃತ್ತ ಡಿಜಿಪಿ, ಕರ್ನಾಟಕ ಸರ್ಕಾರ
**ಡಾ.ಮುದ್ದುಮೋಹನ್,** ನಿರ್ದೇಶಕರು, ವಾರ್ತಾ ಇಲಾಖೆ, ಬೆಂಗಳೂರು
**ಶ್ರೀ ಕೆ.ಎನ್. ಜಯರಾಜ್,** ಪ್ರಧಾನ ಕಾರ್ಯದರ್ಶಿ, ಮಾನವ ಹಕ್ಕುಗಳ ಪ್ರತಿಷ್ಠಾನ, ನವದೆಹಲಿ

### ಸಾಧಕ ರತ್ನ ಪ್ರಶಸ್ತಿ ಪ್ರದಾನ

**ಶ್ರೀ ಇ.ಎ. ಅಹಮದ್**
ಮಾನ್ಯ ವಿದೇಶಾಂಗ ವ್ಯವಹಾರಗಳ ಖಾತೆ ರಾಜ್ಯ ಸಚಿವರು ಭಾರತ ಸರ್ಕಾರ,
ಹಾಗೂ
**ಶ್ರೀ ಅಮರೀಶ್ ಸಿಂಗ್ ಗೌತಮ್**
ಮಾನ್ಯ ದೆಹಲಿ ಸರಕಾರದ ಡೆಪ್ಯುಟಿ ಸ್ಪೀಕರ್, ಅವರಿಂದ

### ಕನ್ನಡ ಕೈರಳಿ ಪತ್ರಿಕೆಯ ವಿಶೇಷ ಸಂಚಿಕೆಯ ಬಿಡುಗಡೆ

**ಶ್ರೀ ಆಸ್ಕರ್ ಫರ್ನಾಂಡೀಸ್**
ಮಾನ್ಯ ರಾಜ್ಯಸಭಾ ಸದಸ್ಯರು ಮತ್ತು ಎ.ಐ.ಸಿ.ಸಿ. ಪ್ರಧಾನ ಕಾರ್ಯದರ್ಶಿಗಳು

ವಂದನಾರ್ಪಣೆ : **ಶ್ರೀ ಎಂ.ಉಮೇಶ್ ಸಾಲಿಯಾನ್**
ಸಂಪಾದಕ ಮಂಡಳಿಯ ಸದಸ್ಯರು, ಕನ್ನಡ ಕೈರಳಿ

ನಿರ್ವಹಣೆ : **ಪ್ರೊ.ರತ್ನಾಕರ ಮಲ್ಲಮೂಲೆ**

ಸಂಜೆ : 6.30ಕ್ಕೆ **ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ**

**ಡಾ. ಮುದ್ದುಮೋಹನ್ ಅವರಿಂದ**
(ಪದ್ಮಭೂಷಣ ಡಾ.ಬಸವರಾಜ್ ರಾಜ್‌ಗುರು ಅವರ ಶಿಷ್ಯ)

## ತಮಗೆಲ್ಲರಿಗೂ ಆದರದ ಸ್ವಾಗತ

**ಸಿ.ಎಂ. ನಾಗರಾಜ**
ಪ್ರಧಾನ ಕಾರ್ಯದರ್ಶಿ ದೆ.ಕ.ಸಂ

**ಅಬ್ದುಲ್ ರೆಹಮಾನ್ ಸುಬ್ಬಯ್ಯ ಕಟ್ಟೆ**
ಸಂಪಾದಕರು, ಕನ್ನಡ ಕೈರಳಿ

**ಕಾರ್ಯಕ್ರಮದ ನಂತರ ಊಟದ ವ್ಯವಸ್ಥೆ ಮಾಡಲಾಗಿದೆ**

# ತಂಪಿನ ಸಂಜೆಗೆ ಇಂಪಿನ ಗಾನ–ಸ್ಮಿತಾ ಬೆಳ್ಳೂರ್




ನವೆಂಬರ್ ತಿಂಗಳಿಡೀ ದೆಹಲಿ ಕರ್ನಾಟಕ ಸಂಘದಲ್ಲಿ ಬಿಡುವಿಲ್ಲದ ಕಾರ್ಯಕ್ರಮಗಳು. ರಾಜ್ಯೋತ್ಸವದ ಸಂಭ್ರಮದಲ್ಲಿ ನಲಿದಾಡಿದ ದೆಹಲಿ ಕನ್ನಡಿಗರಿಗೆ ಡಿಸೆಂಬರ್ 4, ಭಾನುವಾರ ಸಂಜೆ ಖ್ಯಾತ ಹಿಂದುಸ್ತಾನಿ ಖಯಾಲ್ ಗಾಯಕಿ ಸ್ಮಿತಾ ಬೆಳ್ಳೂರ್ ಅವರ ಸುಮಧುರ ಕಂಠದಲ್ಲಿ ದಾಸ–ಸೂಫಿ–ವಚನ ಗಾನಲಹರಿಯನ್ನು ಆಸ್ವಾದಿಸುವ ಮತ್ತೊಂದು ಸದವಕಾಶ ಲಭಿಸಿತ್ತು. ವೈಯಕ್ತಿಕ ಕಾರ್ಯ ನಿಮಿತ್ತ ದೆಹಲಿಗೆ ಆಗಮಿಸಿದ ಸ್ಮಿತಾ ಬೆಳ್ಳೂರ್ ಅವರು ಕನ್ನಡಿಗರ ಕೋರಿಕೆಯನ್ನು ಪ್ರೀತಿಯಿಂದ ಒಪ್ಪಿ 'ದಾಸ–ಸೂಫಿ–ವಚನ' ಗಾಯನದ ಸವಿಯನ್ನು ಪರಿಚಯಿಸಿದರು. ಗಣೇಶ ಸ್ತುತಿಯಿಂದ ಆರಂಭಿಸಿ, ಶಿಶುನಾಳ ಶರೀಫ್, ಅಕ್ಕನ ವಚನ, ವಿಜಯ ವಿಠಲ ದಾಸರ ಪದ, ಖ್ಯಾತ ಸೂಫಿ ಸಂತ ಅಮೀರ್ ಖುಸ್ರೋನ 'ಮನ ಕುಂತೋ ಮೌಲಾ' ಹಾಗೂ ಚಾಪ ತಿಲಕ, ಹಾಗೂ ಈಗಾಗಲೇ ನಾಡಿನಾದ್ಯಂತ, ದೇಶದಾದ್ಯಂತ ಹೆಸರುಗಳಿಸಿರುವ ಸ್ಮಿತಾ ಅವರ ಪಾಂಡಿತ್ಯದ ವೈಶಿಷ್ಟ್ಯ ಇರುವುದೇ ದಾಸ–ಸೂಫಿ– ವಚನ ಗಾಯನದಲ್ಲಿ. ಭಕ್ತಿಗಾನದಲ್ಲಿ ದಾಸ ಮತ್ತು ವಚನಗಳೊಡನೆ ಸೂಫಿ ಗಾನವನ್ನು ಮೇಳೈಸಿದ ಸಂಗೀತದ ರಸಾನುಭೂತಿ, ನಾದದ ಮಾಂತ್ರಿಕತೆಯನ್ನು ಅನುಭವಿಸಿಯೇ ಅರಿಯಬೇಕು. ಸ್ಮಿತಾ ಅವರ ಅಮೋಘ ಗಾಯನ ನಿಜಕ್ಕೂ ಮನಸೂರೆಗೊಂಡಿತ್ತು. ಕನಕ ದಾಸರ ಪದವನ್ನು ಹಾಡುವುದರ ಮೂಲಕ ಗಾನ ಸಂಜೆಯನ್ನು ಅರ್ಥಪೂರ್ಣಗೊಳಿಸಿದರು. ತಮ್ಮ ಹನ್ನೆರಡನೇ ವಯಸ್ಸಿನಲ್ಲೇ ಆರಂಭದ ಸಂಗೀತದ ಅಭ್ಯಾಸವನ್ನು ನಾಟಕ ಅಕಾಡೆಮಿ ಪ್ರಶಸ್ತಿ ವಿಜೇತ ಹೆಸರಾಂತ ಸಂಗೀತ ಗುರು ಪಿ.ಆರ್. ಭಾಗವತ, ನಂತರ ಗ್ವಾಲಿಯರ್‌ನ ಕಿರಾನಾ ಘರಾನಾದ 'ಸಂಗೀತ ರತ್ನ' ಪಂಡಿತ ಅರ್ಜುನಸಾ ನಾಕೋಡ ಅವರ ಶಿಷ್ಯೆಯಾಗಿ ಸಂಗೀತದಲ್ಲಿ ಪರಿಣತಿ ಹೊಂದಿದ ಸ್ಮಿತಾ ಪ್ರಸ್ತುತ ಡಾ.ಅಲಕಾ ಡಿಯೋ ಮರುಲ್ಕರ್ ಅವರಲ್ಲಿ ತಾಲೀಮು ಪಡೆಯುತ್ತಿದ್ದಾರೆ.

ದೆಹಲಿಯ ಹಿರಿಯ ಕನ್ನಡಿಗ ಬಸವರಾಜ ಕಲ್ಲೂರ ಅವರು ಪುಷ್ಪಗುಚ್ಛ ನೀಡಿ ಸ್ಮಿತಾ ಬೆಳ್ಳೂರ್ ಅವರನ್ನು ಅಭಿನಂದಿಸಿದರು. ಪಕ್ಕವಾದ್ಯದಲ್ಲಿ ದೆಹಲಿಯ ಕಲಾವಿದರಾದ ಜಾವೀದ್ ಮತ್ತು ಅಮೀರ್ ಖಾನ್ ಸಮರ್ಥ ಸಾಥ್ ನೀಡಿದರು. ದೆಹಲಿ ಕರ್ನಾಟಕ ಸಂಘ ಮತ್ತು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಸ್ಮಿತಾ ಅವರು ಸಂಗೀತ ಸಾಧನೆಯಲ್ಲಿ ಇನ್ನಷ್ಟು ಯಶಸ್ಸು ಗಳಿಸಲಿ, ಅನೇಕ ಪ್ರಶಸ್ತಿಗಳು, ಸನ್ಮಾನಗಳು ಅವರನ್ನು ಅರಸಿಕೊಂಡು ಬರಲಿ ಎಂದು ಹಾರೈಸುತ್ತೇವೆ.

# ದೆಹಲಿ ಕರ್ನಾಟಕ ಸಂಘದಲ್ಲಿ "ಏಜೆಂಟ್ ಕೋಬ್ರಾ" ಕೃತಿ ಬಿಡುಗಡೆ

ಬಿಜಾಪುರದ ಲೇಖಕ ಮಧು ಬೀಳಗಿ ಅವರ ರೋಮಾಂಚಕಾರಿ ಹಾಗೂ ರೋಚಕ ಕಾದಂಬರಿ "ಏಜೆಂಟ್ ಕೋಬ್ರಾ" ಕೃತಿಯನ್ನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ.ವೆಂಕಟಾಚಲ ಹೆಗಡೆ ಅವರು ಡಿಸೆಂಬರ್ 18ರಂದು ಬಿಡುಗಡೆ ಮಾಡಿದರು. ಲೇಖಕ ಮಧು ಬೀಳಗಿ ಅವರ ಆಪ್ತ ಒಡನಾಡಿ ದೆಹಲಿಯ ಹಿರಿಯ ಕನ್ನಡಿಗ ಸುಧಾಕರ ಕುರಂದವಾಡ ಅವರು ಲೇಖಕರನ್ನು ಪರಿಚಯಿಸಿದರು. "ಭಾರತೀಯ ಸೇನಾ ಪಡೆಯಲ್ಲಿ 32 ವರ್ಷ ಸಕ್ರಿಯ ಸೈನಿಕರಾಗಿ ಸೇವೆ ಸಲ್ಲಿಸಿದ ಬೀಳಗಿ ಅವರು 1971ರ ಭಾರತ–ಪಾಕಿಸ್ತಾನ ಯುದ್ಧದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಅಲ್ಲದೆ ದೆಹಲಿ ಕರ್ನಾಟಕ ಸಂಘದ ಹಳೆಯ ಕಟ್ಟಡದ ಶಂಕು ಸ್ಥಾಪನೆಯಲ್ಲಿ ಭಾಗಿಯಾಗಿದ್ದರು" ಎಂದು ಅವರ ದೆಹಲಿ ವಾಸ್ತವ್ಯದ ಕುರಿತು ಕಿರು ಪರಿಚಯ ನೀಡಿದರು. ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆ ಹಾಗೂ ಅಭಿಮತ ಪತ್ರಿಕೆಯ ಪ್ರಧಾನ ಸಂಪಾದಕಿ ಶ್ರೀಮತಿ ಉಷಾ ಭರತಾದ್ರಿಯವರು ಕೃತಿಯ ಕಿರುನೋಟ ನೀಡಿದರು. "32 ವರ್ಷಗಳ ಸೈನ್ಯ ಪಡೆಯಲ್ಲಿನ ಲೇಖಕರ ಅನುಭವ ಕೃತಿಯಲ್ಲಿ ಅತ್ಯಂತ ಸಮರ್ಪಕವಾಗಿ ಮೂಡಿ ಬಂದಿದೆ. ವಿಸ್ಮಯಕಾರಿ ವಿಶಿಷ್ಟ ಶೈಲಿಯ ಘಟನಾವಳಿಗಳು ರೋಮಾಂಚಕ ಅನುಭವ ನೀಡುವುದರ ಜೊತೆಗೆ ಓದುಗರ ಕುತೂಹಲವನ್ನು ಕೊನೆಯವರೆಗೂ ಕಾಯ್ದಿಟ್ಟುಕೊಳ್ಳುವಲ್ಲಿ ಯಶಸ್ವಿಯಾಗಿದೆ ಹಾಗೂ ಉತ್ತರ ಕರ್ನಾಟಕ ಭಾಷೆಯ ಸೊಗಡು ಕೃತಿಗೆ ಮೆರಗು ತಂದಿದೆ" ಎಂದು ನುಡಿಯುತ್ತಾ ದೆಹಲಿ ಕರ್ನಾಟಕ ಸಂಘದಲ್ಲಿ ಕೃತಿಯನ್ನು ಬಿಡುಗಡೆ ಮಾಡಿದ್ದಕ್ಕಾಗಿ ಬೀಳಗಿ ಅವರನ್ನು ಹಾರ್ದಿಕವಾಗಿ ಅಭಿನಂದಿಸಿದರು.


ಕೃತಿಯನ್ನು ಬಿಡುಗಡೆ ಮಾಡಿದ ಡಾ.ವೆಂಕಟಾಚಲ ಹೆಗಡೆಯವರು "ಸೈನ್ಯದ ಸುದೀರ್ಘ ಅನುಭವದ ಛಾಪು ಕೃತಿಯಲ್ಲಿ ಪ್ರಮುಖವಾಗಿದೆ. ಕಥಾನಾಯಕ ಐ.ಎ.ಎಸ್. ಬಿಟ್ಟು ಬೇಹುಗಾರಿಕೆ ವೃತ್ತಿಯತ್ತ ತೋರಿಸುವ ಒಲವು ಲೇಖಕರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಂತಿದೆ. ಸೊಗಸಾದ ನಿರೂಪಣೆಯೊಡನೆ ರೋಚಕ ಸನ್ನಿವೇಶಗಳ ಮೂಲಕ ಓದುಗರನ್ನು ಕಲ್ಪನಾ ಲೋಕಕ್ಕೆ ಕೊಂಡೊಯ್ಯುತ್ತಾರೆ" ಎನ್ನುತ್ತಾ ಮುಂಬರುವ ದಿನಗಳಲ್ಲಿ ಬೀಳಗಿ ಅವರು ತಮ್ಮ ಸೈನ್ಯದ ದಟ್ಟ ಅನುಭವಗಳನ್ನು ಬರೆಯುವುದರ ಮೂಲಕ ಸಾಹಿತ್ಯ ಲೋಕಕ್ಕೆ ಅದ್ಭುತ ಕೊಡುಗೆ ನೀಡುವಂತಾಗಲಿ ಎಂದು ಶುಭ ಹಾರೈಸಿದರು.

ಲೇಖಕ ಬೀಳಗಿ ಅವರು ಸೇವಾ ನಿವೃತ್ತಿಯ ನಂತರ ತಮ್ಮ ಬರವಣಿಗೆ ಪ್ರಾರಂಭಿಸಿದ ಅನುಭವವನ್ನು ಹಂಚಿಕೊಂಡರು. "ಕನ್ನಡ ನಾಡು, ನುಡಿ, ಸಾಹಿತ್ಯದಿಂದ ಬಹುಕಾಲ ದೂರವಿದ್ದ ನನಗೆ ಕೃತಿ ರಚನೆ ಪ್ರಾರಂಭದಲ್ಲಿ ಕಷ್ಟವೆನಿಸಿದರೂ ನಂತರದಲ್ಲಿ ಮನಸ್ಸಿನ ವಿಚಾರಧಾರೆ ಹೊಳೆಯುತ್ತಾ ಸಾಗಿತು. ನನ್ನ ಕೃತಿಯನ್ನು ನನ್ನ ಮನೆಯಂತಿರುವ ದೆಹಲಿ ಕರ್ನಾಟಕ ಸಂಘದಲ್ಲಿಯೇ ಬಿಡುಗಡೆ ಮಾಡಬೇಕೆಂಬ ನನ್ನ ಆಸೆ ಈಡೇರಿದೆ ಹಾಗೂ ತೃಪ್ತಿ ತಂದಿದೆ" ಎಂದು ಸಂತಸ ವ್ಯಕ್ತಪಡಿಸುತ್ತಾ ದೆಹಲಿ ಕನ್ನಡಿಗರಿಗೆ ವಂದಿಸಿದರು. ನವಲೇಖಕರು ಹಾಗೂ ಪ್ರಕಾಶಕರ ದುಸ್ಥಿತಿಯ ಅನುಭವವನ್ನು ನೆರೆದಿದ್ದ ಸಭಿಕರೊಡನೆ ಹಂಚಿಕೊಂಡರು.

ಸಂಘದ ಜಂಟಿ ಕಾರ್ಯದರ್ಶಿ ಶ್ರೀಮತಿ ರೇಣುಕಾ ನಿಡಗುಂದಿ ಕಾರ್ಯಕ್ರಮ ನಿರೂಪಿಸಿದರು ಹಾಗೂ ಕಾರ್ಯದರ್ಶಿ ಶ್ರೀ ಸಿ.ಎಂ.ನಾಗರಾಜ ವಂದಿಸಿದರು.

■ ಉಷಾ ಭರತಾದ್ರಿ

*(ಏಜೆಂಟ್ ಕೋಬ್ರಾ ಕೃತಿಯನ್ನು ದೆಹಲಿ ಕನ್ನಡಿಗರಿಗಾಗಿ ವಿಶೇಷ ರಿಯಾಯ್ತಿ ರೂ.100/–ಗೆ ದೆಹಲಿ ಕರ್ನಾಟಕ ಸಂಘದಲ್ಲಿ ಮಾರಾಟಕ್ಕೆ ಇಡಲಾಗಿದೆ. ಸಾಹಿತ್ಯಾಸಕ್ತರು ಹೆಚ್ಚಿನ ವಿವರಗಳಿಗಾಗಿ ಸಂಘವನ್ನು ಸಂಪರ್ಕಿಸಿ)*



# ಮೈಲಾರ ಮಹದೇವ-ನಾಟಕ ಪ್ರದರ್ಶನ

ಕ್ಷೀರ ಸಾಗರ ಮಿತ್ರಕೂಟ, ಕೀಲಾರ, ಮಂಡ್ಯ ಜಿಲ್ಲೆಯ ಕಲಾವಿದರು ಮನು ಬಳಿಗಾರ್ ವಿರಚಿತ 'ಮೈಲಾರ ಮಹದೇವ' ನಾಟಕವನ್ನು ಡಿಸೆಂಬರ್ 18ರಂದು ಸಂಜೆ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಪ್ರದರ್ಶಿಸಿದರು. ಗಾಂಧೀಜಿಯವರ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ ಕರ್ನಾಟಕದ ಏಕಮೇವ ಪ್ರತಿನಿಧಿ, ಧೀರ, ಸ್ವಾತಂತ್ರ್ಯ ಹೋರಾಟಗಾರ, ಹುತಾತ್ಮನಾದ ಮೈಲಾರ ಮಹದೇವನ ಕಥಾ ವಸ್ತುವುಳ್ಳ ಈ ನಾಟಕದ ನಿರ್ದೇಶಕರು ಮಾಲತೇಶ್ ಬಡಿಗೇರ್ ಅವರು. ಸ್ವಾತಂತ್ರ್ಯಪೂರ್ವ ಹೋರಾಟದ ಕನ್ನಡ ದೇಶಪ್ರೇಮಿಯ ಚಿತ್ರಣವನ್ನು ಕಟ್ಟಿಕೊಡುವ ಈ ನಾಟಕವನ್ನು ಕಲಾವಿದರು






ಅತ್ಯಂತ ಸಮರ್ಥವಾಗಿ ಅಭಿನಯಿಸಿ ಪ್ರೇಕ್ಷಕರ ಪ್ರಶಂಸೆಗೆ ಪಾತ್ರರಾದರು. ಕೀಲಾರ ಗ್ರಾಮೀಣ ಪ್ರದೇಶದ ಯುವ ಸಂಘಟನೆಯ ಉತ್ಸಾಹಿ ಕಲಾವಿದರು ಯಾವುದೇ ಹವ್ಯಾಸಿ ಕಲಾವಿದರಿಗೂ ಕಡಿಮೆ ಇಲ್ಲದಂತೆ ನೀಡಿದ ಉತ್ತಮ ಪ್ರದರ್ಶನ ಪ್ರಶಂಸನೀಯ ಹಾಗೂ ಅಭಿನಂದನೀಯ.

ನಾಟಕ ಪ್ರದರ್ಶನವನ್ನು ಮಂಡ್ಯ ಶಾಸಕರಾದ ಎಂ. ಶ್ರೀನಿವಾಸ್ ಅವರು ನಗಾರಿ ಬಾರಿಸುವ ಮೂಲಕ ಉದ್ಘಾಟಿಸಿ ಕಲಾವಿದರನ್ನು ಅಭಿನಂದಿಸಿದರು. ಇವರೊಡನೆ ಡಿ. ಶಿವರಾಜು, ಕೆ.ಎಸ್. ಶಿವರಾಮು, ಡಾ. ವೆಂಕಟಾಚಲ ಹೆಗಡೆ, ಸಿ.ಎಂ. ನಾಗರಾಜ ಇವರುಗಳು ಸಮಾರಂಭದಲ್ಲಿ ಭಾಗವಹಿಸಿ ಶುಭ ಕೋರಿದರು.

## ಲಲಿತ ಕಲಾ ಅಕಾಡೆಮಿಯ ಹಂಗಾಮಿ ಅಧ್ಯಕ್ಷರಾಗಿ ದೆಹಲಿ ಕಲಾವಿದ ಕೆ.ಆರ್. ಸುಬ್ಬಣ್ಣ



2012 ಹೊಸ ವರ್ಷದ ಕೊಡುಗೆಯಾಗಿ ವರ್ಷದ 2ನೆಯ ದಿನ ಲಲಿತ ಕಲಾ ಅಕಾಡೆಮಿಯ ಹಂಗಾಮಿ ಅಧ್ಯಕ್ಷರಾಗಿ ದೆಹಲಿ ಕನ್ನಡಿಗ, ಕಲಾವಿದ ಕೆ.ಆರ್. ಸುಬ್ಬಣ್ಣ ಅವರು ಅಧಿಕಾರ ಸ್ವೀಕರಿಸಿದರು. 90ರ ದಶಕದಲ್ಲಿ ಈ ಹುದ್ದೆಯನ್ನು ಅಲಂಕರಿಸಿದ್ದ ಪ್ರಥಮ ಕನ್ನಡಿಗ ಖ್ಯಾತ ಕಲಾವಿದ ಕೆ.ಕೆ. ಹೆಬ್ಬಾರ್ ಅವರ ನಂತರ ಈ ಸ್ಥಾನಕ್ಕೆ ಬಂದಿರುವ ಎರಡನೆಯ ಕನ್ನಡಿಗ ಎಂಬ ಹೆಗ್ಗಳಿಕೆ ಕೆ.ಆರ್. ಸುಬ್ಬಣ್ಣ ಅವರದ್ದು. 2009 ರಿಂದ ಅಕಾಡೆಮಿಯ ಉಪಾಧ್ಯಕ್ಷರಾಗಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದ ಮೊಟ್ಟ ಮೊದಲ ಕನ್ನಡಿಗ ಸುಬ್ಬಣ್ಣ ಅವರಿಗೆ ಈ ಜವಾಬ್ದಾರಿಯುತವಾದ ಹೊಣೆಗಾರಿಕೆ ಲಭಿಸಿರುವುದು ದೆಹಲಿ ಕನ್ನಡಿಗರಿಗೆ ಹೆಮ್ಮೆಯ ಹಾಗೂ ಸಂತಸದ ಸಂಗತಿ. ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾರ್ದಿಕ ಅಭಿನಂದನೆಗಳು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ ಸುಬ್ಬಣ್ಣ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಯಶಸ್ಸು ಕೋರುತ್ತಾ ಅಧ್ಯಕ್ಷರಾಗಿ ಪೂರ್ಣಾವಧಿಯ ಉತ್ಕೃಷ್ಟ ಕಲಾಸೇವೆ ಸಲ್ಲಿಸಲಿ ಎಂದು ಶುಭ ಹಾರೈಸುತ್ತೇವೆ.

## ಮಾಸ್ಟರ್ ಕುಶಾಲ್ ಮಾಂಡಿವ್ಯಗೆ ಕರಾಟೆಯಲ್ಲಿ ಚಿನ್ನದ ಪದಕ



North India Shotokan Karate Championship–2011 ಸ್ಪರ್ಧೆಯಲ್ಲಿ ಸಬ್ ಜೂನಿಯರ್ ವಿಭಾಗದಲ್ಲಿ ಮಾಸ್ಟರ್ ಕುಶಾಲ್ ಮಾಂಡಿವ್ಯ ಪ್ರಥಮ ಸ್ಥಾನದೊಂದಿಗೆ ಚಿನ್ನದ ಪದಕ ಪಡೆದಿದ್ದಾನೆ. 3ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ 8 ವರ್ಷದ ಪೋರ ಕುಶಾಲ್ ಈ ಹಿಂದೆಯೂ ಕೂಡಾ ಎರಡು ಬಾರಿ ಕಂಚಿನ ಪದಕಗಳನ್ನು ಪಡೆದಿದ್ದಾನೆ. ದೆಹಲಿ ಪೋಲಿಸ್‌ನಲ್ಲಿ ಸೇವೆ ಸಲ್ಲಿಸುತ್ತಿರುವ ಪಿ. ಪ್ರಕಾಶ್ ಮತ್ತು ವನಿತಾ ದಂಪತಿಗಳ ಪುತ್ರನಾದ ಕುಶಾಲ್ ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಈ ಕಿರಿಯ ವಯಸ್ಸಿನಲ್ಲೇ ಸಾಧನೆ ಮಾಡುತ್ತಿರುವುದು ಸಂತಸ ಹಾಗೂ ಹೆಮ್ಮೆಯ ಸಂಗತಿ. ಕುಶಾಲ್ ಕರಾಟೆಯಲ್ಲಿ ಇನ್ನೂ ಹೆಚ್ಚಿನ ಸಾಧನೆ ಮಾಡಲಿ, ಪ್ರಶಸ್ತಿಗಳನ್ನು ಪಡೆಯಲಿ ಎಂದು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರೈಸುತ್ತೇವೆ.



# ದೆಹಲಿ ಕನ್ನಡ ಶಾಲೆಯ ಸಂಭ್ರಮದ ಸುವರ್ಣ ಮಹೋತ್ಸವ



ಭಾರತ ದೇಶದ ರಾಜಧಾನಿಯಾಗಿ ನವದೆಹಲಿ ತನ್ನ ನೂರನೇ ವರ್ಷ ಆಚರಿಸುತ್ತಿರುವ ವಿಶೇಷ ಸಂದರ್ಭದಲ್ಲಿ ಇಲ್ಲಿನ ಕನ್ನಡಿಗರಿಗೆ ಮತ್ತೊಂದು ವಿಶೇಷ. ಅದೇನೆಂದರೆ ಇದೇ ವರ್ಷ ದೆಹಲಿ ಕನ್ನಡ ಶಾಲೆ 50 ಸಂವತ್ಸರಗಳನ್ನು ಪೂರೈಸಿ ಸುವರ್ಣ ಜಯಂತಿ ವರ್ಷವನ್ನು ಆಚರಿಸುತ್ತಿರುವುದು. ಅಂದಿನ ಬ್ರಿಟಿಷ್ ದೊರೆ ದೆಹಲಿಯನ್ನು ರಾಜಧಾನಿಯಾಗಿ ಘೋಷಿಸಿದಂತೆ, 1959ರಲ್ಲಿ ಧೀಮಂತ ಕನ್ನಡಿಗರ ತಂಡವೊಂದು ರಾಜ್ಯಸಭೆಯ ಅಂದಿನ ಉಪ ಸಭಾಪತಿಗಳಾದ ಸನ್ಮಾನ್ಯ ಶ್ರೀ ಎಸ್. ವಿ. ಕೃಷ್ಣಮೂರ್ತಿ ರಾಯರ ನೇತೃತ್ವದಲ್ಲಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯನ್ನು ಆರಂಭಿಸಿದರು. ಅತ್ಯಂತ ಕಡಿಮೆ ಕನ್ನಡಿಗರಿದ್ದ ಅಂದಿನ ಸಂದರ್ಭದಲ್ಲಿ ಈ ರೀತಿಯ ಕನ್ನಡ ಉಳಿಸುವಿಕೆಗಾಗಿ, ಬೆಳವಣಿಗೆಗಾಗಿ ತೆಗೆದುಕೊಂಡ ನಿರ್ಧಾರ ಅಂದಿನ ದೆಹಲಿ ಕನ್ನಡಿಗರಿಗೆ ಕನ್ನಡ ನಾಡು, ನುಡಿ, ಸಂಸ್ಕೃತಿಗಳ ಬಗೆಗಿದ್ದ ಅಪಾರ ಪ್ರೀತಿಯ ದ್ಯೋತಕವಾಗಿತ್ತು. ಈ ಪ್ರಕ್ರಿಯೆಯಲ್ಲಿ ಅವರಿಗೆ ಸಹಾಯ ಹಸ್ತ ಚಾಚಿದ ಪ್ರಮುಖರೆಂದರೆ ಶ್ರೀ ಡಿ. ಪಿ. ಕಮರಮಕರ್, ಶ್ರೀಮತಿ ಸರೋಜಮ್ಮ ರೆಡ್ಡಿ, ಶ್ರೀ ಬಿ. ನಂಜುಂಡಯ್ಯ, ಶ್ರೀ, ಎನ್. ಎನ್. ಮಲ್ಯ, ಶ್ರೀ ಬಿ. ಎಂ. ಕಾರಿಯಪ್ಪ, ಶ್ರೀ ಸಿ. ಆರ್. ಬಸಪ್ಪ, ಡಾ. ಜಿ.ಎಸ್. ಮೇಲ್ಕೋಟೆ, ಶ್ರೀ ಸಿ. ಎಸ್. ಚಂದ್ರಶೇಖರ್, ಶ್ರೀ ಟಿ. ಜೆ. ಮಾಣಿಕ್ಯಮ್ ಮೊದಲಾದವರು.

ಈ ಕಲ್ಪನೆ ಮುಂದಿನ ದಿನಗಳಲ್ಲಿ ಕನ್ನಡ ಶಾಲೆಯ ಸ್ಥಾಪನೆಗೆ ಅಡಿಗಲ್ಲಾಗಿತ್ತು. 1961ರಲ್ಲಿ ಶಾಲೆಯ ಚಟುವಟಿಕೆಗಳಿಗಾಗಿ ಕೇಂದ್ರ ಸರ್ಕಾರದ ನಗರಾಭಿವೃದ್ಧಿ ಇಲಾಖೆಯಿಂದ ಒಂದು ಎಕರೆ ಜಾಗವನ್ನು ಪಡೆದು ಮುಂದಿನ ವರ್ಷ ಅಂದರೆ 1962ರ ವಿಜಯ ದಶಮಿಯ ಶುಭ ದಿನದಂದು ದೆಹಲಿ ಕನ್ನಡ ಶಾಲೆಯು ಪ್ರಾರಂಭವಾಯಿತು. ಅದೇ ವರ್ಷ ಮತ್ತಷ್ಟು ಜಾಗವನ್ನು ಹೆಚ್ಚುವರಿಯಾಗಿ ಪಡೆದ ಕನ್ನಡ ಶಾಲೆ, 1965ರಲ್ಲಿ ಮತ್ತೆ 0.943 ಎಕರೆಯ ಜಮೀನನ್ನು ಪಡೆದು ಒಟ್ಟಾರೆ 1.97 ಎಕರೆ ಜಾಗದಲ್ಲಿ ಕಾರ್ಯ ನಿರ್ವಹಿಸಲಾರಂಭಿಸಿ ಬೃಹದಾಕಾರವಾಗಿ ಬೆಳೆದು, ಇಂದು ಸರಿ ಸುಮಾರು 50 ವರ್ಷಗಳ ನಂತರ ಶಾಲೆ ಸಿ. ಬಿ. ಎಸ್. ಇ. ಪಠ್ಯಕ್ರಮದಲ್ಲಿ 1ನೇ ತರಗತಿಯಿಂದ 12ನೇ ತರಗತಿಯವರೆಗೆ ನಡೆಯುತ್ತಿದ್ದು ಸುಮಾರು 1000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ.

1ನೇ ತರಗತಿಯಿಂದ 5ನೇ ತರಗತಿಯವರೆಗೆ ಕನ್ನಡ ಭಾಷೆ ಕಡ್ಡಾಯ ವಿಷಯವಾಗಿದ್ದು, ನಂತರ ಐಚ್ಛಿಕ ವಿಷಯವಾಗಿರುತ್ತದೆ. ಬಹುತೇಕ ಕನ್ನಡ ಮಕ್ಕಳು ಕನ್ನಡ ಭಾಷೆಯನ್ನು 12ನೇ ತರಗತಿಯವರೆಗೂ ಅಭ್ಯಾಸ ನಡೆಸಿರುವುದು ವಿಶೇಷ ಸಂಗತಿಯಾಗಿದೆ. ಇಂದಿಗೂ ದೆಹಲಿಯ ಸರ್ಕಾರಿ ಹಾಗೂ ಸರ್ಕಾರಿ ಅನುದಾನಿತ ಶಾಲೆಗಳ ಪಟ್ಟಿಯಲ್ಲಿ ಕನ್ನಡ ಶಾಲೆ, ಪ್ರಮುಖ ಸ್ಥಾನದಲ್ಲಿದೆ. ವಿಭಾಗೀಯ ಆಟೋಟ, ವೈಜ್ಞಾನಿಕ ಹಾಗೂ ಇನ್ನಿತರ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿರುವ ಶಾಲೆಯ ವಿದ್ಯಾರ್ಥಿಗಳು ಉತ್ತಮ ಪ್ರದರ್ಶನವನ್ನು ನೀಡುತ್ತಾ ಬಂದಿದ್ದಾರೆ.

ಕಳೆದ 50 ವರ್ಷಗಳಲ್ಲಿ ಈ ಶಾಲೆಯಲ್ಲಿ ಓದಿದ ಬಹಳಷ್ಟು ವಿದ್ಯಾರ್ಥಿಗಳು ದೇಶ–ವಿದೇಶಗಳಲ್ಲಿ ಬಹಳ ಉನ್ನತ ಹುದ್ದೆಗಳನ್ನಲಂಕರಿಸಿದ್ದಾರೆ. ಬಡ ಹಾಗೂ ಮಧ್ಯಮ ವರ್ಗಕ್ಕೆ ಸೇರಿದ ಬಹುತೇಕ ಮಕ್ಕಳೇ ಈ ಶಾಲೆಯಲ್ಲಿದ್ದು ದೆಹಲಿಯಂತ ದುಬಾರಿ ನಗರದಲ್ಲಿ ಕಡಿಮೆ ವೆಚ್ಚದಲ್ಲಿ ಉತ್ತಮ ಶಿಕ್ಷಣವನ್ನು ದೆಹಲಿ ಕನ್ನಡ ಶಾಲೆ ನೀಡುತ್ತಾ ಬಂದಿದೆ. ಇತರೇ ಶಾಲೆಗಳಂತೆ ವಿದ್ಯಾರ್ಥಿ ವೇತನ, ಸಾರಿಗೆ ರಿಯಾಯಿತಿ ಮೊದಲಾದ ವಿಶೇಷ ಸವಲತ್ತುಗಳನ್ನು ಸಹ ದೆಹಲಿ ಕನ್ನಡ ಶಾಲೆ ತನ್ನ ವಿದ್ಯಾರ್ಥಿಗಳಿಗೆ ನೀಡುತ್ತಾ ಬಂದಿದೆ.

2003 ರಲ್ಲಿ ಇದೇ ಸಂಸ್ಥೆಯಿಂದ "ಸ್ಕೂಲ್ ಆಫ್ ಕಂಪ್ಯೂಟರ್ ಸೈನ್ಸ್" MCA ತರಬೇತಿ (AICTE ಯಿಂದ ಮಾನ್ಯತೆ ಹೊಂದಿದ) ಪ್ರಾರಂಭಿಸಿ, ಈಗ ಅದೂ ಕೂಡ ಅತ್ಯುನ್ನತ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಕರ್ನಾಟಕ ಸರ್ಕಾರ ಹಾಗೂ ದೆಹಲಿ ಸರ್ಕಾರಗಳೆರಡೂ ಕಾಲಕಾಲಕ್ಕೆ ಈ ಎಲ್ಲಾ ಚಟುವಟಿಕೆಗಳಿಗಾಗಿ ತನ್ನ ಸಹಾಯ–ಸಹಕಾರ ನೀಡುತ್ತಾ ಬಂದಿದೆ. ಅದರಲ್ಲಿಯೂ, ಸುವರ್ಣ ವರ್ಷದ ವಿಶೇಷ ಸಂದರ್ಭದಲ್ಲಿ ಹಮ್ಮಿಕೊಳ್ಳಲಾಗಿರುವ "Multi Purpose Educational Complex (MEPC)" ಹಾಗೂ ಹೆಚ್ಚುವರಿ ಕಟ್ಟಡಕ್ಕಾಗಿ ಕರ್ನಾಟಕ ಸರ್ಕಾರ ಈಗಾಗಲೇ 1 ಕೋಟಿ ರೂಪಾಯಿಗಳ ಅನುದಾನವನ್ನು ಘೋಷಿಸಿದ್ದು ಜೊತೆಗೆ ಶಾಲಾ ಮಕ್ಕಳ ಅನುಕೂಲಕ್ಕಾಗಿ ಎರಡು ಬಸ್ಸುಗಳ ಖರೀದಿಗಾಗಿ 50 ಲಕ್ಷಗಳ ಅನುದಾನವನ್ನು ನೀಡಿದೆ. ಈ ಅನುದಾನದಿಂದ ಸುವರ್ಣ ಮಹೋತ್ಸವ ವರ್ಷದಲ್ಲಿ ಕನ್ನಡ ಶಾಲೆ ತನ್ನದೇ ಆದ 2 ಬಸ್ಸುಗಳನ್ನು ಪಡೆದಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ.

2010ರ ವಿಜಯ ದಶಮಿಯಂದು ಆರಂಭವಾದ ದೆಹಲಿ ಕನ್ನಡ ಶಾಲೆಯ ಸುವರ್ಣ ವರ್ಷ ಮಹೋತ್ಸವಾಚರಣೆಯ ಸಮಾರೋಪ ಸಮಾರಂಭವನ್ನು ಭಾನುವಾರ 11.12.2011ರಂದು ಆಯೋಜಿಸಲಾಗಿತ್ತು. ಪ್ರಸ್ತುತ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ ಶ್ರೀ ವಿ. ಧನಂಜಯ ಕುಮಾರ್, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಶ್ರೀ ಆರ್.ಪಿ. ಜಗದೀಶ್, ಖ್ಯಾತ ಕ್ರೀಡಾಪಟು ಅರ್ಜುನ್ ಪ್ರಶಸ್ತಿ ವಿಜೇತೆಯಾದ ಶ್ರೀಮತಿ ಅಶ್ವಿನಿ ನಾಚಪ್ಪ, ಕರ್ನಾಟಕ ಸರ್ಕಾರದ ಹೆಚ್ಚುವರಿ ವಿಶೇಷ ಪ್ರತಿನಿಧಿ ಶ್ರೀ ಬೈಕರೆ ನಾಗೇಶ್, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ಜಿ.ಎಂ. ಲಿಂಗರಾಜು, ಉಪಾಧ್ಯಕ್ಷರುಗಳಾದ ಡಾ. ಅಹಲ್ಯಾ ಚಿಂತಾಮಣಿ ಮತ್ತು ಶ್ರೀ ಕೆ.ಈಶ್ವರ್ ಭಟ್, ಕಾರ್ಯದರ್ಶಿ ಶ್ರೀ ಆಂಜನಿ ಗೌಡ, ಖಜಾಂಚಿ ಶ್ರೀ ಬಸವರಾಜ ಎಸ್. ಮೇಟಿ, ಮ್ಯಾನೇಜರರಾದ ಡಾ. ಶಶಿಕುಮಾರ್ ಮತ್ತು ಪ್ರಭಾರ ಪ್ರಾಂಶುಪಾಲರಾದ ಶ್ರೀ ಕೆ.ಟಿ. ಗಣೇಶ್ ಹಾಗೂ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ







ಅವರು ಸಮಾರಂಭದ ವೇದಿಕೆಯ ಮೇಲೆ ಆಸೀನರಾಗಿದ್ದರು.

ಶ್ರೀ ವಿ. ಧನಂಜಯ ಕುಮಾರ್ ಅವರು ಮೊದಲಿಗೆ ಕರ್ನಾಟಕ ಸರ್ಕಾರ ಅನುದಾನಿತ ಹೊಸ ಬಸ್ಸನ್ನು ಶಾಲೆಯ ಸೇವೆಗೆ ಸಮರ್ಪಿಸಿದರು.

ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಶ್ರೀಮತಿ ಅಶ್ವಿನಿ ನಾಚಪ್ಪ ಅವರು ಎಲ್ಲ ಮಕ್ಕಳಿಗೆ ಶಾಲಾ ಪಾಠದ ಅಭ್ಯಾಸದೊಂದಿಗೆ ಆಟಗಳಲ್ಲಿ ಕೂಡಾ ಭಾಗವಹಿಸಲು ಪೋಷಕರು ಪ್ರೇರೇಪಿಸಬೇಕು ಎಂದು ಹೇಳಿದರು. ತಮ್ಮ ತಾಯಿ ತಂದೆ ತನಗೆ ಆಟಗಳಲ್ಲಿ ಭಾಗವಹಿಸಲು ಅವಕಾಶ ಕೊಟ್ಟಿದ್ದರಿಂದ ತಾವು ಇಂದು ಉನ್ನತ ಮಟ್ಟಕ್ಕೇರಲು ಸಾಧ್ಯವಾಯಿತು ಎಂದು ತಮ್ಮ ಸ್ವಂತ ಅನುಭವವನ್ನು ತಿಳಿಸುತ್ತಾ ಆಟಗಳಲ್ಲಿ ಈಗ ಸರ್ಕಾರ ಬಹಳ ಸೌಲಭ್ಯಗಳನ್ನು ಕಲ್ಪಿಸಿದೆ, ಹೆಚ್ಚು ಮಹಿಳೆಯರು ಭಾಗವಹಿಸಬೇಕೆಂದು ಕರೆ ನೀಡಿದರು.

ಶ್ರೀ ಆರ್.ಪಿ. ಜಗದೀಶ್ ಅವರು ಕಾರ್ಯಕಾರಿ ಮಂಡಳಿಯವರ ಶ್ರಮವನ್ನು ಶ್ಲಾಘನೆ ಮಾಡಿ ಸರ್ಕಾರದಿಂದ ಮತ್ತಷ್ಟು ಸಾಧ್ಯವಾದ ಸಹಾಯ ಕೊಡಿಸುವುದಾಗಿ ಹೇಳಿದರು.

ಕಾರ್ಯದರ್ಶಿಯವರಾದ ಶ್ರೀ ಆಂಜನಿ ಗೌಡ ಅವರು ತಮ್ಮ ಮುಂದಿನ ಬೇಡಿಕೆಗಳನ್ನು ಸಲ್ಲಿಸಿದರು ಮತ್ತು ಮಾಜಿ ಮುಖ್ಯಮಂತ್ರಿಯವರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಶಾಲೆಗೆ ಒಂದು ಕೋಟಿ ರೂಪಾಯಿ ಮತ್ತು ದೆಹಲಿ ಕರ್ನಾಟಕ ಸಂಘಕ್ಕೆ ಒಂದು ಕೋಟಿ ರೂಪಾಯಿಗಳನ್ನು ನೀಡಿದ್ದನ್ನು ಸ್ಮರಿಸಿದರು. ಇದೇ ಸಂದರ್ಭದಲ್ಲಿ ಮಾಜಿ ಅಧ್ಯಕ್ಷರುಗಳಾದ ಡಾ. ಸರೋಜಿನಿ ಮಹಿಷಿ, ಶ್ರೀ ಎಂ. ವೀರಪ್ಪ, ಶ್ರೀ ಎನ್.ಜೆ. ಕಾಮತ್, ಮಾಜಿ ಕಾರ್ಯದರ್ಶಿಗಳಾದ ಶ್ರೀ ಎಲ್‌ವಿ. ರೆಡ್ಡಿ, ಶ್ರೀ ಆರ್. ರೇಣುಕುಮಾರ್, ಮಾಜಿ ಪ್ರಾಂಶುಪಾಲರುಗಳಾದ ಶ್ರೀ ಎಲ್.ಡಿ. ಹಲಗೇಕರ್, ಶ್ರೀ ಜಿ.ಬಿ. ಹೆಗಡಿ ಮತ್ತು ನಿವೃತ್ತ ಉಪಾಧ್ಯಾಯರುಗಳನ್ನು ಸನ್ಮಾನಿಸಲಾಯಿತು. ಹಾಲಿ ಉಪಾಧ್ಯಾಯರು ಹಾಗೂ ಉಪಾಧ್ಯಾಯಿನಿಯರ ಜೊತೆಗೆ ಶಾಲೆ ಹಾಗು ಶಿಕ್ಷಣ ಸಂಸ್ಥೆಯ ಸಮಸ್ತ ಸಿಬ್ಬಂದಿಗಳಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು. ಶ್ರೀ ಬಸವರಾಜ ಎಸ್. ಮೇಟಿಯವರು ಖಜಾಂಚಿ ಕಾರ್ಯಭಾರವನ್ನು ನಿರ್ವಹಿಸಿದ ಬಗೆಯನ್ನು ವಿವರಿಸಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಈ ಶಾಲೆ ಅಭಿವೃದ್ಧಿ ಹೊಂದುತ್ತಾ ಇದೇ ರೀತಿ 75ನೇ ವರ್ಷ ಹಾಗೂ 100ನೇ ವರ್ಷದ ಸಮಾರಂಭವನ್ನು ಆಚರಿಸುವಂತಾಗಲಿ ಎಂದು ಹಾರೈಸಿದರು.

ಶಾಲೆಯ ಪ್ರಭಾರ ಪ್ರಾಂಶುಪಾಲರಾದ ಶ್ರೀ ಕೆ.ಟಿ. ಗಣೇಶ್ ಸಭೆಗೆ ಶಾಲೆಯ ಬಗೆಗಿನ ವರದಿಯನ್ನು ವಿವರಿಸಿದರು.

ಸಂಸ್ಥೆಯ ಅಧ್ಯಕ್ಷರಾದ ಡಾ. ಜಿ.ಎಂ. ಲಿಂಗರಾಜುರವರು ಮಾತನಾಡಿ, ಸಂಸ್ಥೆಯ ಮುಂದಿನ ಯೋಜನೆಗಳ ಬಗ್ಗೆ ವಿವರಿಸುತ್ತಾ ಸಂಸ್ಥೆ ಇಷ್ಟೊಂದು ಎತ್ತರಕ್ಕೆ ಬೆಳೆಯಲು ಸಹಕರಿಸಿದ ಎಲ್ಲ ಮಹನೀಯರನ್ನು ಸ್ಮರಿಸಿದರು. ಸರ್ಕಾರದ ವತಿಯಿಂದ ಶಾಲೆಗಾಗಿ 1.5ಕೋಟಿ ರೂಪಾಯಿಗಳ ಅನುದಾನವನ್ನು ತರುವಲ್ಲಿ ಹಾಗೂ ಶಾಲೆಯ ಸುವರ್ಣ ಮಹೋತ್ಸವ ಆಚರಣೆಯನ್ನು ಇಷ್ಟೊಂದು ವಿಜೃಂಭಣೆಯಿಂದ ನೆರವೇರಿಸುವಲ್ಲಿ ಮಹತ್ವದ ಪಾತ್ರ ವಹಿಸಿದ ಸಂಸ್ಥೆಯ ಕಾರ್ಯದರ್ಶಿ ಶ್ರೀ ಆಂಜನಿ ಗೌಡರು ಹಾಗೂ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರನ್ನು ಅಭಿನಂದಿಸಿದರು.

ಶ್ರೀ ವಿ. ಧನಂಜಯ ಕುಮಾರ್ ಅವರು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಶಾಲಾ ಆಡಳಿತ ಮಂಡಳಿ ಹಾಗೂ ಸಿಬ್ಬಂದಿಯನ್ನು ಪ್ರಶಂಸಿಸಿದರು ಹಾಗೂ ಹೊರ ರಾಜ್ಯಗಳ ಕನ್ನಡ ಚಟುವಟಿಕೆಗಳಿಗೆ ತಮ್ಮ ಸರ್ಕಾರ ಸದಾ ಸಹಾಯ ಹಸ್ತ ಚಾಚುತ್ತಿದ್ದು ಮುಂದೆಯೂ ಸಹ ಇದೇ ರೀತಿಯ ಸಹಾಯ ನೀಡಲು ಬದ್ದವಾಗಿದೆಯೆಂದು ತಿಳಿಸಿದರು. ಅಂದು ಕನ್ನಡಿಗರು ಬಿತ್ತಿದ ಬೀಜ  ಇಂದು ಹೆಮ್ಮರವಾಗಿದೆ. ಈ ಐವತ್ತು ವರ್ಷಗಳು ಯಶಸ್ವಿ ಆಗಲು ಅನೇಕ ಹಿತಚಿಂತಕರ ತನು, ಮನ, ಧನ ಸಹಾಯವಿದೆ. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಕರ್ನಾಟಕದ ಸಂಸ್ಥೆಗಳಿಗೆ ತಮ್ಮ ಅಧಿಕಾರವಧಿಯಲ್ಲಿ ಕನ್ನಡಪರ ಕಳಕಳಿಯಿಂದ ಕೊಟ್ಟಂತಹ ಸಹಾಯ ಅವಿಸ್ಮರಣೀಯ ಹಾಗೂ ಅನುಕರಣೀಯ ಎನ್ನುತ್ತಾ ಶಾಲೆ ಅಭಿವೃದ್ಧಿ ಹೊಂದಲಿ ಎಂದು ಶುಭ ಹಾರೈಸಿದರು.

ಆಡಳಿತ ಮಂಡಳಿಯ ಸದಸ್ಯ ಎನ್.ಆರ್. ಶ್ರೀನಾಥ್ ವಂದನಾರ್ಪಣೆ ಸಲ್ಲಿಸಿದರು.

ಶಾಲೆಯ ಉಪಾಧ್ಯಾಯರುಗಳ ಪರಿಶ್ರಮದ ತರಬೇತಿಯಿಂದ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು, ಹಾಗೂ ನಂತರದಲ್ಲಿ ಶ್ರೀ ಶ್ರೀನಿವಾಸ ಜಿ. ಕಪ್ಪಣ್ಣ ಅವರ ನಿರ್ದೇಶನದಲ್ಲಿ ಶ್ರೀಮತಿ ಶುಭಾ ಧನಂಜಯರ ಮಾರ್ಗದರ್ಶನದಲ್ಲಿ ಕನ್ನಡ ಶಾಲೆಯ ಮಕ್ಕಳು ನೀಡಿದ ವೈವಿಧ್ಯಮಯ ನೃತ್ಯ ಕಾರ್ಯಕ್ರಮಗಳನ್ನು ಮನಮೋಹಕವಾಗಿ ಮೂಡಿ ಬಂದು ಜನತೆಯ ಅಪಾರ ಮೆಚ್ಚುಗೆಗೆ ಪಾತ್ರವಾಯಿತು.

3000ಕ್ಕೂ ಮಿಗಿಲಾಗಿ ಸೇರಿದ್ದ ಶಾಲೆಯ ಮಕ್ಕಳು, ಪೋಷಕರು ಹಾಗೂ ದೆಹಲಿ ಕನ್ನಡಿಗರಿಗಾಗಿ ವಿಶೇಷವಾದ ಭೋಜನದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಆಯೋಜಿಸಲಾಗಿತ್ತು.

■ ಆರ್. ರೇಣುಕುಮಾರ್







# ದೆಹಲಿ ಕರ್ನಾಟಕ ಸಂಘ

**29.01.2012 ಭಾನುವಾರ**

ಸಂಜೆ : 5.00ಗಂಟೆಗೆ

ಸ್ಥಳ : ಸಂಘದ ಸಭಾಂಗಣ

ನವರಸ ಡ್ಯಾನ್ಸ್ ಥಿಯೇಟರ್, ಬೋಸ್ಟನ್, ಅಮೆರಿಕ
ಪ್ರಸ್ತುತಪಡಿಸುವ

## ಅಭೂತಪೂರ್ವ ನೃತ್ಯರೂಪಕ

**ಬೇಂದ್ರೆ ನಮನ**

(ಬೇಂದ್ರೆ ಗೀತೆಗಳ ಆಧಾರಿತ)

ಮತ್ತು

**ಶಿಕಾರಿ**

(ಖ್ಯಾತ ಲೇಖಕಿ ಮಹಾಶ್ವೇತಾದೇವಿ ಅವರ ಸಣ್ಣ ಕತೆ ಆಧಾರಿತ)

ಅಮೆರಿಕಾ, ಕೆನಡ, ಜರ್ಮನಿ ಮೊದಲಾದ ದೇಶಗಳಲ್ಲಿ ಅದ್ಭುತ ಪ್ರದರ್ಶನ
ನೀಡಿರುವ ಡಾ. ಅಪರ್ಣ ಸಿಂಧೂರ್ ಮತ್ತು ತಂಡದವರಿಂದ

ನೃತ್ಯ ಸಂಯೋಜನೆ : ಡಾ. ಅಪರ್ಣ ಸಿಂಧೂರ್
ಅನಿಲ್ ನಾಟ್ಯವೇದ

**ತಮಗೆಲ್ಲರಿಗೂ ಆದರದ ಸ್ವಾಗತ**

**ಡಾ. ವೆಂಕಟಾಚಲ ಹೆಗಡೆ**
ಅಧ್ಯಕ್ಷರು

**ಸಿ.ಎಂ. ನಾಗರಾಜ**
ಪ್ರಧಾನ ಕಾರ್ಯದರ್ಶಿ


# Saujanya Printing Press

**A HOUSE OF QUALITY PRINTING**

**C-95, Okhla Industrial Area, Phase-I,**
**New Delhi - 110 020**
**Phone : 26815778, 40520770**
**Mobile : 9811104398, 9811604398**
**e-mail : saujanyapp2010@gmail.com / hpgp2006@gmail.com**

**ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ**
**ಬಹುವರ್ಣದ ಸುಸಜ್ಜಿತ ಮುದ್ರಣಾಲಯ**

**ಸೌಜನ್ಯ ಪ್ರಿಂಟಿಂಗ್ ಪ್ರೆಸ್** ಮತ್ತು **ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್**

ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

**ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ**

# ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪ ವಿಧಿವಶ



1991 ರಿಂದ 92ರವರೆಗೆ ಮುಖ್ಯಮಂತ್ರಿಯಾಗಿದ್ದ ಹಿರಿಯ ಮುತ್ಸದ್ದಿ ಸಾರೆಕೊಪ್ಪ ಬಂಗಾರಪ್ಪ ಇಹಲೋಕ ತ್ಯಜಿಸಿದ್ದಾರೆ. ರಾಜಕೀಯ ಜೀವನದಲ್ಲಿ ಅನೇಕ ಏಳು ಬೀಳು ಕಂಡ ಸ್ವಾಭಿಮಾನಿ ಬಂಗಾರಪ್ಪ ಬದುಕಿನ ಸಂಜೆಯಲ್ಲಿ ಅನಾರೋಗ್ಯದಿಂದ ಬಳಲುತ್ತಿದ್ದು ಬೆಂಗಳೂರಿನ ಮಲ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಡಿಸೆಂಬರ್ 25ರ ಮದ್ಯರಾತ್ರಿ 12.45ಕ್ಕೆ ಇಹಲೋಕ ತ್ಯಜಿಸುವುದರ ಮೂಲಕ ತಮ್ಮ ವರ್ಣರಂಜಿತ ಬದುಕಿಗೆ ವಿದಾಯ ಹೇಳಿದ್ದಾರೆ. ಅವರ ಅಂತ್ಯದಿಂದಾಗಿ ಕರ್ನಾಟಕ ವರ್ಣರಂಜಿತ ವ್ಯಕ್ತಿತ್ವದ ರಾಜಕೀಯ ಮುತ್ಸದ್ದಿ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

ಸಮಾಜವಾದಿ ನಾಯಕ, ಬಡವರ ಬಂಧು, ಕರ್ನಾಟಕ ರಾಜ್ಯ ಕಂಡ ಅತ್ಯಂತ ವರ್ಣರಂಜಿತ ರಾಜಕಾರಣಿ, ಮಾಜಿ ಮುಖ್ಯಮಂತ್ರಿ ಸಾರೆಕೊಪ್ಪದ ಬಂಗಾರಪ್ಪ ತಮ್ಮ 5 ದಶಕದ ರಾಜಕೀಯ ಹೋರಾಟ ಮುಗಿಸಿ ಕಣ್ಮರೆಯಾಗಿದ್ದಾರೆ. ಕಲ್ಲಪ್ಪ ಮತ್ತು ಕಲ್ಲಮ್ಮ ದಂಪತಿಗಳ ಮಗನಾಗಿ 1932 ಅಕ್ಟೋಬರ್ 26ರಂದು ಸೊರಬ ತಾಲೂಕಿನ ಕುಬಟೂರಿನಲ್ಲಿ ಜನಿಸಿದ ಅವರಿಗೆ 79 ವರ್ಷವಾಗಿತ್ತು.

ಕುಬಟೂರು ಎಂಬ ಕುಗ್ರಾಮದಲ್ಲಿ ಜನಿಸಿದ ಬಂಗಾರಪ್ಪ ಬೆಳವಣಿಗೆಯ ಹಾದಿ ಎಂತವರನ್ನು ನಿಬ್ಬೆರಗಾಗಿಸುವಂತದ್ದು. ಆನವಟ್ಟಿಯಲ್ಲಿ ಪ್ರಾಥಮಿಕ ಶಿಕ್ಷಣ, ಶಿರಾಳಕೊಪ್ಪದಲ್ಲಿ ಪ್ರೌಢಶಿಕ್ಷಣ ಮುಗಿಸಿದ ಬಂಗಾರಪ್ಪ ಮೈಸೂರಿನಲ್ಲಿ ಬಿ.ಎ. ಮತ್ತು ಕಾನೂನು ವಿದ್ಯಾಭ್ಯಾಸ ಮುಗಿಸಿ ಶಿವಮೊಗ್ಗದಲ್ಲಿ ಕೆಲಕಾಲ ವಕೀಲಿ ವೃತ್ತಿ ನಡೆಸಿದರು. ಬಡರೈತ, ಕೂಲಿ ಕಾರ್ಮಿಕರ ಬದುಕಿನ ಬವಣೆ ಅರಿತಿದ್ದ ಅವರಿಗೆ ಜನರ ಸೇವೆಗೆ ಆರಿಸಿಕೊಂಡಿದ್ದು ರಾಜಕೀಯ ಕ್ಷೇತ್ರವನ್ನು. 60 ದಶಕದ ಪ್ರಾರಂಭದಲ್ಲಿ ಹೋರಾಟ, ಸೇವೆ, ರಾಜಕೀಯದ ಗೀಳಿಗೆ ಒಗ್ಗಿಕೊಂಡ ಬಂಗಾರಪ್ಪ ಚುನಾವಣೆ ಆಖಾಡಕ್ಕಿಳಿದದ್ದು 1967ರಲ್ಲಿ. ಸೋಷಲಿಷ್ಟ್ ಪಾರ್ಟಿ ಮೂಲಕ ಮೊದಲ ಬಾರಿಗೆ ಕರ್ನಾಟಕ ವಿಧಾನಸಭೆ ಪ್ರವೇಶಿಸಿದ ಬಂಗಾರಪ್ಪ ಹಿಂತಿರುಗಿ ನೋಡಲಿಲ್ಲ. ಸೋಲಿಲ್ಲದ ಸರದಾರನಾಗಿ ರಾಜಕೀಯದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದರು.

1967 ರಿಂದೀಚೆಗೆ 7 ಬಾರಿ ಸೊರಬದಿಂದ ವಿಧಾನಸಭೆಗೆ ಪ್ರವೇಶಿಸಿದ ಬಂಗಾರಪ್ಪ 3 ಬಾರಿ ಸಂಸತ್‌ಗೆ ಆಯ್ಕೆಯಾಗಿದ್ದರು. ಈ ನಡುವೆ ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷ, ಪ್ರತಿಪಕ್ಷದ ನಾಯಕ, ಸಚಿವರಾಗಿ ಕಾರ್ಯನಿರ್ವಹಿಸಿದ್ದರು. ಬಡವರು, ದೀನದಲಿತರ ಬಗ್ಗೆ ಅವರಿಗಿದ್ದ ಕಾಳಜಿ ಪ್ರಶ್ನಾತೀತ. ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಅವರು ಜಾರಿಗೆ ತಂದ ಆಶ್ರಯ, ಅಕ್ಷಯ, ಆರಾಧನಾ, ವಿಶ್ವ ಮತ್ತು ಗ್ರಾಮೀಣ ಕೃಪಾಂಕ ಯೋಜನೆಗಳು ರಾಜ್ಯದ ಜನಮಾನಸದಲ್ಲಿ ಶಾಶ್ವತವಾಗಿ ನೆಲೆಯೂರುವಂತೆ ಮಾಡಿತ್ತು. ಉಳುವವನೇ ಹೊಲದೊಡೆಯ, ಕಗ್ಗಂಟಾಗಿದ್ದ ಬಗರ್‌ಹುಕುಂ ಸಮಸ್ಯೆಗಳಿಗೆ ಉತ್ತರ ಕಂಡು ಹಿಡಿದು ಆಗಲೇ ಸುಮಾರು 8 ಲಕ್ಷ ಕುಟುಂಬಗಳಿಗೆ ಹಕ್ಕುಪತ್ರ ನೀಡಿ ಆಪತ್ಬಾಂದವನಂತೆ ಕಂಗೊಳಿಸಿದ್ದು ಇವರ ವೈಶಿಷ್ಟ್ಯ.

***ಅಗಲಿದ ಮಹಾನ್ ಚೇತನಕ್ಕೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸುತ್ತೇವೆ.***


## ಪತ್ತೇದಾರಿ ಕಾದಂಬರಿಗಳ ಜನಕ ಎನ್ ನರಸಿಂಹಯ್ಯ ಇನ್ನಿಲ್ಲ



ಇದೇ ಡಿಸೆಂಬರ್ 25, ಭಾನುವಾರ ಕನ್ನಡ ಪತ್ತೇದಾರಿ ಕಾದಂಬರಿಗಳ ಜನಕನೆಂದು ಖ್ಯಾತಿ ಗಳಿಸಿದ್ದ ಎನ್ ನರಸಿಂಹಯ್ಯನವರು ನಿಧನರಾದರು. ಕಳೆದ ಮೂರ್ನಾಲ್ಕು ತಿಂಗಳುಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ನರಸಿಂಹಯ್ಯನವರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಪತ್ತೆದಾರಿ ಸಾಹಿತ್ಯದ ಮೂಲಕ ಒಂದು ತಲೆಮಾರನ್ನೇ ಓದುವ ಗೀಳಿಗೆ ಹಚ್ಚಿದ್ದ ಎನ್ ನರಸಿಂಹಯ್ಯನವರು ಕನ್ನಡದ ಶೆರ್ಲಾಕ್ ಹೋಮ್ ಎಂದೇ ಹೆಸರಾಗಿದ್ದರು. ಪತ್ತೇದಾರಿ ಮತ್ತು ಸಾಮಾಜಿಕ ಸೇರಿದಂತೆ ಒಟ್ಟು 550 ಕ್ಕೂ ಹೆಚ್ಚು ಕಾದಂಬರಿಗಳನ್ನು ರಚಿಸಿ ಭಾರತದಲ್ಲಿಯೇ ದಾಖಲೆ ಸೃಷ್ಟಿಸಿದ ನರಸಿಂಹಯ್ಯ 1925 ಸೆಪ್ಟೆಂಬರ್ 18 ರಂದು ಬೆಂಗಳೂರಿನಲ್ಲಿ ಜನಿಸಿದರು.

ಕಡು ಬಡತನದಿಂದಾಗಿ ಕೇವಲ ನಾಲ್ಕನೆಯ ತರಗತಿಯವರೆಗೆ ಓದಿದ ನರಸಿಂಹಯ್ಯನವರು ಮುಂದೆ ಹೊಟ್ಟೆಪಾಡಿಗಾಗಿ ಹತ್ತು ಹಲವು ನೌಕರಿಗಳನ್ನು ಮಾಡುತ್ತಾ ತಮ್ಮ ಸಾಹಿತ್ಯದ ಅಭಿರುಚಿಯನ್ನು ಬೆಳೆಸಿಕೊಂಡರು.

1952ರಲ್ಲಿ ಎನ್.ನರಸಿಂಹಯ್ಯನವರು ತಮ್ಮ ಪ್ರಥಮ ಪತ್ತೇದಾರಿ ಕಾದಂಬರಿ 'ಪತ್ತೇದಾರ ಪುರುಷೋತ್ತಮ' ಬರೆದರು. ಐವತ್ತು / ಅರವತ್ತರ ದಶಕದಲ್ಲಿ ಹದಿಹರೆಯದ ಹುಡುಗರು ಕನ್ನಡ ಪುಸ್ತಕ ಓದುವ ಹವ್ಯಾಸ ಪ್ರಾರಂಭಿಸುತ್ತಿದ್ದದ್ದೇ ನರಸಿಂಹಯ್ಯನವರ ಕಾದಂಬರಿಗಳಿಂದ ಎಂದರೆ ಅತಿಶಯೋಕ್ತಿಯಲ್ಲ. ಕನ್ನಡ ಪತ್ತೇದಾರಿ ಸಾಹಿತ್ಯವನ್ನು ಸಮೃದ್ಧಗೊಳಿಸಿದ ಈ ಅಪರೂಪದ ಲೇಖಕನನ್ನು ಕಳೆದುಕೊಂಡ ಕನ್ನಡನಾಡು ನಿಜಕ್ಕೂ ಬಡವಾಗಿದೆ. ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿಕನ್ನಡಿಗರ ಪರವಾಗಿ ಅಗಲಿದ ಚೇತನಕ್ಕೆ ದೇವರು ಚಿರಶಾಂತಿಯನ್ನು, ಅವರ ಕುಟುಂಬಕ್ಕೆ ಧೈರ್ಯ, ಸ್ಥೈರ್ಯವನ್ನು ನೀಡಲೆಂದು ಕೋರುತ್ತೇವೆ.



# ದೆಹಲಿ ಕರ್ನಾಟಕ ಸಂಘ

ಮತ್ತು

# ಸಾಹಿತ್ಯ ಅಕಾಡೆಮಿ, ನವದೆಹಲಿ

# ಗೌರೀಶ್ ಕಾಯ್ಕಿಣಿ ಜನ್ಮ ಶತಮಾನೋತ್ಸವ–ವಿಚಾರ ಸಂಕಿರಣ

## ಜನವರಿ 21 ಮತ್ತು 22, 2012

## ಸ್ಥಳ : ಸಂಘದ ಸಭಾಂಗಣ

**21.01.2012 ಶನಿವಾರ**
**ಕಾರ್ಯಕ್ರಮ ಸಂಜೆ 5.00 ಗಂಟೆಗೆ**
**ಉದ್ಘಾಟನೆ**

ಸ್ವಾಗತ ನುಡಿ : ಶ್ರೀ ಅಗ್ರಹಾರ ಕೃಷ್ಣಮೂರ್ತಿ
ಕಾರ್ಯದರ್ಶಿಗಳು, ಸಾಹಿತ್ಯ ಅಕಾಡೆಮಿ, ನವದೆಹಲಿ

ಅಧ್ಯಕ್ಷತೆ : ಶ್ರೀ ವೀರಪ್ಪ ಮೊಯಿಲಿ
ಕೇಂದ್ರ ಸಚಿವರು, ಭಾರತ ಸರ್ಕಾರ

ಉದ್ಘಾಟನೆ : ಶ್ರೀ ಕೆ. ಮರುಳಸಿದ್ದಪ್ಪ
ಸದಸ್ಯರು, ಕನ್ನಡ ಸಲಹಾ ಮಂಡಳಿ,
ಸಾಹಿತ್ಯ ಅಕಾಡೆಮಿ

ಪ್ರಾಸ್ತಾವಿಕ ನುಡಿ : ಡಾ. ವೆಂಕಟಾಚಲ ಹೆಗಡೆ
ಅಧ್ಯಕ್ಷರು, ದೆಹಲಿ ಕರ್ನಾಟಕ ಸಂಘ

ಗೌರವ ಅತಿಥಿ : ಶ್ರೀ ಚಂದ್ರಶೇಖರ ಕಂಬಾರ
ಜ್ಞಾನಪೀಠ ಪುರಸ್ಕೃತರ ಕನ್ನಡ ಲೇಖಕರು
ಶ್ರೀ ಸಿ.ಎನ್. ರಾಮಚಂದ್ರನ್
ಪ್ರಖ್ಯಾತ ಕನ್ನಡ ವಿಮರ್ಶಕರು

**ವಂದನಾರ್ಪಣೆ**

## ಸನ್ಮಾನ ಸಮಾರಂಭ

**ದೆಹಲಿ ಕರ್ನಾಟಕ ಸಂಘ ಹಾಗೂ ದೆಹಲಿಯ ಇತರ ಸಂಘ ಸಂಸ್ಥೆಗಳಿಂದ**

**ಶ್ರೀ ಚಂದ್ರಶೇಖರ ಕಂಬಾರ** ಅವರಿಗೆ
**(ಜ್ಞಾನಪೀಠ ಪುರಸ್ಕೃತ ಕನ್ನಡ ಲೇಖಕ)**

ಅಧ್ಯಕ್ಷತೆ : ಶ್ರೀ ವೀರಪ್ಪ ಮೊಯಿಲಿ
ಕೇಂದ್ರ ಸಚಿವರು, ಭಾರತ ಸರ್ಕಾರ

ಸಾಂಸ್ಕೃತಿಕ ಕಾರ್ಯಕ್ರಮ
ನಾಟಕ– **'ಅತ್ತೆಗೆ ಲತ್ತೆ'**
ರಚನೆ : ಗೌರೀಶ್ ಕಾಯ್ಕಿಣಿ
ದೆಹಲಿ ಕರ್ನಾಟಕ ಸಂಘದ ಕಲಾವಿದರಿಂದ

**ಕಾರ್ಯಕ್ರಮದ ನಂತರ ಊಟದ ವ್ಯವಸ್ಥೆ ಮಾಡಲಾಗಿದೆ**

**22.01.2012 ಭಾನುವಾರ**
**ವಿಚಾರ ಸಂಕಿರಣ**

ಬೆಳಿಗ್ಗೆ 10.30 ಗೋಷ್ಠಿ–1

ಅಧ್ಯಕ್ಷತೆ : ಶ್ರೀ ವಿಷ್ಣು ನಾಯ್ಕ್
ಸದಸ್ಯರು, ಸಾಹಿತ್ಯ ಅಕಾಡೆಮಿ, ಬೆಂಗಳೂರು

ಪ್ರಬಂಧಕಾರರು : ಪ್ರೊ. ಟಿ.ಎಸ್. ಸತ್ಯನಾಥ್ / **ಗೌರೀಶ ಕಾಯ್ಕಿಣಿ ಹಾಗೂ ಭಾರತೀಯ ವೈಚಾರಿಕ ಪರಂಪರೆ**
ಶ್ರೀ ಎಂ.ಜಿ. ಹೆಗಡೆ, ಕುಮಟಾ / **ಗೌರೀಶ ಕಾಯ್ಕಿಣಿ ಮತ್ತು ಆಧುನಿಕತೆಯ ಪ್ರಶ್ನೆ**

ಮಧ್ಯಾಹ್ನ 12.00 ಗೋಷ್ಠಿ–2

ಅಧ್ಯಕ್ಷತೆ : ಶ್ರೀ ಎಲ್.ಕೆ. ಅತೀಕ್

ಪ್ರಬಂಧಕಾರರು : ಡಾ. ಪುರುಷೋತ್ತಮ ಬಿಳಿಮಲೆ / **ಗೌರೀಶ ಕಾಯ್ಕಿಣಿ ಅವರ ವೈಚಾರಿಕ ಬರಹಗಳು**
ಶ್ರೀ ಜಯಂತ್ ಕಾಯ್ಕಿಣಿ / **ಗೌರೀಶ ಕಾಯ್ಕಿಣಿ ಅವರ ವ್ಯಕ್ತಿತ್ವ**

ಮಧ್ಯಾಹ್ನ 3.00 **ಸಮಾರೋಪ ಸಮಾರಂಭ**

ಸಮಾರೋಪ ಭಾಷಣ : ಶ್ರೀ ಚಂದ್ರಶೇಖರ ಕಂಬಾರ
ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ
ಕನ್ನಡ ಲೇಖಕರು

ಅಧ್ಯಕ್ಷತೆ : ಶ್ರೀ ಐ. ರಾಮಮೋಹನ ರಾವ್
ಮಾಜಿ ಪ್ರಧಾನ ವಾರ್ತಾಧಿಕಾರಿಗಳು,
ಭಾರತ ಸರ್ಕಾರ

ವಂದನಾರ್ಪಣೆ : ಶ್ರೀ ಕೆ. ಶ್ರೀನಿವಾಸ ರಾವ್
ಸಹ ಕಾರ್ಯದರ್ಶಿ, ಸಾಹಿತ್ಯ ಅಕಾಡೆಮಿ

ಸಂಜೆ 4.00 **ಸಾಂಸ್ಕೃತಿಕ ಕಾರ್ಯಕ್ರಮ**

ಕು. ಸೃಜನ ಕಾಯ್ಕಿಣಿ ಅವರಿಂದ ಒಡಿಸ್ಸಿ ನೃತ್ಯ

ಸಂಜೆ 5.00 ನಾಟಕ **'ಸಾಂಬಶಿವ ಪ್ರಹಸನ'**
ನಿರ್ದೇಶನ : ರಾಮಕೃಷ್ಣ ಬೆಳತೂರ್
ರಚನೆ : ಚಂದ್ರಶೇಖರ ಕಂಬಾರ
'ಜನಪದರು' ಸಾಂಸ್ಕೃತಿಕ ವೇದಿಕೆ ಹೊಸಕೋಟೆ ತಂಡದಿಂದ

## ತಮಗೆಲ್ಲರಿಗೂ ಆದರದ ಸ್ವಾಗತ

**ಡಾ. ವೆಂಕಟಾಚಲ ಹೆಗಡೆ**
ಅಧ್ಯಕ್ಷರು

**ಸಿ.ಎಂ. ನಾಗರಾಜ**
ಪ್ರಧಾನ ಕಾರ್ಯದರ್ಶಿ

# ಪುಣೆಯಲ್ಲಿ 'ಕನ್ನಡ ಸಂಸ್ಕೃತಿ ಸಮಾವೇಶ'




ಡಿಸೆಂಬರ್ 2-3, 2011ರಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಪುಣೆಯ ಕನ್ನಡ ಸಂಘದಲ್ಲಿ 'ಕನ್ನಡ ಸಂಸ್ಕೃತಿ ಸಮಾವೇಶ'ವನ್ನು ಅದ್ದೂರಿ ಮತ್ತು ಸಡಗರದಿಂದ ಆಚರಿಸಲಾಯಿತು. ಪುಣೆಯ ಸಮಸ್ತ ಕನ್ನಡಿಗರು ಒಂದೆಡೆ ಸೇರಿ ತಮ್ಮ ಕನ್ನಡಾಭಿಮಾನದ ಪ್ರತೀಕವಾಗಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಸಂಭ್ರಮವನ್ನು ಹಂಚಿಕೊಂಡರು. ಈ ಸಮಾವೇಶದಲ್ಲಿ ಭಾರತದ ವಿವಿಧ ರಾಜ್ಯಗಳ ಕನ್ನಡ ಸಂಘಗಳ ಪ್ರತಿನಿಧಿಗಳು ಭಾಗವಹಿಸಿದ್ದುದು ವಿಶೇಷವಾಗಿತ್ತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳಾದ ಶ್ರೀ ಬಸವರಾಜು ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ, "ಕನ್ನಡ ಬಾಷೆಯು ಬಹಳ ಪ್ರಾಚೀನವಾದ ಹಾಗೂ ಸಂಪದ್ಭರಿತವಾದ ಭಾಷೆಯಾಗಿದ್ದು, ಉನ್ನತ ಸಂಸ್ಕೃತಿಯನ್ನು ಹೊಂದಿದೆ. ಇದು ತನ್ನ ಒಡಲೊಳಗೆ ಹತ್ತು ಹಲವು ಬಗೆಯ ಸಂಸ್ಕೃತಿ, ಆಚಾರ, ವಿಚಾರ, ಧರ್ಮ ಮತ್ತು ಸಂಪ್ರದಾಯಗಳ ವೈವಿಧ್ಯಗಳ ಆಗರವಾಗಿದೆ" ಎಂದು ಅಭಿಪ್ರಾಯಪಟ್ಟರು. ಹೊರನಾಡಿನಲ್ಲಿರುವ ಕನ್ನಡಿಗರಿಗೆ ಸಹಜವಾಗಿಯೇ ತಮ್ಮ ಭಾಷೆಯ ಮೇಲೆ ಹೆಚ್ಚಿನ ಅಭಿಮಾನವಿರುತ್ತದೆ. ಆದ್ದರಿಂದಲೇ ಕನ್ನಡಿಗರು ಎಲ್ಲಿಯೇ ಹೋಗಿ ನೆಲೆಸಲಿ, ತಮ್ಮವರು ಎಲ್ಲೆಲ್ಲಿ ಇದ್ದಾರೆಂಬುದನ್ನು ಕಂಡು ಹಿಡಿದು ಹೀಗೆ ಸಂಘಗಳನ್ನು ಕಟ್ಟಿಕೊಂಡು, ಹಲವು ಬಗೆಯ ಕಾರ್ಯಕ್ರಮಗಳನ್ನು ಮಾಡುವ ಮೂಲಕ ಸಂಭ್ರಮಿಸುತ್ತಾರೆ ಎಂದು ಹೇಳಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ್ ಅವರು ಕನ್ನಡ ಸಾಹಿತ್ಯದ ಹಿರಿಮೆ ಗರಿಮೆಗಳನ್ನು ಕುರಿತು ಮಾತನಾಡುತ್ತಾ, "ಕನ್ನಡ ಸಾಹಿತ್ಯ ಜಗತ್ತಿನ ಯಾವುದೇ ಭಾಷೆಯ ಸಾಹಿತ್ಯಗಳಿಗಿಂತಲೂ ಕಡಿಮೆಯಾಗಿಲ್ಲ. ಸಾಹಿತ್ಯ ಕ್ಷೇತ್ರದಲ್ಲಿ ನೀಡಲಾಗುವ ಭಾರತದ ಅತ್ಯುನ್ನತವಾದ ಪ್ರಶಸ್ತಿಯಾದ ಜ್ಞಾನಪೀಠ ಪ್ರಶಸ್ತಿ ಕನ್ನಡಕ್ಕೇ ಹೆಚ್ಚಿನ ಸಂಖ್ಯೆಯಲ್ಲಿ ದೊರಕಿರುವುದು ನಮಗೆಲ್ಲರಿಗೂ ಹೆಮ್ಮೆಯ ಸಂಗತಿ" ಎಂದು ಹೇಳಿದರು. ಕನ್ನಡಿಗರು ಉದ್ಯೋಗ ನಿಮಿತ್ತ ಎಲ್ಲೇ ಹೋಗಿ ನೆಲೆಸಲಿ, ತಮ್ಮ ಮನೆಯಲ್ಲಿ ಕನ್ನಡ ಮಾತನಾಡುವುದನ್ನು, ಮಕ್ಕಳಿಗೆ ಕನ್ನಡ ಹೇಳಿಕೊಡುವುದನ್ನು ಮರೆಯಬಾರದು ಎಂದು ಕಿವಿಮಾತು ಹೇಳಿದರು. ಪುಣೆ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀ ಕುಶಾಲ ಹೆಗಡೆಯವರು ಮಾತನಾಡಿ, ಮಹಾರಾಷ್ಟ್ರದ ಹಲವು ಪ್ರದೇಶಗಳು ಸ್ವಾತಂತ್ರ್ಯ ಪೂರ್ವದಲ್ಲಿ ಕರ್ನಾಟಕ ಪ್ರಾಂತ್ಯಕ್ಕೆ ಸೇರಿದ್ದುದನ್ನು ನೆನಪಿಸಿಕೊಂಡರು. ಆ ಕಾರಣದಿಂದಲೇ ಇಂದಿಗೂ ಮಹಾರಾಷ್ಟ್ರದ ಸಂಸ್ಕೃತಿ ಮತ್ತು ಆಚರಣೆಗಳಲ್ಲಿ ಕನ್ನಡ ಸಂಸ್ಕೃತಿಯ ಪ್ರಭಾವವನ್ನು ಕಾಣಬಹುದು ಎಂದು ಹೇಳಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕರಾದ ಕಾ.ತ. ಚಿಕ್ಕಣ್ಣ ಅವರು ವಂದಿಸಿದರು.

ಅದೇ ದಿನ ಅಪರಾಹ್ನ ನಡೆದ ವಿಚಾರ ಗೋಷ್ಠಿಯಲ್ಲಿ ಮೊದಲ ಪ್ರಬಂಧ ಮಂಡಿಸಿದ ಪ್ರಸಿದ್ಧ ಅನುವಾದಕರಾದ ಶ್ರೀ ಚಂದ್ರಕಾಂತ ಪೋಕಳೆಯವರು 'ಕನ್ನಡ ಮತ್ತು ಮರಾಠಿ ಸಾಂಸ್ಕೃತಿಕ ಕೊಳು-ಕೊಡುಗೆ' ಎಂಬ ವಿಷಯದ ಮೇಲೆ ಮಾತಾಡುತ್ತಾ ಶ್ರವಣ ಬೆಳಗೊಳದ ಬಾಹುಬಲಿ ವಿಗ್ರಹ ನಿರ್ಮಾಣ ಕಾಲದಲ್ಲೇ ಮರಾಠಿ ಭಾಷೆಯಲ್ಲಿ ಶಾಸನ ದೊರಕುತ್ತದೆ ಎಂದೂ, ಇದು ಕನ್ನಡ ಮತ್ತು ಮರಾಠಿಗರ ನಡುವಿನ ಬಾಂಧವ್ಯದ ಪ್ರತೀಕವೆಂದೂ ಹೇಳಿದರು. ಅಲ್ಲದೆ ಮಹಾರಾಷ್ಟ್ರದಲ್ಲಿ ಕನ್ನಡ ಸಾಹಿತ್ಯ, ಭಾಷೆಗಳ ನಡುವೆ ಇರುವ ಪರಸ್ಪರ ಸೌಹಾರ್ದಯುತ ಸಂಬಂಧಗಳನ್ನು ವಿವರಿಸಿದರು. ಕರ್ನಾಟಕ ಮಹಾರಾಷ್ಟ್ರ ಪ್ರಾಂತ್ಯಗಳ ಸಂಬಂಧ ಇಂದು ನೆನ್ನೆಯದಲ್ಲ. ಕನ್ನಡದ ಮೊದಲ ಕೃತಿಯಾದ ಕವಿರಾಜ ಮಾರ್ಗದಲ್ಲೇ ಈ ಎರಡೂ ರಾಜ್ಯಗಳ ನಡುವೆ ಸಂಪರ್ಕವಿದ್ದುದನ್ನು ಕಾಣಬಹುದು ಎಂದರು. ಕರ್ನಾಟಕದ ವಿಸ್ತಾರವನ್ನು ಗುರುತಿಸುವ ಸಂದರ್ಭದಲ್ಲಿ 'ಕಾವೇರಿಯಿಂದಮಾ ಗೋದಾವರಿವರಮಿರ್ದ ಕನ್ನಡ ನಾಡಿ'ನ ಬಗ್ಗೆ ಅಲ್ಲಿ ಉಲ್ಲೇಖಿಸಿರುವುದನ್ನು ಸ್ಮರಿಸಿಕೊಂಡರು. ಮದ್ರಾಸ್ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ತಮಿಳ್ ಸೆಲ್ವಿಯವರು 'ಹೊರನಾಡಿನಲ್ಲಿ ಸಾಂಸ್ಕೃತಿಕ ಬಾಂಧವ್ಯ' ಎಂಬ ವಿಷಯದ ಬಗ್ಗೆ ಮಾತನಾಡುತ್ತಾ ಕನ್ನಡ, ತೆಲುಗು, ಮರಾಠಿ, ತಮಿಳು ಹಾಗೂ ಇತರ ಭಾಷೆಗಳ ನಡುವಿನ ಪರಸ್ಪರ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಸಂಬಂಧಗಳನ್ನು ವಿವರಿಸಿದರು. ಈ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಡಾ.ಪುರುಷೋತ್ತಮ ಬಿಳಿಮಲೆಯವರು ಕನ್ನಡ- ಮರಾಠಿ ಮತ್ತು ಕನ್ನಡ-ತಮಿಳುವಿನ ನಡುವಣ ಸಂಬಂಧಗಳನ್ನು ಹೊಸ ಆಕರಗಳ ಮೂಲಕ ನೋಡಬೇಕಾದ ಅಗತ್ಯವನ್ನು ಪ್ರತಿಪಾದಿಸುತ್ತಾ ಹೇಗೆ ಮಹಾರಾಷ್ಟ್ರದ ಜೆಜೂರಿ ಖಂಡೋಬಾ ಮತ್ತು ಕರ್ನಾಟಕದ ಮೈಲಾರಲಿಂಗ ಎರಡೂ ಭಾಷೆಗಳ ಜನರ ನಡುವೆ ಸಂಬಂಧ ಬೆಸೆದಿದೆ ಎಂಬುದನ್ನು ಸಾಧಾರವಾಗಿ ವಿವರಿಸಿ, ಜನರ ನಡುವಿನ ಸಂಬಂಧಗಳನ್ನು ರಾಜಕೀಯದ ಆಚೆಗಿರಿಸಿ ನೋಡಬೇಕಾದ ಅಗತ್ಯವನ್ನು ಒತ್ತಿ ಹೇಳಿದರು.

ಈ ಸಂದರ್ಭದಲ್ಲಿ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಯಶವಂತ ಹಳಿಬಂಡಿ ಮತ್ತು ತಂಡದವರು ಸುಗಮ ಸಂಗೀತ ಕಾರ್ಯಕ್ರಮವನ್ನು, ಪಂಡಿತ ಉಪೇಂದ್ರ ಭಟ್ ಅವರು ಹಿಂದೂಸ್ತಾನಿ ಸಂಗೀತವನ್ನು, ವಿದುಷಿ ಶ್ಯಾಮಲಾ ಪ್ರಕಾಶ್ ಅವರು ಕರ್ನಾಟಕ ಸಂಗೀತವನ್ನು, ಮುಂಬೈನ ಪದವೀಧರ ಯಕ್ಷಗಾನ ಸಮಿತಿಯವರು 'ಅಜಮುಖಿ-ದುರ್ವಾಸ ಪ್ರಸಂಗ' ಎಂಬ ಯಕ್ಷಗಾನ ಪ್ರಸಂಗವನ್ನು, ಕಾನಡಿ ವಿಠ್ಠಲ ಎಂಬ ನೃತ್ಯ ರೂಪಕವನ್ನು, ವಡಾಲ ರಾಷ್ಟ್ರೀಯ ಕನ್ನಡ ಶಾಲೆಯ ಮಕ್ಕಳು ಜಾನಪದ ನೃತ್ಯ ರೂಪಕವನ್ನು, ಪ್ರದರ್ಶಿಸಿದರು. ಅಲ್ಲದೆ ಜಡೆ ಕೋಲಾಟ, ದಟ್ಟಿ ಕುಣಿತ, ಪುರುವಂತಿಕೆ, ಕರಡಿ ಮಜಲು, ಪೂಜಾ ಕುಣಿತ ಮೊದಲಾದ ಜಾನಪದ ವೈವಿಧ್ಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಎರಡನೇ ದಿನ ನಡೆದ ಸಂವಾದ ಗೋಷ್ಠಿಯಲ್ಲಿ ಪುಣೆಯ ಕನ್ನಡಿಗರ ಜೊತೆಗೆ ದೆಹಲಿ, ಮುಂಬೈ, ಚೆನ್ನೈ, ಪುಣೆ, ವಡೋದರಾ, ವಿಶಾಖಪಟ್ಟಣ, ಗುಜರಾತ್, ಕಾಸರಗೋಡು, ಜತ್ತ, ಅಕ್ಕಲಕೋಟ, ಮಧುರೈ ಮೊದಲಾದ ಕನ್ನಡ ಸಂಘಗಳ ಪ್ರತಿನಿಧಿಗಳು ಉತ್ಸಾಹದಿಂದ ಭಾಗವಹಿಸಿದ್ದು ವಿಶೇಷವಾಗಿತ್ತು. ದೆಹಲಿ ಕರ್ನಾಟಕ ಸಂಘದ ಪ್ರತಿನಿಧಿಯಾಗಿ ಭಾಗವಹಿಸಿದ್ದ ಖಜಾಂಚಿ ಶ್ರೀ ಕೆ.ಆರ್. ರಾಮಮೂರ್ತಿಯವರು ಸಂವಾದದ ಮೊದಲಲ್ಲಿ ಮಾತಾಡುತ್ತಾ "ಹೊರನಾಡಿನ ಎಲ್ಲ ಕನ್ನಡ ಸಂಘಗಳ ವಿಳಾಸ ವೆಬ್ ಸೈಟ್‌ನಲ್ಲಿ ದೊರಕುವಂತೆ ಸಂಸ್ಕೃತಿ ಇಲಾಖೆ ಕಾರ್ಯಪ್ರವೃತ್ತವಾಗಬೇಕು ಮತ್ತು ಈ ಬಗೆಯ ಸಮಾವೇಶಗಳನ್ನು ಪ್ರಾದೇಶಿಕವಾಗಿ ನಡೆಸಬೇಕು" ಎಂದು ಅಭಿಪ್ರಾಯಪಟ್ಟಿದ್ದನ್ನು ಎಲ್ಲ ಪ್ರತಿನಿಧಿಗಳೂ ಕರತಾಡನದ ಮೂಲಕ ಸ್ವಾಗತಿಸಿದರು.

ಸಮಾರೋಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪುಣೆ ಕನ್ನಡ ಸಂಘದ ಉಪಾಧ್ಯಕ್ಷೆ ಶ್ರೀಮತಿ ಇಂದಿರಾ ಸಾಲಿಯಾನ ಅವರು ತಾವೆಂದೂ ಈ ಸಮಾರಂಭವನ್ನು ಮರೆಯಲು ಸಾಧ್ಯವಿಲ್ಲ ಎಂದು ಸಂಭ್ರಮಿಸಿದರು. ಸಿಂಬಿಯೋಸಿಸ್ ಕಾನೂನು ಕಾಲೇಜಿನ ನಿರ್ದೇಶಕಿ ಡಾ. ಶಶಿಕಲಾ ಗುರುಪುರ ಅವರು ಸಮಾರೋಪ ಭಾಷಣವನ್ನು ಮಾಡಿದರು. ಕನ್ನಡ ಸಂಸ್ಕೃತಿ ಇಲಾಖೆಯ ಅಧಿಕಾರಿಗಳಾದ ಶ್ರೀ ಬಾವಿಕಟ್ಟೆ ಮತ್ತು ಶ್ರೀಮತಿ ಶಾಂತಮ್ಮ ಅವರು ಎರಡೂ ದಿನಗಳ ಕಾಲ ಉಪಸ್ಥಿತರಿದ್ದು ಕಾರ್ಯಕ್ರಮ ಯಶಸ್ವಿಯಾಗಿ ನಡೆಯುವಂತೆ ನೋಡಿಕೊಂಡರು.

■ ಕೆ.ಆರ್. ರಾಮಮೂರ್ತಿ

# ರಾಷ್ಟ್ರದ 'ರಾಜಧಾನಿ'ಗೆ ಸಂ

ಆಧುನಿಕ ಭಾರತದ ಇತಿಹಾಸದಲ್ಲಿ ರಾಜಧಾನಿ ನವದೆಹಲಿಗೆ ಡಿಸೆಂಬರ್ 12, 2011 ರಂದು ನೂರು ವರ್ಷಗಳು ಮುಗಿದಿರುವುದರಿಂದ ಅದರ ಶತಮಾನೋತ್ಸವ ಆಯಿಯಿಚರಣೆ ಬಹು ಸಂಭ್ರಮ ಮತ್ತು ಸಡಗರದಿಂದ ನಡೆಯುತ್ತಿದೆ ಎಂದು ಹೇಳಬಹುದು. ಭಾರತದಲ್ಲಿ ಬ್ರಿಟಿಷರ ವಸಾಹತುಶಾಹಿ ಆಡಳಿತ ಸ್ಥಾಪನೆಯಾಗುವ ಮುಂಚೆಯು ದೆಹಲಿ ನಗರದಿಂದ ಹಲವಾರು ಅರಸು ಮನೆತನಗಳು ಆಡಳಿತ ನಡೆಸಿರುವುದುಂಟು. ದೆಹಲಿಗೆ 3500 ವರ್ಷಗಳ ಇತಿಹಾಸವಿರುವುದೆಂದು ದಂತ ಕಥೆಗಳು ಹೇಳುತ್ತವೆ. ಮಹಾಭಾರತದ ಪಾಂಡವರ ರಾಜಧಾನಿ ಎಂದು ಹೇಳಲಾದ ಇಂದ್ರಪ್ರಸ್ಥ ದೆಹಲಿ ನಗರದಲ್ಲಿತ್ತು ಎಂಬ ಐತಿಹ್ಯವಿದೆ. ದೆಹಲಿ ಹಲವಾರು ಪ್ರಾಂತೀಯ ಅರಸರುಗಳ ರಾಜಧಾನಿಯಾಗಿದ್ದಿತು. ದೆಹಲಿ ಸುಲ್ತಾನವಾದಿಯ 1206–1526ರ ಅವಧಿಯಲ್ಲಿ ದೆಹಲಿ ಪೂರ್ಣ ಪ್ರಮಾಣದ ರಾಜಧಾನಿಯಾಗಿದ್ದಿತು. ಈ ಅವಧಿಯಲ್ಲಿ ಗುಲಾಮ, ಖಿಲ್ಜಿ, ತುಘಲಕ್, ಸಯ್ಯದ್ ಮತ್ತು ಲೋಧಿ ಸಂತತಿಗಳು ದೆಹಲಿಯಿಂದ ಆಡಳಿತ ನಡೆಸಿದವು. 1327ರಲ್ಲಿ ಮಹಮ್ಮದ ಬಿನ್ ತುಘಲಕ್ ದೆಹಲಿಯಿಂದ ದಕ್ಷಿಣದ ದೇವಗಿರಿಗೆ ರಾಜಧಾನಿಯನ್ನು ವರ್ಗಾಯಿಸಿದನು. ಆದರೆ ಅವನ ಯೋಜನೆ ಯಶಸ್ವಿಯಾಗಲಿಲ್ಲವಾದ್ದರಿಂದ ಕೆಲ ತಿಂಗಳಲ್ಲಿಯೇ ದೆಹಲಿಗೆ ಪುನಃ ವರ್ಗಾಯಿಸಿದನು. ಮೊಗಲ ಬಾದಶಹರು ಹಲವಾರು ವರ್ಷ ದೆಹಲಿಯಿಂದ ಮತ್ತೆ ಕೆಲವು ವರ್ಷ ಬೇರೆ ಸ್ಥಳದಿಂದ ಆಳ್ವಿಕೆ ನಡೆಸಿದರು. ಮೊಗಲ ಬಾದಶಹ ಷಹಜಾನನ ಅಧಿಕಾರ ಅವಧಿಯಲ್ಲಿ ದೆಹಲಿ ನಗರ ಕಲೆ ಮತ್ತು ವಾಸ್ತುಶಿಲ್ಪ ಕಲೆಯ ಮುಖ್ಯ ಕೇಂದ್ರವಾಗಿದ್ದಿತು. ಅವನ ಆಡಳಿತದ ಅವಧಿಯಲ್ಲಿ ಅಂದಿನ ನವದೆಹಲಿ ನಗರದ ಐತಿಹಾಸಿಕ ಕಟ್ಟಡ ಕೆಂಪುಕೋಟೆಯ ನಿರ್ಮಾಣವಾಯಿತು. ಮೆಹರೋಲಿ, ಸಿರಿ, ತುಘಲಕಾಬಾದ್, ಫಿರೋಜಾಬಾದ್, ಪುರಾನಾಕಿಲ್ಲಾ ಮೊದಲಾದವು ದೆಹಲಿ ನಗರದ ಪ್ರಮುಖ ಕೇಂದ್ರಗಳಾಗಿದ್ದವು. ಅಲ್ಲದೆ ಷಹಜಾನನು ಷಹಜಾನಾಬಾದ ನಗರವನ್ನು 1638ರಲ್ಲಿ ನಿರ್ಮಿಸಿದನು. ಅದನ್ನು ಆಗ ನವದೆಹಲಿ ಎಂದು ಕರೆಯಲಾಗುತ್ತಿದ್ದಿತು. ಇಂದಿನ ನವದೆಹಲಿ ನಿರ್ಮಾಣವಾದಾಗ ಷಹಜಾನ ನಿರ್ಮಿಸಿದ ನವದೆಹಲಿ ಹಳೆ ದೆಹಲಿಯಾಯಿತು. ಅದನ್ನು Walled City ಎಂದು ಕರೆಯಲಾಗುತ್ತಿದೆ.

ದೆಹಲಿ ಇಸ್ಲಾಂ ಧರ್ಮದ ಕೇಂದ್ರವಾಗಿದ್ದಿತು. ನಿಜಾಮುದ್ದೀನ್ ಅಹುಲಿಯಾ, ಬಕ್ತಿಯಾರ ಕಕೆರಂತಹ ಸೂಫಿ ಸಂತರು ಬಾಳಿದ ನಗರ. ಜಮ್ಮಾ ಮಸ್ಜಿದ್, ನಿಜಾಮುದ್ದೀನ್ ದರ್ಗಾ, ಕೆಂಪುಕೋಟೆಗಳಂತಹ ಐತಿಹಾಸಿಕ ಕಟ್ಟಡಗಳು ಮೊಗಲ ಬಾದಶಹರ ಆಳ್ವಿಕೆಯಲ್ಲಿ ನಿರ್ಮಿತವಾದವುಗಳಾಗಿವೆ. ಮೊಗಲ ಬಾದಶಹರ ಅಧಿಕಾರ ಅವಧಿಯಲ್ಲಿ ವ್ಯಾಪಾರ ಮಾಡುವ ಅನುಮತಿ ಪಡೆದು ಇಲ್ಲಿಗೆ ಆಗಮಿಸಿದ ವಿದೇಶಿಯರು ಭಾರತೀಯರಲ್ಲಿನ ಆಂತರಿಕ ಕಲಹದ ಸದುಪಯೋಗ ಪಡೆದು ರಾಜಕೀಯ ವ್ಯವಹಾರವನ್ನು ನಡೆಸಿದರು. ಭಾರತಕ್ಕೆ ವ್ಯಾಪಾರಕ್ಕೆಂದು ಆಗಮಿಸಿದ ಡಚ್ಚರು, ಫ್ರೆಂಚರು, ಪೋರ್ಚುಗೀಸರು ಮತ್ತು ಇಂಗ್ಲಿಷರು ವ್ಯಾಪಾರದೊಂದಿಗೆ ತಮ್ಮ ದೇಶಗಳ ಸಾಮ್ರಾಜ್ಯವನ್ನು ಭಾರತದ ನೆಲದಲ್ಲಿ ಸ್ಥಾಪಿಸುವ ಸಾಹಸಕ್ಕೆ ಕೈಹಾಕಿ ಸ್ಥಳೀಯ ಅರಸರುಗಳೊಂದಿಗೆ ಸ್ಥಾನಿಕ ಒಪ್ಪಂದಗಳನ್ನು ಮಾಡಿಕೊಂಡರು. ಆ ವೇಳೆಗೆ ಉತ್ತರದಲ್ಲಿ ಮರಾಠರ ಪ್ರಾಬಲ್ಯ ಹೆಚ್ಚಾಗಿದ್ದಂತೆ ದಕ್ಷಿಣದಲ್ಲಿ ನಿಜಾಮ, ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನರು ಬಲಿಷ್ಠರಾಗಿದ್ದರು. ಹೀಗೆ ಭಾರತದಲ್ಲಿನ ಆಂತರಿಕ ರಾಜಕೀಯ ಕಲಹದ ಪೂರ್ಣ ಲಾಭ ಇಂಗ್ಲಿಷರು ಪಡೆದು ಭಾರತದಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿ ವ್ಯಾಪಾರ ಮತ್ತು ರಾಜಕೀಯ ಆಡಳಿತ ನಡೆಸುವ ಸಾಹಸಕ್ಕೆ ಕೈಹಾಕಿ ಅದರಲ್ಲಿ ಯಶಸ್ವಿಯಾಯಿತು.

ಜೂನ್ 23, 1757 ರಂದು ನಡೆದ ಪ್ಲಾಸಿ ಕದನ ಮತ್ತು ಅಕ್ಟೋಬರ್ 22, 1764 ರಂದು ನಡೆದ ಬಕ್ಸಾರ ಕದನಗಳಲ್ಲಿ ಬಂಗಾಲ, ಔಧ ನವಾಬರು ಮತ್ತು ಮೊಗಲ ಬಾದಶಹ ಕ್ಲೈವನ ನೇತೃತ್ವದಲ್ಲಿನ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿ ಸೈನಿಕರಿಂದ ಸೋಲನ್ನು ಅನುಭವಿಸಿದರು. ಇದರಿಂದ ಬಂಗಾಲ, ಬಿಹಾರ ಮತ್ತು ಒರಿಸ್ಸಾಗಳಲ್ಲಿ ಇಂಗ್ಲಿಷ್ ವ್ಯಾಪಾರಿ ಕಂಪನಿಯ ಆಡಳಿತ ಪ್ರಾರಂಭವಾಯಿತು. ಹಾಗೆಯೇ ಮುಂಬಯಿ ಮತ್ತು ಮದ್ರಾಸ್ ಪ್ರಾಂತ್ಯಗಳವರೆಗೆ ವಿಸ್ತರಿಸಿ ಭಾರತದ ಅರ್ಧದಷ್ಟು ಭೂಪ್ರದೇಶದಲ್ಲಿ ಕಂಪನಿ ಆಡಳಿತ ಸ್ಥಾಪಿತವಾಯಿತು.

ಔರಂಗಜೇಬನ ನಂತರದ ಮೊಗಲ ಬಾದಶಹರು ಬಲಿಷ್ಠರಾಗಿರಲಿಲ್ಲ. ಹೀಗಾಗಿ ನಾದಿರಶಹ ಮತ್ತು ಅಹಮ್ಮದ್‌ಷಾ ಅಬ್ದಾಲಿಗಳ ದಾಳಿಯಿಂದ ಮೊಗಲ ಸಾಮ್ರಾಜ್ಯ ರಕ್ಷಿಸಲು ಆಗಲಿಲ್ಲ. ಇದರಿಂದ ಮೊಗಲ ಸಾಮ್ರಾಜ್ಯ ಮತ್ತು ದೆಹಲಿ ನಗರಗಳು ತತ್ತರಿಸಿದವು. 1739ರ ಮಾರ್ಚ್ ತಿಂಗಳಲ್ಲಿ ಭಾರತದ ಮೇಲೆ ದಾಳಿ ಮಾಡಿದ ಪರ್ಶಿಯಾದ ನಾದಿರ್‌ಷಾ ಮಾರ್ಚ್ 11, 1739ರಂದು ದೆಹಲಿ ಪ್ರಜೆಗಳನ್ನು ತುಂಡರಿಸಲು ಆಜ್ಞೆ ಮಾಡಿದ. ಅದರಿಂದ 20,000 ಜನರು ಹತರಾದರು ಮತ್ತು ದೆಹಲಿ ನಗರದ ಹಲವು ಭಾಗಗಳಿಗೆ ಬೆಂಕಿ ಹಚ್ಚಲಾಯಿತು. ಸುಮಾರು 70ಕೋಟಿ ಮೌಲ್ಯದ ಸಂಪತ್ತನ್ನು ನಾದಿರ್‌ಷಾ ದೋಚಿಕೊಂಡು ಹೋದನು. ಷಹಜಾನನ ರತ್ನ ಖಚಿತ ಮಯೂರ ಸಿಂಹಾಸನ, ಜಗದ್ವಿಖ್ಯಾತ ಕೋಹಿನೂರ ವಜ್ರ, ಮುತ್ತುರತ್ನ ಮತ್ತು ಅಮೂಲ್ಯ ಆಭರಣಗಳ ಸೂರೆಯಾಯಿತು. ಅವನ ನಂತರ ಅಫ್ಘನ್ ದೊರೆ ಅಹಮ್ಮದ್ ಷಾ ಅಬ್ದಾಲಿ ಭಾರತದ ಮೇಲೆ ಐದು ಬಾರಿ ಸೈನಿಕ ದಾಳಿ ಮಾಡಿ ದೆಹಲಿಯಲ್ಲಿನ ಸಂಪತ್ತನ್ನು ಲೂಟಿ ಮಾಡಿದನು.

1857ರಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಆಡಳಿತದ ವಿರುದ್ಧ ದೇಶದಾದ್ಯಂತ ದಂಗೆಗಳಾದವು. ಅದನ್ನು ಭಾರತದ ಪ್ರಥಮ ಸ್ವಾತಂತ್ರ್ಯ ಯುದ್ಧವೆಂದೂ ಕರೆಯಲಾಗಿದೆ. ಮೊಗಲ ಬಾದಶಹ ಬಹದ್ದೂರ್ ಷಾ ಜಾಫರ್ ಅದರಲ್ಲಿ ಭಾಗವಹಿಸಿ ಸೋಲು ಅನುಭವಿಸಿದ್ದರಿಂದ ಸೆಪ್ಟಂಬರ್ 20, 1857ರಂದು ದೆಹಲಿ ಬ್ರಿಟಿಷರ ವಶವಾಯಿತು. ಬಹದ್ದೂರ್ ಷಾ ಜಾಫರ್‌ನ ಇಬ್ಬರು ಮಕ್ಕಳು ಮತ್ತು ಮೊಮ್ಮಗನನ್ನು ಇಂಗ್ಲಿಷರು ಗುಂಡಿಕ್ಕಿ ಕೊಂದರು. ಬಹದ್ದೂರ್ ಷಾ ಜಾಫರ ಬ್ರಿಟಿಷರ ಕೈದಿಯಾದನು. ಹೀಗೆ ಮೊಗಲ ವಂಶದ ಆಳ್ವಿಕೆ ಮುಕ್ತಾಯವಾಯಿತು. 19ನೆಯ ಶತಮಾನದ ಮಧ್ಯಭಾಗದ ವೇಳೆಗೆ ಭಾರತದ ಬಹುಭಾಗ ಬ್ರಿಟನ್ನಿನ ನೇರ ಆಡಳಿತಕ್ಕೆ ಒಳಪಟ್ಟಿತ್ತು. ಇತರ ಭಾಗಗಳಲ್ಲಿನ ದೇಶಿಯ ದೊರೆಗಳು ಬ್ರಿಟಿಷ್ ಆಳರಸರ ಪರಮಾಧಿಕಾರವನ್ನು ಅಂಗೀಕರಿಸಿ, ಆಂತರಿಕ ಆಡಳಿತದ ವಿಷಯದಲ್ಲಿ ಕೆಲಮಟ್ಟಿನ ಸ್ವಾತಂತ್ರ್ಯ ಉಳಿಸಿಕೊಂಡಿದ್ದರು. ಹಿಂದೂಗಳಿಗೆ ಬ್ರಿಟಿಷ್ ಆಳರಸರು ಮೊಗಲರಿಗಿಂತ ಹೆಚ್ಚು ಪರಕೀಯರಾಗಿ, ಪ್ರಬಲರಾಗಿ ತೋರಿದರು.

1757ರಿಂದ 1911 ವರೆಗೆ ಇಂಗ್ಲಿಷರು ಕಲ್ಕತ್ತ ನಗರದಿಂದ ಭಾರತದ ಆಡಳಿತ ನಡೆಸಿದರು. 1898–1905ರವರೆಗೆ ವೈಸರಾಯನಾಗಿದ್ದ ಲಾರ್ಡ್ ಕರ್ಜನ್



# ಂಭ್ರಮದ ಶತಮಾನೋತ್ಸವ

ಭಾರತೀಯರನ್ನು ಧರ್ಮದ ಆಧಾರದಿಂದ ಇಬ್ಭಾಗ ಮಾಡಿ ತಮ್ಮ ಆಡಳಿತ ಸುಭದ್ರವಾಗಿಸಿಕೊಳ್ಳಲು ಬಂಗಾಲವನ್ನು ಮುಸಲ್ಮಾನರು ಹೆಚ್ಚಿರುವ ಪೂರ್ವ ಬಂಗಾಲ ಮತ್ತು ಹಿಂದೂಗಳು ಹೆಚ್ಚಿರುವ ಪಶ್ಚಿಮ ಬಂಗಾಲ ಎಂದು ವಿಭಜಿಸಿದ ಆದೇಶವು ಅಕ್ಟೋಬರ್ 16,1905ರಂದು ಕಾರ್ಯದಲ್ಲಿ ಬಂದಿತು. ಬಂಗಾಲ ಸಂಘಟಿತವಾಗಿದ್ದರೆ ಬ್ರಿಟಿಷರು ಆಡಳಿತ ನಡೆಸುವುದು ಅಷ್ಟೊಂದು ಸುಲಭದ ಮಾತಾಗಿರಲಿಲ್ಲ. ಬಂಗಾಲ ವಿಭಜನೆ ಕುರಿತಂತೆ ಬ್ರಿಟಿಷರ ಗೃಹ ಕಾರ್ಯದರ್ಶಿ ರಿಸ್ಲೆಯ ಸಮರ್ಥನೆ ಹೀಗಿದೆ. "Bengal united is power; Bengal divided will pull several different ways. . .One of our main objects is to split up and thereby weaken a solid body of opposition to our rule". ಆಗ ಸಮಗ್ರ ಭಾರತವು ಬಂಗಾಲ ವಿಭಜನೆ ವಿರುದ್ಧ ರೋಷದಿಂದ ಎಚ್ಚೆತ್ತಿತ್ತು. ದೇಶದಾದ್ಯಂತ ಬಂಗಾಲ ವಿಭಜನೆ ವಿರುದ್ಧ ಸ್ವದೇಶೀ ಚಳವಳಿ ಪ್ರಾರಂಭವಾಯಿತು. ವಿದೇಶಿ ವಸ್ತುಗಳ ಬಹಿಷ್ಕಾರ, ಸ್ವದೇಶಿ ವಸ್ತುಗಳ ಸ್ವೀಕಾರ, ರಾಷ್ಟ್ರೀಯ ಶಿಕ್ಷಣ ಮತ್ತು ಸ್ವರಾಜದ ಬೇಡಿಕೆ ತತ್ವದ ಮೇಲೆ ಚಳವಳಿ ಉಗ್ರವಾಗಿ ನಡೆದುದ್ದರಿಂದ ಬಂಗಾಲದಲ್ಲಿ ಆಡಳಿತ ನಡೆಸುವುದು ಬ್ರಿಟಿಷರಿಗೆ ಸುಗಮವಾಗಲಿಲ್ಲ. ಇದೇ ವೇಳೆಗೆ ಬ್ರಿಟಿಷ್ ಸಾಮ್ರಾಟ ಏಳನೇ ಎಡ್ವರ್ಡ್ ಮರಣ ಹೊಂದಿದನು. ಸಾಮ್ರಾಟ 5ನೇ ಜಾರ್ಜನು ಅಧಿಕಾರಕ್ಕೆ ಬಂದನು. ದೊರೆ 5ನೇ ಜಾರ್ಜನು ತನ್ನ ಅಧಿಕಾರ ಸಿಂಹಾಸನಾರೋಹಣದ ಉತ್ಸವ ಭಾರತದಲ್ಲಿ ನಡೆಸಲು ಆಸಕ್ತನಾಗಿದ್ದನು. ಅದರಂತೆ ಅವರ ಸಿಂಹಾಸನಾರೋಹಣದ ದರಬಾರು ದೆಹಲಿಯಲ್ಲಿ 1911ರಲ್ಲಿ ಮಾಡುವ ತಯಾರಿ ನಡೆದವು.

ದೆಹಲಿ ನಗರದಲ್ಲಿ ಬ್ರಿಟಿಷ್ ಸಾಮ್ರಾಟರ ಮೂರು ದರ್ಬಾರುಗಳು ನಡೆದವು. 1877ರಲ್ಲಿ ಲಾರ್ಡ್ ಲಿಟ್ಟನ್ ವೈಸರಾಯನಾಗಿದ್ದಾಗ ಮೊದಲನೇ ದರ್ಬಾರು ದೆಹಲಿಯಲ್ಲಿ ನಡೆದು ಬ್ರಿಟಿಷ್ ವಿಕ್ಟೋರಿಯ ರಾಣಿಯನ್ನು ಭಾರತದ ಮಹಾರಾಣಿ ಎಂದು ಘೋಷಿಸಲಾಯಿತು. ಎರಡನೇ ದೆಹಲಿ ದರ್ಬಾರು 1903ರಲ್ಲಿ ಲಾರ್ಡ್ ಕರ್ಜನ್ ಭಾರತದ ವೈಸರಾಯನಾಗಿದ್ದ ಅವಧಿಯಲ್ಲಿ ನಡೆಯಿತು. ಆದರೆ 1911ರಲ್ಲಿ ನಡೆದ ದೆಹಲಿ ದರ್ಬಾರು ಐತಿಹಾಸಿಕವಾಗಿ ಮಹತ್ವದ್ದಾಗಿದೆ. ಯಾಕೆಂದರೆ ಬ್ರಿಟಿಷರು ಸಮುದ್ರ ಮಾರ್ಗವಾಗಿ ಭಾರತಕ್ಕೆ ಬಂದು ಕಲ್ಕತ್ತ ನಗರವನ್ನು ಆಯ್ಕೆ ಮಾಡಿಕೊಂಡು 1757ರಿಂದ 1911ರವರೆಗೆ ಭಾರತದಲ್ಲಿ ಆಡಳಿತ ನಡೆಸಿದರು. ಬಂಗಾಲ ವಿಭಜನೆಯಿಂದ ಕಲ್ಕತ್ತ ನಗರದಲ್ಲಿ ರಾಜಕೀಯ ವಾತಾವರಣ ಪ್ರಕ್ಷುಬ್ಧವಾಗಿದ್ದರಿಂದ ಬ್ರಿಟಿಷ್ ಆಡಳಿತ ಯಂತ್ರ ಸುಗಮವಾಗಿ ನಡೆಯುವುದು ಸಮಸ್ಯೆಯಾಯಿತು. ಬಂಗಾಲ ವಿಭಜನೆ ವಿರುದ್ಧ ಸ್ವದೇಶ ಚಳವಳಿ ಹಾಗು ಕ್ರಾಂತಿಕಾರಿ ಚಟವಟಿಕೆಗಳು ನಡೆದುದ್ದರಿಂದಾಗಿ ಭಾರತದಲ್ಲಿ ಬ್ರಿಟಿಷ್ ಆಡಳಿತದ ಕೇಂದ್ರವನ್ನು ದೆಹಲಿಗೆ ವರ್ಗಾಯಿಸುವ ಯೋಜನೆ ಮಾಡಲಾಗಿದ್ದಿತು. ಅದರ ಸುದ್ದಿ ಬಹಿರಂಗವಾಗದಂತೆ ಗುಪ್ತತೆಯನ್ನು ಕಾಪಾಡಲಾಗಿದ್ದಿತು. ಡಿಸೆಂಬರ್ 12, 1911ರಂದು ದೆಹಲಿಯಲ್ಲಿ ದರ್ಬಾರು ನಡೆಸುವ ಯೋಜನೆ ಸುಮಾರು ಒಂದು ವರ್ಷದಿಂದ ನಡೆದಿದ್ದಿತು. ಅದೇ ತಾನೆ ಸಾಮ್ರಾಟ 5ನೇ ಜಾರ್ಜ ಮತ್ತು ರಾಣಿ ಮೇರಿ ಅವರ ಮದುವೆಯಾಗಿದ್ದಿತು. ಸಾಮ್ರಾಟ್ 5ನೇ ಜಾರ್ಜನ ಸಿಂಹಾಸನಾರೋಹಣ ದೆಹಲಿ ನಗರದಲ್ಲಿ ಮಾಡಲು ನಿರ್ಧರಿಸಿದ್ದರಿಂದ ಬ್ರಿಟಿಷ್ ಸಾಮ್ರಾಜ್ಯದ ದಂಪತಿಗಳು ಮುಂಬಯಿ ಮಾರ್ಗವಾಗಿ ದೆಹಲಿಗೆ ಡಿಸೆಂಬರ್ 7, 1911ರಂದು ಬಂದು ತಲುಪಿದರು. ಸುಮಾರು 40 ಚದರ ಮೀಟರ್ ವಿಸ್ತಾರದ ದರ್ಬಾರ್ ಹಾಲ್ ಮತ್ತು ಕುಟೀರಗಳನ್ನು ಕಟ್ಟಲು 20 ಸಾವಿರ ಜನರು ಒಂದು ವರ್ಷ ಕಾರ್ಯ ನಿರ್ವಹಿಸಿದರು.

ದೆಹಲಿ ದರ್ಬಾರ್‌ನ ಈ ಉತ್ಸವದಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಪ್ರಮುಖ ಅತಿಥಿಗಳು ಭಾಗವಹಿಸಿದ್ದರು. ಅವರಲ್ಲಿ ಮುಖ್ಯವಾಗಿ ಬ್ರಿಟಿಷ್ ಸೈನಿಕ ಅಧಿಕಾರಿಗಳು, ನಾಗರಿಕ ಅಧಿಕಾರಿಗಳು, ನೂರಾರು ಪ್ರಮುಖ ಭಾರತೀಯ ಮತ್ತು ವಿದೇಶಿ ಅತಿಥಿಗಳು ಹಾಗೂ 562 ದೇಶಿ ಸಂಸ್ಥಾನಾಧೀಶರು ಭಾಗವಹಿಸಿದ್ದರು. 1911ರ ದೆಹಲಿ ದರ್ಬಾರಿನ 26,800 ಬೆಳ್ಳಿ ಪದಕಗಳ ಪುರಸ್ಕಾರ ಬ್ರಿಟಿಷ್ ಸೈನ್ಯಾಧಿಕಾರಿಗಳಿಗೆ ಮತ್ತು ಪ್ರಮುಖ ನಾಗರೀಕರಿಗೆ ಪ್ರದಾನ ಮಾಡಲಾಯಿತು. ಹಾಗೆ ಭಾರತದ ಪ್ರಮುಖ ದೇಶೀ ಅರಸರಿಗೆ ಮತ್ತು ಸರಕಾರದ ಉನ್ನತ ಹುದ್ದೆಯಲ್ಲಿದ್ದ ಅಧಿಕಾರಿಗಳಿಗೆ ಸುವರ್ಣ ಪದಕಗಳಿಂದ ಪುರಸ್ಕರಿಸಲಾಯಿತು. ಅಂದು ಸಾಮ್ರಾಟ್ 5ನೇ ಜಾರ್ಜ್ ದರ್ಬಾರ್‌ನಲ್ಲಿ ಭಾಗವಹಿಸಿದ ಅತಿಥಿಗಳ ಸಮ್ಮುಖದಲ್ಲಿ ಅಂದಿನವರೆಗೂ ಗುಪ್ತತೆಯನ್ನು ಕಾಯ್ದುಕೊಂಡು ಬಂದ ಒಂದು ಪ್ರಮುಖ ಘೋಷಣೆಯನ್ನು ಮಾಡಿದನು. ಅದೆಂದರೆ ಭಾರತದಲ್ಲಿನ ಬ್ರಿಟಿಷ್ ಆಡಳಿತದ ರಾಜಧಾನಿ ಕೇಂದ್ರವನ್ನು ಕಲ್ಕತ್ತಾದಿಂದ ದೆಹಲಿಗೆ ವರ್ಗಾವಣೆ ಮಾಡುವ ಘೋಷಣೆ. ಡಿಸೆಂಬರ್ 12, 1911ರಂದು ಬ್ರಿಟಿಷ್ ಸಾಮ್ರಾಟ್ 5ನೇ ಜಾರ್ಜ್‌ನ ಘೋಷಣೆ ಹೀಗಿದೆಃ "We are pleased to announce to Our people that on the advice of Our Ministers tendered after consultation with Our Governor General in Council, We have decided upon transfer of the seat of the Government of India from Calcutta to the ancient capital Delhi". ಸಾಮ್ರಾಟ್ ಜಾರ್ಜನು ಅಂದೇ ಬಂಗಾಲ ವಿಭಜನೆ ಅನುರ್ಜಿತಗೊಳಿಸಿರುವುದಾಗಿ ಘೋಷಿಸಿದನು. ಇದರಿಂದ ಬಂಗಾಳಿಗಳಿಗೆ ಭಾರೀ ಸಂತೋಷವಾಯಿತು. ಆದರೆ ರಾಜಧಾನಿ ಬದಲಾವಣೆ ನಿರ್ಧಾರದಿಂದ ಅವರು ಅಸಮಾಧಾನಗೊಂಡರು.

ಸಾಮ್ರಾಟ್ 5ನೇ ಜಾರ್ಜ್ ರಾಜಧಾನಿ ವರ್ಗಾವಣೆ ಘೋಷಿಸಿದಾಗ ದೆಹಲಿಯಲ್ಲಿ ಕೆಂಪುಕೋಟೆ, ಜಮ್ಮಾ ಮಸೀದಿ ಹೊರತು ಹೇಳಿಕೊಳ್ಳುವಂತಹ ಕಟ್ಟಡಗಳಿರಲಿಲ್ಲ. ಸಾಮ್ರಾಟ್ ಜಾರ್ಜ ಮತ್ತು ಮಹಾರಾಣಿ ಮೇರಿ ಡಿಸೆಂಬರ್ 15, 1911ರಂದು ಷಹಜಾನಾಬಾದ್ ಹತ್ತಿರ ಕಿಂಗ್ಸ್‌ವೇ ಕ್ಯಾಂಪ್‌ನಲ್ಲಿ ಹೊಸ ರಾಜಧಾನಿ ನವದೆಹಲಿಗೆ ಅಡಿಗಲ್ಲು ಹಾಕಿದರು. ಎಡ್ವರ್ಡ್ ಲ್ಯೂಟಿನ್ಸ್ ಸಲಹೆಯಂತೆ ಅದನ್ನು ರೈಸೀನ್ ಹಿಲ್‌ಗೆ ಸ್ಥಳಾಂತರಿಸಲಾಯಿತು. ರಾಜಧಾನಿ ವರ್ಗಾವಣೆ ಮಾಡಲು ಆಡಳಿತ ಕಚೇರಿ, ವೈಸರಾಯ ವಸತಿಗೃಹ ಮತ್ತು ಅಧಿಕಾರಿಗಳಿಗೆ ವಸತಿ ಗೃಹಗಳ ನಿರ್ಮಾಣ ಕಾರ್ಯ ಮಾಡಬೇಕಿದ್ದಿತು. ರೈಸಿನಾ ಹಿಲ್ ಪ್ರದೇಶವನ್ನು ಎಡ್ವರ್ಡ್ ಲ್ಯೂಟಿನ್ಸ್ ಆನೆ ಮೇಲೆ ಸವಾರಿ ಮಾಡಿ ಅದರ ನಕಾಶೆ ತಯಾರು ಮಾಡಿದನು. ದೆಹಲಿ ನಗರ ಯೋಜನೆ ಮಾಡುವ ಜವಾಬ್ದಾರಿಯನ್ನು ಅಂತರಾಷ್ಟ್ರೀಯ ಮಟ್ಟದ ಪ್ರಸಿದ್ಧ ವಾಸ್ತುಶಿಲ್ಪಕಾರರಾದ (Architect) ಎಡ್ವರ್ಡ್ ಲ್ಯಾಂಡ್‌ಸಿರ ಲ್ಯೂಟಿನ್ಸ್ ಮತ್ತು ಹರ್ಬರ್ಟ್ ಬೇಕರ್ ಅವರಿಗೆ ವಹಿಸಲಾಯಿತು. ಎಡ್ವರ್ಡ್ ಲ್ಯೂಟಿನ್ಸ್ ನಿರ್ಮಿಸಿದ ಈಗಿನ ರಾಷ್ಟ್ರಪತಿ ಭವನ ಅಂದಿನ ವೈಸರಾಯರ ವಸತಿಗೃಹವಾಗಿದ್ದಿತು. 330 ಎಕರೆ ವಿಸ್ತಾರವಾದ ಜಮೀನಿನಲ್ಲಿರುವ ರಾಷ್ಟ್ರಪತಿ ಭವನದಲ್ಲಿ ಬೃಹದಾಕಾರವಾದ 340 ಕೋಣೆಗಳಿವೆ. ಅದು 227 ಆಧಾರ ಸ್ತಂಭಗಳಿರುವ 2.4 ಕಿ. ಮೀಟರ್ ವಿಸ್ತಾರದ





ದೊರೆ 5ನೇ ಜಾರ್ಜ್

ಮೊಗಸಾಲೆಯನ್ನು ಹೊಂದಿದೆ. ಈ ಬೃಹದಾಕಾರವಾದ ಕಟ್ಟಡವನ್ನು 29,000 ಕಾರ್ಮಿಕರು ಎಂಟು ವರ್ಷಗಳವರೆಗೆ ನಿರ್ಮಿಸಿದರು. ಈ ಕಟ್ಟಡಕ್ಕೆ 45ಲಕ್ಷ ಇಟ್ಟಿಗೆ ಮತ್ತು 7,500 ಟನ್ ಸಿಮೆಂಟನ್ನು ಉಪಯೋಗಿಸಲಾಗಿದೆ. ಅಂದಿನ ಅದರ ಒಟ್ಟು ವೆಚ್ಚ 1.4ಕೋಟಿ ರೂಪಾಯಿ. ನವದೆಹಲಿ ಇಂಡಿಯಾ ಗೇಟನ್ನು ಮಹಾಯುದ್ಧದಲ್ಲಿ ಹತರಾದ ಭಾರತೀಯ ಸೈನಿಕರ ನೆನಪಿಗಾಗಿ ನಿರ್ಮಿಸಲಾಗಿದೆ. ಅದರ ನಕಾಶೆ ನಿರ್ಮಿಸಿದವರು ಎಡ್ವರ್ಡ್ ಲ್ಯೂಟಿನ್ಸ್. ಇದರ ಶಂಕುಸ್ಥಾಪನೆಯನ್ನು ಕನಾಟದ ಡೂಕ ಫೆಬ್ರವರಿ 10,1921ರಂದು ಮಾಡಿದನು. ಸೆಂಟ್ ಸ್ಟೀಫನ್ಸ್, ಹಿಂದು ಮತ್ತು ರಾಮಜಾಷ್ ಮಹಾವಿದ್ಯಾಲಯಗಳನ್ನು ತೆರೆಯುವ ಮೂಲಕ 1922ರಲ್ಲಿ ದೆಹಲಿ ವಿಶ್ವವಿದ್ಯಾಲಯದ ಸ್ಥಾಪನೆಯಾಯಿತು. ಬ್ರಿಟಿಷ ಅಧಿಕಾರಿಗಳಿಗೆ ಉತ್ತಮ ದರ್ಜೆಯ ಮಾರುಕಟ್ಟೆ, ಮನರಂಜನೆ ಮತ್ತು ಉತ್ತಮ ದರ್ಜೆಯ ಊಟೋಪಚಾರದ ವ್ಯವಸ್ಥೆಗೆಂದು ರಾಬರ್ಟ್ ಟೊರ್ ರಸೆಲ್ ಕನಾಟ್ ಪ್ಲೇಸ್ ಕಟ್ಟಲು ಪ್ರಾರಂಭಿಸಿದರು. ಹರ್ಬರ್ಟ್ ಬೇಕರ್ ನಾರ್ತ್ ಬ್ಲಾಕ್, ಸೌತ್ ಬ್ಲಾಕ್ ಮತ್ತು ಸಂಸದ್ ಭವನವನ್ನು ನಿರ್ಮಿಸುವ ಜವಾಬ್ದಾರಿ ವಹಿಸಿಕೊಂಡು–ಅವುಗಳ ಕಟ್ಟಡದ ಮೇಲುಸ್ತುವಾರಿ ಮಾಡಿದನು. ನವದೆಹಲಿ ನಿರ್ಮಾಣದ ಕಾರ್ಯ ತೀವ್ರಗತಿಯಲ್ಲಿ ನಡೆದಿದ್ದಿತು.



ರಾಣಿ ಮೇರಿ

ಭಾರತೀಯರು ಬ್ರಿಟಿಷರ ವಿರುದ್ಧ ದೇಶದ ಸ್ವಾತಂತ್ರ್ಯಕ್ಕಾಗಿ ಮಹಾತ್ಮ ಗಾಂಧೀಜಿಯವರ ನಾಯಕತ್ವದಲ್ಲಿ ಸವಿನಯ ಕಾನೂನುಭಂಗ ಚಳವಳಿ ಉಗ್ರವಾಗಿ ನಡೆಸಿದ್ದರು. ದೇಶದಾದ್ಯಂತ ಸಾವಿರಾರು ರಾಷ್ಟ್ರೀಯವಾದಿಗಳು ಜೈಲಿನಲ್ಲಿದ್ದರು. ಭಾರತೀಯರೊಂದಿಗೆ ಶಾಂತಿಗಾಗಿ ಬ್ರಿಟಿಷರು ಪ್ರಯತ್ನಿಸಿದರು. ಇದರಿಂದ 1931–32 ರ ಅವಧಿಯಲ್ಲಿ ಲಂಡನ್ನಿನಲ್ಲಿ ಚಕ್ರಾಗೋಷ್ಠಿಗಳು ನಡೆದವು. ನಿರೀಕ್ಷಿತ ಸಾಫಲ್ಯತೆ ದೊರೆಯಲಿಲ್ಲ. ಹೊಸ ರಾಜಧಾನಿ ನವದೆಹಲಿಯನ್ನು ಅಂದಿನ ವೈಸರಾಯ ಲಾರ್ಡ್ ಐರ್ವಿನ್ ಫೆಬ್ರವರಿ 10, 1931ರಂದು ಉದ್ಘಾಟಿಸಿದನು. ಆವಾಗ ನಾಲ್ಕು ಪ್ರಮುಖ ಸ್ತಂಭಗಳನ್ನು ನಿರ್ಮಿಸಲಾಯಿತು. ವೈಸರಾಯನು ಉದ್ಘಾಟನಾ ಸಂದರ್ಭದಲ್ಲಿ ಸೈನಿಕರಿಂದ 31ಗನ್ ನಮಸ್ಕಾರ ಪಡೆದನು. ಸುಮಾರು 5,000 ಅತಿಥಿಗಳು ಅದರಲ್ಲಿ ಭಾಗವಹಿಸಿದ್ದರು. ಲಾರ್ಡ್ ಐರ್ವಿನ್ ಅದೇ ವರ್ಷ ಇಂಡಿಯಾ ಗೇಟನ್ನು ಉದ್ಘಾಟಿಸಿದನು. ರಾಜಧಾನಿ ವರ್ಗಾವಣೆಯಾದ ನಂತರ ನವದೆಹಲಿ ನಿರ್ಮಾಣ ಬಹಳ ವೇಗದಿಂದ ಬೆಳೆಯಿತು. 1933ರಲ್ಲಿ ದೆಹಲಿ ನಿವಾಸಿಗಳ ಮನೋರಂಜನೆಗಾಗಿ ರೀಗಲ್ ಸಿನೆಮಾ ಮಂದಿರವನ್ನು ತೆರೆಯಲಾಯಿತು. ಕನಾಟ್ ಪ್ಲೇಸ್ ನಿರ್ಮಾಣ ಕಾರ್ಯ ಮುಗಿದು ವ್ಯಾಪಾರ, ಮನರಂಜನೆ ಮತ್ತು ರುಚಿಯಾದ ಆಹಾರ ದೊರೆಯುವ ಮುಖ್ಯ ಕೇಂದ್ರವಾಯಿತು.

1934ರಲ್ಲಿ ಕನಾಟ್ ಪ್ಲೇಸ್‌ನಲ್ಲಿ ಇಂದಿನ ನಿರುಲಾ ಹೋಟೆಲ್ ಇಂಡಿಯಾ ಹೋಟೆಲ್ ಹೆಸರಿನಿಂದ ಪ್ರಾರಂಭ ಮಾಡಲಾಯಿತು. ಕ್ವೀನ್ಸ್‌ವೇಯಲ್ಲಿ ದಿ ಇಂಪಿರಿಯಲ್ ಹೋಟೆಲ್ ಕಟ್ಟಡ ಕಾರ್ಯ ಮುಗಿಯಿತು. 1939ರಲ್ಲಿ ದ್ವಿತೀಯ ಜಾಗತಿಕ ಯುದ್ಧ ಪ್ರಾರಂಭವಾಯಿತು. ನವದೆಹಲಿಯಲ್ಲಿ ಸಾವಿರಾರು ಬ್ರಿಟಿಷ್ ಹಾಗೂ ಅಮೆರಿಕ ಸೈನಿಕರು ಬಂದಿಳಿದರು. ದೆಹಲಿಯಲ್ಲಿ ಎಲ್ಲಿ ನೋಡಿದರಲ್ಲಿ ಬಿಳಿಯರೇ ತಿರುಗಾಡುವ ಹಾಗೆ ಕಂಡಿತು. ಭಾರಿ ಭಯಾನಕ ವಾತಾವರಣ. ಸುಭಾಸ್‌ಚಂದ್ರ ಭೋಸರ ಇಂಡಿಯನ್ ನ್ಯಾಶನಲ್ ಆರ್ಮಿ ದೆಹಲಿ ಪ್ರಯಾಣದ ಯೋಜನೆಯಲ್ಲಿದ್ದಿತು. "ನಮ್ಮ ಮಾತೃ ಭೂಮಿಯ ಬಂಧವಿಮೋಚನೆಯ ಸಮಯವೀಗ ಒದಗಿ ಬಂದಿದೆ. ಆದುದರಿಂದ 'ದಿಲ್ಲಿಯತ್ತ ಸಾಗಿರಿ' ಎಂಬ ರಣಗರ್ಜನೆಯಿಂದ ದಿಲ್ಲಿಯತ್ತ ಸಾಗೋಣ. ಕೆಂಪು ಕೋಟೆಯನ್ನು ವಶಪಡಿಸಿಕೊಂಡು ಅಲ್ಲಿಯೂ ಬ್ರಿಟಿಷ್ ಸಾಮ್ರಾಜ್ಯದ ಸಮಾಧಿ ಮಾಡೋಣ" ಎಂದು ಸುಭಾಷ್‌ಚಂದ್ರ ಭೋಸ್‌ರು ಪರದೇಶದಲ್ಲಿದ್ದ ಸ್ವತಂತ್ರ ಭಾರತದ ತಾತ್ಪೂರ್ತಿಕ ಸರಕಾರದ ಅಜಾದ್ ಹಿಂದ್ ಫೌಜಿಗೆ ಈ ಸಂದೇಶ ಕೊಟ್ಟು ದಿಲ್ಲಿಯ ಮೇಲೆ ದಾಳಿ ಹೂಡಲು ಅಜ್ಞೆ ಕೊಟ್ಟರು. ಇದರಿಂದ ಬ್ರಿಟಿಷರು ಸಂಕಟಕ್ಕೊಳಗಾದರು. ಒಂದು ಕಡೆಯಿಂದ ಮಹಾಯುದ್ಧದಲ್ಲಿ ವೈರಿ ರಾಷ್ಟ್ರಗಳೊಂದಿಗೆ ಹೋರಾಡುವುದಾದರೆ, ಇನ್ನೊಂದೆಡೆ ಭಾರತದಲ್ಲಿ ರಾಷ್ಟ್ರೀಯ ಆಂದೋಲನವನ್ನು ನಿಯಂತ್ರಿಸಬೇಕಿತ್ತು. ಸುಭಾಸ್‌ಚಂದ್ರ ಭೋಸರ ಸೈನ್ಯ ಪೂರ್ವೋತ್ತರ ಭಾಗದಲ್ಲಿ ದಾಳಿ ಮಾಡುವ ತಯಾರಿಯಲ್ಲಿರುವುದನ್ನು ಗಮನಿಸಿದ ಬ್ರಿಟಿಷರು ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಸಹಾಯ ಹಸ್ತಕ್ಕಾಗಿ ಕೈಚಾಚಿದರು. ಬ್ರಿಟಿಷರು ತಮ್ಮ ಒಡೆದು ಆಳುವ ನೀತಿಯಂತೆ ಭಾರತೀಯರನ್ನು ಕೇಳದೆ ಭಾರತೀಯ ಸೈನ್ಯ ಮಹಾಯುದ್ಧದಲ್ಲಿ ಭಾಗಿಯಾಗಿದೆ ಎಂದು ಘೋಷಿಸಿದರು. ಅಲ್ಲದೇ ಯುದ್ಧ ಮುಗಿದ ಮೇಲೆ ಭಾರತಿಯರಿಗೆ ಸ್ವಾತಂತ್ರ್ಯ ನೀಡಲಾಗುವುದು ಎಂದು ಬ್ರಿಟಿಷ್ ಪ್ರಧಾನಿ ವಿನ್ಸಟನ್ ಚರ್ಚಿಲ್ ಘೋಷಿಸಿದರು. ಆದರೂ ಮಹಾತ್ಮ ಗಾಂಧಿ ಬ್ರಿಟಿಷ್ ಸರಕಾರದ ವಿರುದ್ಧ ವೈಯಕ್ತಿಕ ಸತ್ಯಾಗ್ರಹ ಮಾಡುವಂತೆ ಭಾರತೀಯರಿಗೆ ಕರೆ ನೀಡಿದರು. ಲಕ್ಷಾಂತರ ಭಾರತೀಯರು ಬ್ರಿಟಿಷ ಸರಕಾರದ ವಿರುದ್ಧ ಯುದ್ಧ ಘೋಷಣೆಗಳನ್ನು ಕೂಗಿದರು. 25,000 ಜನರು ಸೆರೆಮನೆ ಸೇರಿದರು. ಎಡ್ವರ್ಡ್ ಲ್ಯೂಟಿನ್ಸ್ ಕ್ಷೇತ್ರ ಕಾರ್ಯಮಾಡಿ ನಿರ್ಮಿಸಿದ ನಕ್ಷೆಯಂತೆ ನವದೆಹಲಿ ನಿರ್ಮಾಣದ ಕಾರ್ಯ ನಡೆದಿದ್ದಿತು. 1945ರಲ್ಲಿ ಓಡಿಯನ್ ಸಿನೆಮಾ ಶುರುವಾಯಿತು.

ಆಗಸ್ಟ 15, 1947ರಂದು ಭಾರತ ಬ್ರಿಟಿಷ್ ಸಂಕೋಲೆಗಳಿಂದ ಸ್ವಾತಂತ್ರವಾಯಿತು. ದೇಶದ ಪ್ರಥಮ ಪ್ರಧಾನ ಮಂತ್ರಿ ಜವಾಹರಲಾಲ್ ನೆಹರು ಅವರು ಕೆಂಪುಕೋಟೆಯಲ್ಲಿ ಭಾರತದ ಸ್ವತಂತ್ರ ತ್ರಿರಂಗ ಧ್ವಜವನ್ನು ಹಾರಿಸಿ ಭಾರತೀಯರಿಗೆ ಶುಭ ಹಾರೈಸಿದರು. ದೆಹಲಿ ನಾಗರೀಕರು ರಾಷ್ಟ್ರಪತಿ ಭವನ ಮತ್ತು ಸಂಸತ್ ಭವನದ ಎದುರು ವಿಜೃಂಭಣೆಯಿಂದ ದೇಶದ ಪ್ರಥಮ ಸ್ವಾತಂತ್ರ್ಯೋತ್ಸವವನ್ನು ಆಚರಿಸಿದರು. ಆದರೆ ದೆಹಲಿಯಲ್ಲಿ ಭಯಾನಕ ವಾತಾವರಣ. ಧರ್ಮದ ಆಧಾರದ ಮೇಲೆ ದೇಶ ಇಬ್ಭಾಗವಾಗಿತ್ತು. ದೇಶದ ಗಡಿಯಿಂದ ಆಚೆಗಿದ್ದ ಸುಮಾರು 3 ಲಕ್ಷ ಹಿಂದೂ ಮತ್ತು ಸಿಖ್ ನಿರಾಶ್ರಿತರು ದೆಹಲಿಗೆ ಧಾವಿಸಿದರು. ಅವರಿಗೆಲ್ಲ ಪುನರ್ ವಸತಿ ಮಾಡುವ ವ್ಯವಸ್ಥೆ ನವದೆಹಲಿಯಲ್ಲಿ ನಡೆಯಿತು. ಜನವರಿ 30, 1948ರಂದು ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಹತ್ಯೆಯಾಯಿತು. ಸರ್ದಾರ್ ವಲ್ಲಭಭಾಯಿ ಪಟೇಲರು ದೇಶೀ ಸಂಸ್ಥಾನಗಳನ್ನು ಭಾರತದ ಒಕ್ಕೂಟದಲ್ಲಿ ಒಳಪಡಿಸುವ ಕಾರ್ಯದಲ್ಲಿ ನಿರತರಾಗಿದ್ದರು.

1951ರಲ್ಲಿ ದೆಹಲಿಯ ಸಾರ್ವಜನಿಕ ಗ್ರಂಥಾಲಯ ತೆರೆಯಲಾಯಿತು. 1955ರಲ್ಲಿ ಪಂಚತಾರಾ ಅಶೋಕ ಹೋಟೇಲ್‌ನ ನಿರ್ಮಾಣವಾಯಿತು. 1957ರಲ್ಲಿ ದೆಹಲಿ ನಗರ ಯೋಜನೆ ನಿರ್ಮಿಸಲು ದೆಹಲಿ ಅಭಿವೃದ್ಧಿ ಪ್ರಾಧಿಕಾರವನ್ನು (ಡಿ.ಡಿ.ಎ) ಸ್ಥಾಪಿಸಲಾಯಿತು. 1958ರಲ್ಲಿ ಭಾರತದ ಸರ್ವೋಚ್ಛ ನ್ಯಾಯಾಲಯದ ಕಟ್ಟಡ ಪೂರ್ಣಗೊಂಡಿತು. 1959ರಲ್ಲಿ ಮಂಡೀ ಹೌಸ್‌ನಲ್ಲಿ ರಾಷ್ಟ್ರೀಯ ನಾಟಕ ಶಾಲೆಯನ್ನು (ಎನ್.ಎಸ್.ಡಿ) ತೆರೆಯಲಾಯಿತು. 1969ರಲ್ಲಿ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ ಪ್ರಾರಂಭವಾಯಿತು. 2010ರ ಅಕ್ಟೋಬರ್ ತಿಂಗಳಿನಲ್ಲಿ ನವದೆಹಲಿಯಲ್ಲಿ ರಾಷ್ಟ್ರಮಂಡಳ ಪಂದ್ಯಗಳು ನಡೆದು ವಿಶ್ವದ ಹಲವು ರಾಷ್ಟ್ರಗಳು ಅದರಲ್ಲಿ ಭಾಗವಹಿಸಿದವು. ಅದಕ್ಕಾಗಿ ನವದೆಹಲಿಯನ್ನು ಮತ್ತಷ್ಟು ಸುಂದರಗೊಳಿಸುವ ಕಾರ್ಯ ನಡೆಯಿತು.

ನವದೆಹಲಿಯ ನೂರು ವರ್ಷದ ಇತಿಹಾಸದಲ್ಲಿ ಕನ್ನಡಿಗರು ಹಾಗೂ ಕನ್ನಡ ಸಂಸ್ಥೆಗಳು ತಮ್ಮ ಅಳಿಲು ಸೇವೆಯನ್ನು ಸಲ್ಲಿಸಿರುವರು. ಬಿ.ಡಿ. ಜತ್ತಿಯವರು ರಾಷ್ಟ್ರದ ಉಪ ರಾಷ್ಟ್ರಪತಿ ಹಾಗೂ ಹಂಗಾಮಿ ರಾಷ್ಟ್ರಪತಿಗಳಾಗಿ ಕಾರ್ಯ ನಿರ್ವಹಿಸಿರುವರು. ಎಸ್. ನಿಜಲಿಂಗಪ್ಪನವರು ಭಾರತದ ರಾಷ್ಟ್ರೀಯ ಕಾಂಗ್ರೆಸಿನ ಅಧ್ಯಕ್ಷರಾಗಿ ದೇಶ ಸೇವೆ ಮಾಡಿರುವರು. ಹೆಚ್.ಡಿ. ದೇವೇಗೌಡರು ರಾಷ್ಟ್ರದ ಪ್ರಧಾನ ಮಂತ್ರಿಗಳಾಗಿ ಐತಿಹಾಸಿಕ ಕೆಂಪುಕೋಟೆಯಿಂದ ಸ್ವಾತಂತ್ರ್ಯ ತ್ರಿರಂಗ ಧ್ವಜವನ್ನು ಹಾರಿಸಿ ರಾಷ್ಟ್ರವನ್ನು ಉದ್ದೇಶಿಸಿ ಭಾಷಣ ಮಾಡಿದರು. ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ನವದೆಹಲಿಯ ಮುಖ್ಯ ಭಾಗಗಳಾಗಿರುವವು. ವರ್ಷವಿಡೀ ನಡೆಯುವ ನವದೆಹಲಿ ಶತಮಾನೋತ್ಸವದಲ್ಲಿ ಕನ್ನಡಿಗರು ಸಮಭಾಗಿಯಾಗುವರು.

■ ಡಾ. ಜಿ.ಎ. ಬಿರಾದಾರ

# ಸಾಮ್ರಾಜ್ಯಗಳ ಸಮಾಧಿಯಲ್ಲಿ ಸಮೃದ್ಧ ಸೌಂದರ್ಯ

ದೆಹಲಿ ಅಂದರೆ ಚೆಲುವು. ಚೆಲುವು ಅಂದರೆ ದೆಹಲಿ. ಬೇಸಿಗೆಯಲ್ಲಿ ಬೆಂದ ಮೈಗೆ ಚಳಿಗಾಲದಲ್ಲಿ ಮಂಜಿನ ಇಂಪನ್ನು ಉಣಬಡಿಸುವ ದೆಹಲಿಯ ವೈಯ್ಯಾರಕ್ಕೆ ಮಾರುಹೋಗದ ಮಂದಿ ತೀರಾ ಕಮ್ಮಿ.

ಬ್ರಿಟಿಷರು ಅಡಿಪಾಯ ಹಾಕಿಕೊಟ್ಟ ಚೆಲುವಿನ ಚಿತ್ತಾರದ ಸ್ಫೂರ್ತಿಯೊಂದಿಗೆ ಇಂದು ಎದೆಯುಬ್ಬಿಸಿ ನಿಂತಿರುವ ದೆಹಲಿ ಅಭಿವೃದ್ಧಿಯ ಪಥದಲ್ಲಿ ಇನ್ನಿಲ್ಲದ ವೇಗದಲ್ಲಿ ಮುನ್ನುಗ್ಗುತ್ತಿದೆ. ಆಧುನಿಕತೆಯೊಂದಿಗೆ ಥಳುಕು ಹಾಕುತ್ತಾ ರಾಜಕೀಯದ ಶಕ್ತಿ ಕೇಂದ್ರವಾಗಿ ಪರಿವರ್ತಿತವಾಗಿರುವ ದೆಹಲಿ ನಾವೀನ್ಯತೆಗೆ ಹಿಡಿದ ಕನ್ನಡಿ.

ಆಂಗ್ಲೋ ಇಂಡಿಯನ್ ಮಾದರಿಯಲ್ಲಿ ನವದೆಹಲಿ ನಿರ್ಮಾಣವಾದ ಬಳಿಕವಂತೂ ತನ್ನದೇ ಆದ ಒನಪು ಒಯ್ಯಾರದೊಂದಿಗೆ ಇಡೀ ಜಗತ್ತಿನ ಹೃದಯ ಗೆದ್ದಿದೆ. ಅದೇ ನವದೆಹಲಿಗೆ ಇದೀಗ ನೂರರ ಸಂಭ್ರಮ.

ಇತಿಹಾಸದಿಂದ ಇಂದಿನವರೆಗೆ ದೆಹಲಿ ಎಂಬುದು ಅಧಿಕಾರಶಾಹಿ ಹಾಗೂ ಆಡಳಿತಶಾಹಿಗಳ ತವರೂರಾಗಿಬಿಟ್ಟಿದೆ. ಸಾಮ್ರಾಜ್ಯಗಳ ಸಮಾಧಿ ಎಂದರೂ ತಪ್ಪಲ್ಲ. ಹತ್ತಾರು ರಾಜಮನೆತನಗಳ ಅಧಿಕಾರ ಕೇಂದ್ರವಾಗಿದ್ದ ದೆಹಲಿಯಲ್ಲಿ ಎಷ್ಟೋ ರಾಜರು ಸುಖ ಕಂಡಿದ್ದಾರೆ, ದುಃಖವನ್ನೂ ಅನುಭವಿಸಿದ್ದಾರೆ. ರಕ್ತಸಿಕ್ತ ಇತಿಹಾಸ ದೆಹಲಿಗಿದೆ. ದೆಹಲಿ ಬ್ರಿಟಿಷರ ರಾಜಧಾನಿಯಾಗಿ ಪರಿವರ್ತನೆಗೊಂಡದ್ದು 1911ರಲ್ಲಿ. ಅಲ್ಲಿಯವರೆಗೆ ಕಲ್ಕತ್ತ ರಾಜಧಾನಿಯಾಗಿತ್ತು. ರಾಜಧಾನಿಯಾದ ಬಳಿಕವಂತೂ ದೆಹಲಿ ಹಿಂದಿರುಗಿ ನೋಡಲಿಲ್ಲ.

ನವದೆಹಲಿ ಎಂದಾಗ ನಮ್ಮ ಕಣ್ಣ ಮುಂದೆ ಬರುವುದು ಉದ್ದುದ್ದ ಹಾಗೂ ಅಷ್ಟೇ ಅಗಲವಾದ ವಿಶಾಲ ರಸ್ತೆಗಳು, ಬದಿಯಲ್ಲೇ ಹುಲ್ಲುಹಾಸು, ಅಭೂತಪೂರ್ವ ಕಲಾ ಕೆತ್ತನೆಯ ಪ್ರತೀಕವಾದ ರಾಷ್ಟ್ರಪತಿ ಭವನ, ರಾಜಕೀಯ ಚಟುವಟಿಕೆಯ ಕೋಟೆಯಾದ ಸಂಸತ್ ಭವನ, ಸೇನಾನಿಗಳ ವೀರಗಾಥೆಯ ನೆನಪಿಗಾಗಿ ನಿರ್ಮಿಸಿದ ಇಂಡಿಯಾ ಗೇಟ್, ವ್ಯಾಪಾರ ವಹಿವಾಟಿನ ಕೇಂದ್ರಬಿಂದುವಾದ ಕನಾಟ್ ಪ್ಲೇಸ್, ವಿಶ್ವವಿಖ್ಯಾತ ಇಂದಿರಾ ಗಾಂಧಿ ಇಂಟರ್ ನ್ಯಾಷನಲ್ ಏರ್ ಪೋರ್ಟ್..ಹೀಗೆ ಹತ್ತು ಹಲವು...

ಆದರೆ ನವದೆಹಲಿ ನಿರ್ಮಾಣವಾಗುವ ಮೊದಲು ಅದೇ ಸ್ಥಳಗಳು ಏನಾಗಿದ್ದವು ಎಂಬ ವಿಚಾರ ನಿಜಕ್ಕೂ ಕುತೂಹಲ. ಏಕೆಂದರೆ ಈಗಿನ ನವದೆಹಲಿ ಹಿಂದೆ ಕೇವಲ ಒಂದು ಸಣ್ಣ ಹಳ್ಳಿಯಾಗಿತ್ತು. ಆದರೆ ಬ್ರಿಟಿಷರು ಅದೇ ಸ್ಥಳವನ್ನು ಬದಲಾಯಿಸಿ, ನವದೆಹಲಿ ನಿರ್ಮಾಣಕ್ಕೆ ಮುಂದಾದರು.

ಬ್ರಿಟಿಷ್ ಆಡಳಿತಾವಧಿಯಲ್ಲಿ ವೈಸ್ ರಾಯ್ ಹೌಸ್ ಆಗಿದ್ದ ಇಂದಿನ ರಾಷ್ಟ್ರಪತಿ ಭವನವನ್ನು ಕಟ್ಟಿದ್ದು ಸಿಖ್ ಹಳ್ಳಿಯಾಗಿದ್ದ ರೈಸಿನಾ ಪಿಂಡ್ ಎಂಬಲ್ಲಿ. ಈಗ ನಾವು ಅದೇ ಜಾಗವನ್ನು ರೈಸಿನಾ ಹಿಲ್ ಎಂದು ಕರೆಯುತ್ತೇವೆ. ಸುಮಾರು 4000 ಎಕರೆ ಪ್ರದೇಶದಲ್ಲಿರುವ ರಾಷ್ಟ್ರಪತಿ ಭವನ, ಸಂಸತ್ತು, ನಾರ್ತ್ ಬ್ಲಾಕ್, ಸೌತ್ ಬ್ಲಾಕ್ ಹಾಗೂ ಸುತ್ತಮುತ್ತಲ ಪ್ರದೇಶಗಳನ್ನು ನಿರ್ಮಾಣ ಮಾಡುವ ಉದ್ದೇಶದಿಂದಲೇ ರೈಸಿನಾ ಮತ್ತು ಮಾಲ್ಚಾ ಹಳ್ಳಿಗಳಲ್ಲಿದ್ದ ಸುಮಾರು 300 ಕುಟುಂಬಗಳನ್ನು ಸ್ಥಳಾಂತರ ಮಾಡಲಾಯಿತು. ಈಗಿನ ನವದೆಹಲಿಯನ್ನು ನೋಡಿದರೆ ಇಲ್ಲಿ ನಿಜಕ್ಕೂ ಹಿಂದೆ ಹಳ್ಳಿ ಇತ್ತಾ ಎಂಬ ಪ್ರಶ್ನೆ ಮೂಡುತ್ತದೆ. ನವದೆಹಲಿಯ ನಿರ್ಮಾಣವನ್ನು ಕೈಗೆತ್ತಿಕೊಂಡ ಎಡ್ವಿನ್ ಲ್ಯೂಟೆನ್ಸ್ 1931ರಲ್ಲಿ ತನ್ನೆಲ್ಲಾ ಕೆಲಸಗಳನ್ನು ಮುಗಿಸಿದ. ಈಗಲೂ ಕೂಡ ನವದೆಹಲಿಯನ್ನು ಲ್ಯೂಟೆನ್ಸ್ ಡೆಲ್ಲಿ ಎಂದೇ ನೆನಪಿಸಿಕೊಳ್ಳಲಾಗುತ್ತದೆ. ನವದೆಹಲಿ ವಿನ್ಯಾಸ ಮಾಡಿದ್ದೇ ಲ್ಯೂಟೆನ್ಸ್. ಬ್ರಿಟಿಷ್ ಹಾಗೂ ಭಾರತೀಯ ಮಾದರಿಯಲ್ಲಿ ಕಟ್ಟಡಗಳನ್ನು ನಿರ್ಮಾಣ ಮಾಡಿದ ಆತ ಇಂದು ಕೂಡ ತನ್ನ ಛಾಪನ್ನು ಉಳಿಸಿಕೊಂಡಿದ್ದಾನೆ ಎಂದರೆ ಆತನ ಎಂಜಿನಿಯರಿಂಗ್ ಸಾಮರ್ಥ್ಯಕ್ಕೆ ಸಲಾಂ ಹೊಡೆಯಲೇಬೇಕು.

ನೂರುವರ್ಷಗಳ ಹಿಂದೆ ನವದೆಹಲಿ ನಿರ್ಮಾಣಕ್ಕೆ ಮುಂದಾದ ಬ್ರಿಟಿಷರಿಗೆ ತಾವೆಂದೂ ಭಾರತ ಬಿಟ್ಟುಹೋಗಲಿದ್ದೇವೆ ಎಂದುಕೊಂಡಿರಲಿಲ್ಲ. ಆ ಭಾವನೆಯಿಂದಲೇ ಅವರು ದೆಹಲಿಯನ್ನು ಸುಂದರ ನಗರಿಯಾಗಿ ನಿರ್ಮಾಣ ಮಾಡಿದ್ದು. ಕಲ್ಕತ್ತಾದ ಬೇಯುವ ಹವೆ ಬ್ರಿಟಿಷರನ್ನು ದೆಹಲಿಗೆ ಬರುವಂತೆ ಮಾಡಿತು. ಇಲ್ಲಿನ ವಾತಾವರಣ ಬ್ರಿಟಿಷರಿಗೆ ಅನುಕೂಲಕರವಾಗಿದ್ದರಿಂದ ಕೂಡ ದೆಹಲಿಯಲ್ಲೇ ಬಂದು ನೆಲೆಸಲು ನಿರ್ಧರಿಸಿದರು. ಬಂದವರನ್ನೆಲ್ಲಾ ವಿಶಾಲ ಹೃದಯದಿಂದ ಹಿಡಿದಪ್ಪಿಕೊಳ್ಳುವ ಉದಾರ ಮಹಾನಗರಿ ದೆಹಲಿ. ಇಲ್ಲಿ ಸ್ಥಳೀಯರಿಂದ ಹಿಡಿದು ದೇಶದ ನಾನಾಮೂಲೆಗಳಿಂದ ಬಂದು ನೆಲೆಸಿರುವವರಿದ್ದಾರೆ. ಹೊಟ್ಟೆಹೊರೆಯಲೆಂದು ಇನ್ನೆಲ್ಲಿಂದಲೋ ಬಂದು ದುಡಿವವರಿದ್ದಾರೆ. ದೆಹಲಿಗೆ ಜಾತಿ-ಧರ್ಮದ ಕಂದಕವಿಲ್ಲ. ಹಿಂದೂ, ಮುಸ್ಲಿಂ, ಕ್ರೈಸ್ತ, ಸಿಖ್, ಜೈನ, ಪಾರ್ಸಿ...ಹತ್ತು ಹಲವು ಜಾತಿ ಧರ್ಮದ ಮಂದಿ ದೆಹಲಿಯೆಂಬ ಮನೆಯೊಳಗೆ ನೆಲೆಸಿದ್ದಾರೆ ಎಂದರೆ ದೆಹಲಿಯ ಉದಾರತೆಯನ್ನು ಎಂದಿಗೂ ಪ್ರಶ್ನಿಸುವಂತಿಲ್ಲ. ಬಿಹಾರ, ಉತ್ತರ ಪ್ರದೇಶ, ಹರಿಯಾಣ, ಪಂಜಾಬ್, ಮಧ್ಯಪ್ರದೇಶ ಸೇರಿದಂತೆ ಹಲವು ರಾಜ್ಯಗಳಿಂದ ಬಂದ ಸಾಮಾನ್ಯರೂ ಕೂಡ ಇಲ್ಲಿ ಬದುಕು ಕಂಡುಕೊಂಡಿದ್ದಾರೆ. ಆದರೆ ಬಹುತೇಕ ಸಾಮಾನ್ಯರು ಇಲ್ಲಿನ ಶ್ರೀಮಂತ ವರ್ಗಕ್ಕೆ ಸಂಬಂಧಿಸಿದ ಮನೆಗಳಲ್ಲೋ ಅಥವಾ ಹೀಗೆ ಕೂಲಿ-ನಾಲಿ ಮಾಡಿಕೊಂಡು ಬದುಕಬೇಕಾಗಿದೆ. ಇದು ದೆಹಲಿಯ ಇನ್ನೊಂದು ಮುಖದ ವಾಸ್ತವ. ಹಾಗಿದ್ದರೂ ಜನರು ಇದನ್ನು ಒಪ್ಪಿಕೊಂಡಿದ್ದಾರೆ-ಅಪ್ಪಿಕೊಂಡಿದ್ದಾರೆ.ಸಾಂಸ್ಕೃತಿಕವಾಗಿ ದೆಹಲಿ ಅನುಕೂಲ ನಗರಿ. ಸರ್ವ ಕಲೆಗಳ ಒಗ್ಗೂಡುವಿಕೆಗೆ ದೆಹಲಿ ವೇದಿಕೆಯಾಗಿ ಸೃಜನಶೀಲ ಕಲಾ ಮನಸ್ಸುಗಳ ಹೃದಯ ಕದ್ದಿದೆ.

1947ರ ಸ್ವಾತಂತ್ರ್ಯದ ಬಳಿಕ ನವದೆಹಲಿಯನ್ನು ಅಧಿಕೃತವಾಗಿ ಭಾರತ ಸರ್ಕಾರಕ್ಕೆ ಬಿಟ್ಟುಕೊಡಲಾಯಿತು. ಭಾರತ ಪಾಕ್ ವಿಭಜನೆಯ ಸಮಯದಲ್ಲಿ ಪಶ್ಚಿಮ ಪಂಜಾಬ್‌ನಲ್ಲಿದ್ದ ಹಿಂದೂ ಹಾಗೂ ಸಿಖ್ ನಿರಾಶ್ರಿತರು ದೆಹಲಿಗೆ ಬಂದು ನೆಲೆಸಿದರು. ಅಂದಿನಿಂದ ಇಂದಿನವರೆಗೆ ದೆಹಲಿ ವಿವಿಧತೆಯ ಪ್ರತೀಕವಾಗಿಬಿಟ್ಟಿದೆ. ನಗರದ ಕೆಲವು ಭಾಗದಲ್ಲಂತೂ ಉದ್ಯಾನವನಗಳು ಕಂಗೊಳಿಸುತ್ತವೆ.. "ಲೋಧಿ ಗಾರ್ಡನ್"ನಂತಹ ಉದ್ಯಾನಗಳು ನಗರದ ಸೌಂದರ್ಯವನ್ನು ದುಪ್ಪಟ್ಟುಗೊಳಿಸಿವೆ. ಪಗಡಿ ತೊಟ್ಟ ಸಿಖ್ಖರು, ಚಿತ್ತಾಕರ್ಷಕ ಉಡುಪಿನೊಂದಿಗೆ ಮಿರಮಿರಮಿರುಗುವ ರಾಜಸ್ತಾನಿ ಮಂದಿ, ಗುಜರಾತಿ ಮಹಿಳೆಯರು, ಚಾಂದನಿ ಚೌಕ್ ನ ಅಂಗಡಿ ಮಾಲೀಕರು, ಟಿಬೆಟನ್ನರು, ಲಡಾಖಿಗಳು ದೆಹಲಿಯನ್ನೇ ಒಂದು ದೇಶವನ್ನಾಗಿ ಪರಿವರ್ತಿಸಿದ್ದಾರೆ. ಕಾಮನ್ ವೆಲ್ತ್ ಗೇಮ್ಸ್ ಬಳಿಕ ದೆಹಲಿಯಾದ್ಯಂತ ಮೆಟ್ರೋ ರೈಲು ಓಡಾಡುತ್ತಿರುವುದರಿಂದ ದೆಹಲಿ ಮೇಲಿನ ಸ್ಥಳೀಯರ ಪ್ರೀತಿ ಇಮ್ಮಡಿಯಾಗಿದೆ.

ಕಾಲಕ್ಕೆ ತಕ್ಕಂತೆ ಕೋಲ ಎಂಬಂತೆ ನವದೆಹಲಿ



ಮುನ್ನುಗ್ಗುತ್ತಿದ್ದರೂ ವಿಚಲಿತಗೊಳ್ಳದೆ ತನ್ನ ಪರಂಪರೆ, ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದಿದೆ ಹಳೆ ದೆಹಲಿ. ಇಂದೋ ನಾಳೆಯೋ ಅಂತಿರುವ ಅಲ್ಲಿನ ಪುರಾತನ ಕಟ್ಟಡಗಳು, ವ್ಯಾಪಾರ ಮಾರುಕಟ್ಟೆ, ಕಿಕ್ಕಿರಿದು ತುಂಬಿದ ವಾತಾವರಣ, ದಲ್ಲಾಳಿಗಳ ಹಿಂಡು, ಟ್ರಾಫಿಕ್ ಜಾಮ್ ಎಲ್ಲವೂ ನಿರಂತರ... 10 ವರ್ಷಗಳ ಬಳಿಕ ಹಳೆದೆಹಲಿಗೆ ತೆರಳಿದರೂ ಅದು ಹಾಗೆಯೇ ಇರಲಿದೆ. ಹಳೆ ದೆಹಲಿ ಎಂದಿಗೂ ಬದಲಾಗೋದಿಲ್ಲ ಎಂದು ಅಲ್ಲಿನ ಜನರೇ ಹೇಳುತ್ತಾರೆ.

ಹಳೆ ದೆಹಲಿಯ ಶತಮಾನದ ಕಥೆ ಹೇಳುವ ಜಿಲೇಬಿವಾಲಾಗಳು, 60 ರಿಂದ 70 ಬಗೆಯ ಪರೋಟಗಳನ್ನು ಉಣಬಡಿಸುವ ಎಂದೂ ಮರೆಯಲಾಗದ ಪರಾಟ ಗಲ್ಲಿಗಳು ದೆಹಲಿಯನ್ನ ಎಷ್ಟೋ ಹಿಂದಕ್ಕೆ ಕರೆದೊಯ್ಯುತ್ತವೆ... ಪರಾಟ ಗಲ್ಲಿಯ ಪರಾಟ ಸವಿ ಮೆಲ್ಲದವರಿಲ್ಲ. ಜವಹರಲಾಲ್ ನೆಹರೂರಿಂದ ಹಿಡಿದು ಬಾಲಿವುಡ್ ಸಿನಿಮಾ ನಟ ರಣಬೀರ್ ಕಪೂರ್ ವರಗೆ ಎಲ್ಲಾ ಮಹಾನ್ ಮಂದಿ ಇಲ್ಲಿನ ಪರಾಟಗಳಿಗೆ ಸೋತುಹೋಗಿದ್ದಾರೆ.

ಹಳೆದೆಹಲಿಯ ಚಾಂದಿನಿ ಚೌಕ್ ಬಗ್ಗೆ ಕೇಳದವರು ತುಂಬಾ ಕಡಿಮೆ. ಕೆಂಪುಕೋಟೆಗೆ ಅಂಟಿಕೊಂಡಂತಿರುವ ಚಾಂದಿನಿ ಚೌಕ್ ನಲ್ಲಿ ಸಿಗದ ವಸ್ತುಗಳಿಲ್ಲ. ಚೌಕಾಸಿ ಮಾಡಿ ಸಾಮಾಗ್ರಿ ಖರೀದಿ ಮಾಡಬಯಸುವ ಮಂದಿಗೆ ಹಳೆ ದೆಹಲಿ ಹೇಳಿಮಾಡಿಸಿದ ಜಾಗ. ವಿದೇಶಿ ಪ್ರವಾಸಿಗರಂತೂ ಇಲ್ಲಿ ದಂಡಿಯಾಗಿ ಕಾಣಸಿಗುತ್ತಾರೆ. ಇದೇ ಚಾಂದಿನಿ ಚೌಕ್ ಬಳಿ ಇರುವ ಫಿರೋಜ್ ಷಾ ಕೋಟ್ಲಾ ಮೈದಾನದ ಹತ್ತಿರದಲ್ಲೇ ಇರುವ ಜಿಬಿ ರೋಡ್ ನಲ್ಲಿ ಇಂದಿಗೂ ಮೈಮಾರಿಕೊಳ್ಳುವ ಹೆಣ್ಣುಮಕ್ಕಳನ್ನು ಕಾಣಬಹುದು.ಇನ್ನು ದೆಹಲಿಗೆ ಅಂಟಿಕೊಂಡಂತಿರುವ ಎರಡು ನಗರಿಗಳಂತೂ ಗಗನದೆತ್ತರಕ್ಕೆ ಬೆಳೆದುನಿಂತಿವೆ. ಹರ್ಯಾಣ ಗಡಿಭಾಗದಲ್ಲಿರುವ ಗುರ್ ಗಾಂವ್ ಹಾಗೂ ಉತ್ತರ ಪ್ರದೇಶದ ಗಡಿ ಭಾಗದಲ್ಲಿರುವ ನೋಯ್ಡಾ ಉದ್ಯೋಗ ತಾಣವಾಗಿದ್ದು ಲಕ್ಷಾಂತರ ಮಂದಿಗೆ ನಿರುದ್ಯೋಗ ನಿವಾರಣೆ ಮಾಡಿವೆ. ಒಂದು ಕಾಲದಲ್ಲಿ ಹಳ್ಳಿಯಾಗಿದ್ದ ಪ್ರದೇಶಗಳು ಥಳಥಳಿಸುವ ಮಾಲ್ ಹಾಗೂ ಕಂಪನಿಗಳಿಂದ ಮುಳುಗಿಹೋಗಿರುವುದು ದೆಹಲಿಯ ಪ್ರಭಾವದಿಂದಲೇ.


ದೆಹಲಿಯನ್ನು ದ್ವೇಷಿಸುವುದಕ್ಕಿಂತ ಇಷ್ಟಪಡುವವರೇ ಹೆಚ್ಚು. ಪೈಸಾ ವಾಲೋ ಕಾ ಮುಂಬೈ, ದಿಲ್ ವಾಲೋ ಕಾ ದಿಲ್ಲಿ ಎಂದು ಹೇಳುವುದೂ ಕೂಡ ಅದಕ್ಕೇ ಇರಬಹುದು. ಹಾಗಿದ್ದರೂ ಮಾನವನ ಸ್ವಾರ್ಥಕ್ಕೆ ದೆಹಲಿ ಬಲಿಯಾಗುತ್ತಲೇ ಇದೆ. ನಗರೀಕರಣ ದೆಹಲಿಯ ಐತಿಹಾಸಿಕ ಸ್ಮಾರಕಗಳನ್ನು ನುಂಗಿಹಾಕುತ್ತಿದ್ದರೂ, ತಲೆಕೆಡಿಸಿಕೊಳ್ಳುವವರು ಕಡಿಮೆಯಾಗಿರುವುದು ದೆಹಲಿಯ ವಿಪರ್ಯಾಸ.



ರೈಸಿನಾ ಬೆಟ್ಟದಲ್ಲಿ ವೈಸ್ ರಾಯ್ ಹೌಸನ್ನು ನಿರ್ಮಾಣ ಮಾಡಬೇಕೆಂದು ಎಡ್ವಿನ್ ಲ್ಯೂಟೆನ್ಸ್ ಗೆ ಹೊಳೆದದ್ದಾರೂ ಏಕೆ ಎಂಬ ಪ್ರಶ್ನೆಗಳು ಹಲವರ ಮನಸಲ್ಲಿ ಬರುವುದುಂಟು. ಒಂದೊಮ್ಮೆ ಎಡ್ವಿನ್ ಲ್ಯೂಟೆನ್ಸ್ ಆನೆಯ ಮೇಲೇರಿ ರೈಸಿನಾ ಬೆಟ್ಟದಲ್ಲಿ ಸಮೀಕ್ಷೆ ಮಾಡಲು ಹೊರಟು ನಿಂತ. ಅಂದು ಅದು ಸಾಕಷ್ಟು ಕಾಡು ಹಾಗೂ ಹಳ್ಳಿ ಪ್ರದೇಶಗಳಿಂದ ತುಂಬಿತ್ತು. ಹಾಗಿದ್ದರೂ ಎತ್ತರದ ಪ್ರದೇಶದಲ್ಲಿ ವೈಸ್ ರಾಯ್ ಹೌಸನ್ನು ನಿರ್ಮಾಣ ಮಾಡಿದರೆ ಎಲ್ಲದಕ್ಕೂ ಅನುಕೂಲವಾಗಬಹುದು ಎಂಬುದು ಲ್ಯೂಟೆನ್ಸ್ ಚಿಂತನೆಯಾಗಿತ್ತು. ಇದಕ್ಕೆ ಬ್ರಿಟಿಷರ ಸಮ್ಮತಿಯೂ ಸಿಕ್ಕಿತು. ಅಂದಿನ ಆ ಕಲ್ಪನೆಗೆ ರೂಪ ಬಂತು. 1931ರಲ್ಲಿ ಕಾಡಿನಿಂದ ತುಂಬಿದ್ದ ಹಳ್ಳಿಪ್ರದೇಶವೊಂದು ವೈಸ್ ರಾಯ್ ಹೌಸ್ ಆಗಿ ಮಾರ್ಪಾಡಾಯಿತು. ನವದೆಹಲಿ ನಿರ್ಮಾಣದ ನಕ್ಷೆ ತಯಾರಿ ಮಾಡಲು ಹಾಗೂ ವಿನ್ಯಾಸಕ್ಕೆ ರೂಪ ಕೊಡಲು ಲ್ಯೂಟೆನ್ಸ್ ಎಷ್ಟೆಷ್ಟೋ ದೇಶಗಳನ್ನೂ ಅಡ್ಡಾಡಿ ಸೊಗಸಾದ ವಾಸ್ತುಶಿಲ್ಪಕ್ಕೆ ನವದೆಹಲಿಯಲ್ಲಿ ನಾಂದಿ ಹಾಡಿದ. ಅಂತೂ 1947ರಲ್ಲಿ ಬ್ರಿಟಿಷರು ಭಾರತ ಬಿಟ್ಟರು. ಈ ಎಲ್ಲಾ ವಾಸ್ತುಶಿಲ್ಪಗಳು ಸಹಜವಾಗಿಯೇ ಭಾರತಕ್ಕೆ ವರದಾನವಾದವು.

■ ರಾಘವ ಶರ್ಮ
ವರದಿಗಾರ, ಜನಶ್ರೀ ವಾಹಿನಿ

# ರಾಷ್ಟ್ರಗೀತೆಗೆ ನೂರರ ಸಂಭ್ರಮ



ಜನ ಗಣ ಮನ . . .

'ಜನ ಗಣ ಮನ. . .' ನಾವಿದನ್ನು ರಾಷ್ಟ್ರಗೀತೆ ಎಂದು ಒಪ್ಪಿಕೊಳ್ಳುವ ಮುನ್ನ ಒಂದು ಸಾಮಾನ್ಯ ಗೀತೆ ಅಷ್ಟೆ. ವಿವಿಧತೆಯಲ್ಲಿ ಏಕತೆಯನ್ನು ಪ್ರದರ್ಶಿಸುವ ಭಾರತದ ಹಿರಿಮೆಯನ್ನು ಸಾರುವ ಈ ಕವಿತೆ ಬರೆದವರು ನೊಬೆಲ್ ಪ್ರಶಸ್ತಿ ಪುರಸ್ಕೃತ ಸಾಹಿತಿ ರವೀಂದ್ರನಾಥ ಟ್ಯಾಗೋರ್. ಬರೆದದ್ದು 1911ರ ಸಮಯದಲ್ಲಿ. ಈ ಕವಿತೆ ಮೊದಲು ಪ್ರಕಟಗೊಂಡಿದ್ದು ಟ್ಯಾಗೋರ್ ಅವರು ಸಂಪಾದಕರಾಗಿದ್ದ ಬ್ರಹ್ಮ ಸಮಾಜ ಪತ್ರಿಕೆ, ತತ್ವಬೋಧ ಪ್ರಕಾಶಿಕ ಪತ್ರಿಕೆಗಳಲ್ಲಿ. ರಾಗಬದ್ಧವಾಗಿ ಮೊದಲು ಹಾಡಿದ್ದು 1911ರ ಡಿಸೆಂಬರ್ 27ರಂದು ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಕೋಲ್ಕತ ಅಧಿವೇಶನದಲ್ಲಿ.

ಟ್ಯಾಗೋರ್ ಅವರು 'ಜನ ಗಣ ಮನ' ಗೀತೆಯನ್ನು ಬರೆದದ್ದು ಸಂಸ್ಕೃತ ಮಿಶ್ರಿತ ಬೆಂಗಾಲಿ ಭಾಷೆಯಲ್ಲಿ. ಭಾರತದ ವೈವಿಧ್ಯವನ್ನು ವರ್ಣಿಸುವ ಈ ಗೀತೆಯು ಸುದೀರ್ಘವಾದ 5 ನುಡಿಗಳನ್ನು ಹೊಂದಿತ್ತು. ಆದರೆ ನಂತರದ ದಿನಗಳಲ್ಲಿ ಚುಟುಕುಗೊಳಿಸುವ ಉದ್ದೇಶದಿಂದ ಕೆಲವು ನುಡಿಗಳನ್ನು ಕೈಬಿಡಲಾಯಿತು. ಇಂದು ನಾವು ಹಾಡುತ್ತಿರುವ 52 ಸೆಕೆಂಡುಗಳ ರಾಷ್ಟ್ರಗೀತೆಯು ಚುಟುಕು ರೂಪದ್ದಾಗಿದೆ.

**ರಾಷ್ಟ್ರಗೀತೆಯಾಗಿ ಅಸ್ತಿತ್ವಕ್ಕೆ**

ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಈ ಗೀತೆಯು ಜನಸಾಮಾನ್ಯರಲ್ಲಿ ರಾಷ್ಟ್ರಾಭಿಮಾನವನ್ನು ಹೆಚ್ಚಿಸಿತು. ಬ್ರಿಟಿಷರ ವಿರುದ್ಧ ಹೋರಾಡಲು ಪ್ರೇರೇಪಿಸಿತು. ಸ್ವಾತಂತ್ರ್ಯದ ನಂತರ ದೇಶದ ರಾಷ್ಟ್ರಗೀತೆಯನ್ನಾಗಿ ಬಂಕಿಮ್ ಚಂದ್ರ ಚಟರ್ಜಿ ಅವರ 'ವಂದೇ ಮಾತರಂ' ಗೀತೆಯನ್ನು ಆಯ್ಕೆ ಮಾಡಬೇಕೆ? ಅಥವಾ 'ಜನ ಗಣ ಮನ' ಗೀತೆಯನ್ನೇ? ಎಂಬ ಬಗ್ಗೆ ನಾಯಕರು ಹಲವು ಸುತ್ತಿನ ಚರ್ಚೆ ನಡೆಸಿದರು. ಕೊನೆಗೆ 1950ರ ಜನವರಿ 24ರಂದು ನಡೆದ ಶಾಸನ ಸಭೆಯಲ್ಲಿ 'ಜನ ಗಣ ಮನ' ಗೀತೆಯನ್ನು ರಾಷ್ಟ್ರಗೀತೆಯಾಗಿ ಅಧಿಕೃತವಾಗಿ ಘೋಷಿಸಲಾಯಿತು.

# ರಾಜಧಾನಿ ದೆಹಲಿಗೆ ನೂರು ವರುಷ

ಜಗತ್ತಿನ ಪ್ರಖ್ಯಾತ ನಗರಗಳಲ್ಲೊಂದಾದ ದೆಹಲಿಯು ಭಾರತ ದೇಶದ ರಾಜಧಾನಿಯಾಗಿ ಘೋಷಣೆಗೊಂಡು ದಶಂಬರ 12, 2011ಕ್ಕೆ ಒಂದು ನೂರು ವರುಷವಾಯಿತು. ಮುಂದಿನ ಒಂದು ವರುಷಗಳವರೆಗೆ ಶತಮಾನೋತ್ಸವವನ್ನು ಸಂಭ್ರಮದಿಂದ ಆಚರಿಸಲು ದೆಹಲಿ ಸಜ್ಜಾಗಿದೆ.

ದೆಹಲಿಯು ವಿಶ್ವದ ಅತ್ಯಂತ ಪುರಾತನ ಜನವಸತಿಯ ಸ್ಥಳಗಳಲ್ಲಿ ಒಂದು. ಯಮುನಾ ನದಿಯ ದಂಡೆಗೆ ನೀಳವಾಗಿ ಉದ್ದಕ್ಕೆ ಚಾಚಿಕೊಂಡಿರುವ ಅರಾವಳಿ ಪರ್ವತಪ್ರದೇಶಗಳಲ್ಲಿ ಪ್ರಾಚೀನ ಜನವಸತಿಯ ನೆಲೆಗಳಿರುವುದನ್ನು ಗುರುತಿಸಲಾಗಿದೆ. ಕಡಿಮೆ ಮಳೆಬೀಳುವ ಈ ಪ್ರದೇಶದಲ್ಲಿ ಬೆಳೆಯುವ ಕುರುಚಲು ಪೊದರುಗಳು ವಲಸೆಗಾರ ಕುರುಬರಿಗೋ, ದನಗಾಹಿಗಳಿಗೋ ಅತ್ಯಂತ ಪ್ರಶಸ್ತವಾಗಿದ್ದು, ಕೃಷ್ಣನ ಓಡಾಟದ ಜಾಗವಾಗಿದ್ದುದು ಸಹಜವೇ ಸರಿ. ದೆಹಲಿಯ ಉತ್ತರ ದಿಕ್ಕಿನಲ್ಲಿ ಒಂದು ಕಾಲಕ್ಕೆ ಹರಿಯುತ್ತಿದ್ದ ಸರಸ್ವತೀ ನದಿದಂಡೆಯಲ್ಲಿ ವೇದಕಾಲೀನ ಸಮಾಜ ಕ್ರಿಯಾಶೀಲವಾಗಿತ್ತೆಂದೂ ಹೇಳಲಾಗುತ್ತಿದೆ. ಪಾಂಡವರು ಖಾಂಡವವನ ದಹನ ಮಾಡಿ ಕಟ್ಟಿದ ಇಂದ್ರಪ್ರಸ್ಥವೇ ದೆಹಲಿಯೆಂದೂ ಹೇಳಲಾಗುತ್ತಿದೆ. ಈಗಿನ ಪುರಾನಾ ಕಿಲ್ಲಾ ಜಾಗದಲ್ಲಿ ಧರ್ಮರಾಯನ ಅರಮನೆ ಇತ್ತೆಂಬ ನಂಬಿಕೆ ಅಲ್ಲಿ ಓಡಾಡುವ ನಮ್ಮಲ್ಲಿ ಸಂಭ್ರಮ ಮೂಡಿಸುತ್ತದೆ.

ಚಾರಿತ್ರಿಕವಾಗಿ ದೆಹಲಿಯ ಅಸ್ತಿತ್ವದ ಮೊದಲ ಉಲ್ಲೇಖ ಮಾಡಿದವನು ಟಾಲೆಮಿ. ಅಲೆಕ್ಸಾಂಡ್ರಿಯಾದಿಂದ ಆಗಮಿಸಿದ ಆತ ಹೇಳಿದ 'ದೈದಲಾ' ಎಂಬ ಪದವು ದೆಹಲಿಯೇ ಆಗಿರಬೇಕೆಂದು ಸಾಧಾರವಾಗಿ ತರ್ಕಿಸಲಾಗಿದೆ. ಕ್ರಿ.ಶ. 736 ರಲ್ಲಿದ್ದ ರಾಜಾ ತೋಮರನ ರಾಜಧಾನಿ 'ದಿಲ್ಲಿಕೆ' ಆಗಿತ್ತಂತೆ! ಪ್ರವಾಸಿಗ ಫರಿಸ್ತಾ 'ರಾಜಾದಿಲು' ಎಂಬ ಹೆಸರಿನ ಅರಸನಿದ್ದುದನ್ನು ವಿವರಿಸುತ್ತಾನೆ. ರಜಪೂತ ಅರಸ ಪೃಥ್ವಿರಾಜನು (11 ನೇ ಶತಮಾನ) ದೆಹಲಿಯನ್ನು ಆಳಿದ ಕೊನೆಯ ಹಿಂದೂ ಅರಸ. ಇಷ್ಟಿದ್ದರೂ ದೆಹಲಿ ಎಂಬ ಪದದ ನಿಜವಾದ ಅರ್ಥ ಏನೆಂದು ಯಾರಿಗೂ ತಿಳಿಯದು.

ಕ್ರಿ.ಶ. 1192 ರಲ್ಲಿ ಭಾರತಕ್ಕೆ ಬಂದ ಘೋರಿ ಮಹಮ್ಮದನ ಜೊತೆಗಿದ್ದ ಗುಲಾಮೀ ವಂಶದ ಕುತುಬುದ್ದೀನನು ದೆಹಲಿಗೆ ಹೊಸ ಆಯಾಮ ನೀಡಿದ ಸ್ವತಂತ್ರ ಬುದ್ಧಿಯ ಅರಸ. ಆತ ದೇಶವನ್ನು ದೋಚಲಿಲ್ಲ. ಬದಲು ದೆಹಲಿಯಲ್ಲಿಯೇ ನೆಲೆನಿಂತು ಅದನ್ನು ಬೆಳೆಸಿದ. ಆತನ ಕಾಲದಲ್ಲಿ ತಲೆ ಎತ್ತಿ ನಿಂತ ಕುತುಬ್ ಮಿನಾರ್ ಇಂದು ದೆಹಲಿಯ ಪ್ರತಿಷ್ಠೆಯ ಸಂಕೇತಗಳಲ್ಲಿ ಒಂದು. ಕುತುಬುದ್ದೀನ್‌ನ ತರುವಾಯ ದೆಹಲಿಯನ್ನಾಳಿದ ಇಲ್ತ್‌ಮುಷ್‌ನ ಸೌಂದರ್ಯ ಪ್ರಜ್ಞೆಯನ್ನು ದೆಹಲಿ ಇಂದಿನವರೆಗೆ ಬೇರೆ ಬೇರೆ ರೂಪಗಳಲ್ಲಿ ಉಳಿಸಿಕೊಂಡು ಬಂದಿದೆ. ದೆಹಲಿಯ ಆಳ್ವಿಕೆಗೆ ಮಾತೃತ್ವದ ಸ್ಪರ್ಶ ನೀಡಿದ ರಜಿಯಾ ಸುಲ್ತಾನಳ ಪರಂಪರೆಯನ್ನೂ ರಾಜಧಾನಿ ಈಗಲೂ ಮುಂದುವರೆಸಿಕೊಂಡು ಬರುತ್ತಿದೆ. ಗುಲಾಮಿ ವಂಶಾಡಳಿತವನ್ನು ಕೊನೆಗೊಳಿಸಿ ಅಧಿಕಾರ ಹಿಡಿದ ಖಿಲ್ಜಿ ವಂಶದ ಅಲ್ಲಾವುದ್ದೀನನು ದೆಹಲಿಗೆ ಮಾರುಕಟ್ಟೆ ಮಂತ್ರ ಹೇಳಿಕೊಟ್ಟ ಮಹನೀಯ. ಆತನ ಕಾಲದಲ್ಲಿ ದೆಹಲಿಗೆ ಆಗಮಿಸಿದ ಟರ್ಕಿಶ್ ಜನರಿಂದಾಗಿ ಒಂದೇ ಸಮನೆ ಏರತೊಡಗಿದ್ದ ಬೆಲೆಗಳನ್ನು ನಿಯಂತ್ರಿಸಲು ಆತ ಹೆಣಗಾಡಿದ್ದು ಕುತೂಹಲಕರವಾಗಿದೆ. ಅಲೈ ದರ್ವಾಜಾ, ಹೌಸ್ ಖಾಸ್ ಕೆರೆಗಳನ್ನು ನಿರ್ಮಿಸಿದ ಆತ ದೆಹಲಿಯ ಜನರಿಗೆ ಇಂದಿಗೂ ಪ್ರಿಯ. ಖಿಲ್ಜಿ ವಂಶ ಕೊನೆಗೊಂಡಾನಂತರ ದೆಹಲಿ ಆಡಳಿತ ಹಿಡಿದ ತುಘಲಕ್ ವಂಶಸ್ಥರು ಬೃಹತ್ ಕೋಟೆಗಳನ್ನು ಕಟ್ಟಿದ್ದು, ದೆಹಲಿಯನ್ನು ದೇವಗಿರಿಗೆ ವರ್ಗಾಯಿಸಲು ಪ್ರಯತ್ನಿಸಿದ್ದು ನಮಗೆಲ್ಲಾ ತಿಳಿದೇ ಇದೆ. ಲೋಧಿ ಅರಸರ ಸಮಾಧಿ ಸ್ಥಳ ಇಂದು ಪ್ರೇಮಿಗಳ ಸಂಧಿಸ್ಥಳವಾಗಿದೆ.

1500 ರ ಸುಮಾರಿಗೆ ದೆಹಲಿಯನ್ನಾಳಲು ಆರಂಭಿಸಿದ ಮೊಗಲರ ನೆನಪುಗಳು ಇಂದಿನ ದೆಹಲಿಯ ತುಂಬ ಹರಡಿಕೊಂಡಿದೆ. ಹುಮಾಯೂನ, ಅಕ್ಬರ, ಜಹಾಂಗೀರ, ಷಹಾಜಹಾನ, ದಾರಾಶಿಖೋ, ಔರಂಗಜೇಬ ಮೊದಲಾದವರು ದೆಹಲಿಯ ಮುಖ್ಯ ರಸ್ತೆಗಳ ಹೆಸರಾಗಿಯಾದರೂ ಹೊಸ ತಲೆಮಾರಿಗೆ ತಿಳಿದಿದೆ. ಯಮುನೆಯ ದಡದಲ್ಲಿ ತಲೆ ಎತ್ತಿ ನಿಂತಿರುವ ಕೆಂಪುಕೋಟೆಯಿಂದ ಇಂದು ಸ್ವತಂತ್ರ ಭಾರತದ ಬಾವುಟ ಹಾರಾಡುತ್ತಿದೆ. ಮೊಗಲರ ಕೊನೆ ಅರಸನಾದ ಬಹದೂರ್ ಶಾ ಜಫರ್‌ನಿಗೆ ಊಟ ತಯಾರು ಮಾಡಿಕೊಡುತ್ತಿದ್ದ ಕರೀಂ ಸಾಬರ ಚಿಕನ್ ಶಾಪ್ ಈಗಲೂ ಜಾಮಾ ಮಸೀದಿ ಬಳಿ ಕಾರ್ಯನಿರತವಾಗಿದೆ. ಮೊಗಲರ ಕೊನೆಯ ಅರಸನನ್ನು ಸುಲಭವಾಗಿ ಸೋಲಿಸುವುದರೊಂದಿಗೆ ದೆಹಲಿಗೆ ಪ್ರವೇಶ ಪಡೆದ ಬ್ರಿಟಿಷರು ಆರಂಭಿಕ ಹಂತದಲ್ಲಿ ಕಲ್ಕತ್ತವನ್ನೇ ರಾಜಧಾನಿ ಮಾಡಿಕೊಂಡಿದ್ದರು. ಆದರೆ 1900 ರ ಬಳಿಕ ಕಾಣಿಸಿಕೊಂಡ ಬಂಗಾಳ ಪ್ರಕ್ಷುಬ್ಧತೆ, ಕಲ್ಕತ್ತದ ಪ್ರತಿಕೂಲ ಹವೆಗಳಿಂದ ಬೇಸತ್ತ ಬ್ರಿಟಿಷರು ಕಲ್ಕತ್ತ ತೊರೆದು ದೆಹಲಿಗೆ ರಾಜಧಾನಿಯನ್ನು



ವರ್ಗಾಯಿಸಲು ಯೋಚಿಸಿದರು. 1906 ರಲ್ಲಿ ಭಾರತಕ್ಕೆ ಆಗಮಿಸಿದ ಬ್ರಿಟಿಷ್ ಚಕ್ರವರ್ತಿ ಐದನೇ ಜಾರ್ಜ್ ಈ ಕುರಿತು ಆದೇಶ ಹೊರಡಿಸಿದ. ಆನಂತರ 'ರಾಜಧಾನಿ ನವದೆಹಲಿ'ಯನ್ನು ಕಟ್ಟಲು ಆರಂಭಿಸಲಾಯಿತು.

ದೆಹಲಿಯನ್ನು ಬ್ರಿಟಿಷ್ ಸಾಮ್ರಾಜ್ಯದ 'ಇಂಡಿಯಾ ಕ್ಯಾಪಿಟಲ್' ಆಗಿಸುವ ಹೊಣೆ ಹೊತ್ತವನು ಲ್ಯುಟಿನ್ಸ್ ಎಂಬ ಅಸಾಧಾರಣ ಪ್ರತಿಭೆಯ ವಾಸ್ತುಶಿಲ್ಪಿ. ಆ ಕಾಲದ ಜಗತ್ತಿನ ಪ್ರಮುಖ ನಗರಗಳಾದ ಪ್ಯಾರಿಸ್, ಬರ್ಲಿನ್, ಲಂಡನ್, ಸಿಡ್ನಿ ಮತ್ತು ವಾಷಿಂಗ್ಟನ್ ಡಿ ಸಿ. ನಗರಗಳ ಬಗ್ಗೆ ಆಳವಾದ ತಿಳಿವಳಿಕೆ ಹೊಂದಿದ್ದ ಲುಟಿನ್ಸ್ ಬಹಳ ದುರಹಂಕಾರಿಯೂ ಆಗಿದ್ದುದು ಬ್ರಿಟಿಷ್ ಸಂಸತ್ತಿನಲ್ಲಿ ಚರ್ಚೆಯಾದ ವಿಚಾರ. ಇಷ್ಟಿದ್ದರೂ, ಪ್ರತಿಭೆಗೆ ಮನ್ನಣೆ ನೀಡುವ ಬ್ರಿಟಿಷ್ ಸಂಸತ್ತು ಲ್ಯುಟಿನ್ಸ್‌ನ್ನು ಕೇಳಿಕೊಂಡಾಗ "ನೀನು ಕಟ್ಟಲಿರುವ ಆಧುನಿಕ ದೆಹಲಿಯ ವಾಸ್ತುಶಿಲ್ಪಕ್ಕೆ ಭಾರತದ ಪಾರಂಪರಿಕ ವಾಸ್ತುಶಿಲ್ಪದ ಸ್ಪರ್ಶ ಇರಲಿ" ಎಂಬ ಸೂಚನೆ ನೀಡಿದರು. ಸಿಟ್ಟಿಗೆದ್ದ ಲ್ಯುಟಿನ್ಸ್‌ನು ಚಕ್ರವರ್ತಿ ಜಾರ್ಜನ ಚಿತ್ರ ಬರೆದು ಅವನ ಮುಖಕ್ಕೆ ಷಹಜಹಾನನ ಗಡ್ಡ ಅಂಟಿಸಿ, ಮಹಾರಾಣಿಯ ಚಿತ್ರ ಬರೆದು ಅದಕ್ಕೆ ಬುರುಖಾ ಹಾಕಿ "ಬ್ರಿಟಿಷರ ಆಧುನಿಕತೆಗೆ ಭಾರತದ ಪರಂಪರೆಯನ್ನು ಜೋಡಿಸುವುದೆಂದರೆ ಹೀಗೆ" ಅಂತ ಹೇಳಿ ಬ್ರಿಟಿಷ್ ಪತ್ರಿಕೆಗಳಲ್ಲಿ ಅವಳಿ ಚಿತ್ರಗಳನ್ನು ಪ್ರಕಟಿಸಿಬಿಟ್ಟ. ಇಷ್ಟಿದ್ದರೂ ಆತ ಕೊನೆಗೆ ಮೊಗಲ್ ವಾಸ್ತುಶಿಲ್ಪದ ಕೆಲವು ಅತ್ಯುತ್ತಮ ಭಾಗಗಳನ್ನು ಅಳವಡಿಸಿಕೊಂಡು, ಅರಾವಳಿ ಪರ್ವತಶ್ರೇಣಿಯ ಭಾಗವಾದ ರೈಸ್ನಾ ದಿಬ್ಬದ ಮೇಲೆ ಅದ್ಭುತವಾದ 'ವೈಸರಾಯ್ ಬಂಗಲೆ' ಯನ್ನು, ಅದರ ಎಡಬಲಗಳಲ್ಲಿ ಕಚೇರಿಗಳನ್ನು ಕಟ್ಟಿದ. ಇದಕ್ಕೆ ಸುಮಾರು 35 ವರ್ಷಗಳ ಕಾಲ ಸಾವಿರಾರು ಜನ ದುಡಿದರು. ಸ್ವಾತಂತ್ರ್ಯಾನಂತರ ಈ 'ಬಂಗಲೆ'ಯನ್ನು 'ರಾಷ್ಟ್ರಪತಿ ಭವನ'ವನ್ನಾಗಿ ಮಾರ್ಪಡಿಸಲಾಯಿತು. ಅದರ ಎಡಬಲದ ಕಚೇರಿಗಳಲ್ಲಿ ಇಂದು ಪ್ರಧಾನಮಂತ್ರಿಗಳ ಮತ್ತು ಇತರ ಮಂತ್ರಿಗಳ ಕಚೇರಿಗಳು ಕಾರ್ಯನಿರ್ವಹಿಸುತ್ತಿವೆ.

ಲ್ಯುಟಿನ್ಸ್ ವೈಸರಾಯ್‌ಗೆ ಕಟ್ಟಿದ ಅರಮನೆಯಂಥ ಬಂಗಲೆಗೆ ಹೈದರಾಬಾದಿನ ನಿಜಾಮ, ಬರೋಡದ ಮತ್ತು ಜೈಪುರದ ಅರಸರು ಉದಾರವಾಗಿ ದೇಣಿಗೆ ನೀಡಿದ್ದರು. ಅದಕ್ಕೆ ಪ್ರತಿಯಾಗಿ ಆ ಅರಸರು ಇಂದಿನ 'ಇಂಡಿಯಾ ಗೇಟ್'ನ ಸುತ್ತ ಸ್ವಲ್ಪ ಜಾಗ ಪಡಕೊಂಡರು. ಲ್ಯುಟಿನ್ಸ್ ಅವರಿಗೂ ಬಂಗಲೆ ಕಟ್ಟಿಸಿದ. ನಮ್ಮ ಮೈಸೂರಿನ ಅರಸರು ಮಾತ್ರ ದೇಣಿಗೆಯೂ ನೀಡಿಲ್ಲ, ಪ್ರತಿಯಾಗಿ ಆಯಕಟ್ಟಿನ ಜಾಗದಲ್ಲಿ ಬಂಗಲೆಯನ್ನೂ ಪಡೆದಿಲ್ಲ.

ಇಂದು ದೆಹಲಿಯ ಸುತ್ತ ನೊಯ್ಡಾ – ಗುರ್ಗಾಂವ್‌ಗಳು ಇತಿಹಾಸದ ಭಾರವಿಲ್ಲದೆ ಅತ್ಯಾಧುನಿಕವಾಗಿ ಬೆಳೆದುನಿಂತಿವೆ. ದೆಹಲಿ ಮಾತ್ರ ಒಂದೆಡೆಯಲ್ಲಿ ಹಜರತ್ ನಿಜಾಮುದ್ದೀನ್‌ನಲ್ಲಿನ ಮಧ್ಯಕಾಲೀನ ಯುಗದ ಕವಾಲಿಗಳಿಗೆ ಇನ್ನೂ ಕಿವಿಗೊಡುತ್ತಿದೆ, ಆದರೆ ಅಲ್ಲಿಯೇ ನಿಲ್ಲದೆ ಇನ್ನೊಂದೆಡೆ ಮೆಟ್ರೋ ರೈಲಿಗೆ ಯೋಜನೆಗಳನ್ನು ರೂಪಿಸಿ ಅದನ್ನೂ ಸಾಧ್ಯವಾಗಿಸಿದೆ. ಜೊತೆಗೆ ಮಹಾಭಾರತದ ಕುರುಕ್ಷೇತ್ರ ಯುದ್ಧದಿಂದ ಆರಂಭವಾದ ದೆಹಲಿಯ ರಕ್ತ–ಸಿಕ್ತ ಇತಿಹಾಸ ಆಗಾಗ ಮರುಕಳಿಸುತ್ತಾ ಬಂದಿರುವುದೂ ನಿಜ. ಕಳೆದ ನೂರು ವರ್ಷ ನಮಗೆ ತಿಳಿದಿದೆ, ಮುಂದಿನ ನೂರು ವರ್ಷಗಳನ್ನು ಮಾತ್ರ ಊಹಿಸಲಾಗದು.

■ **ಪುರುಷೋತ್ತಮ ಬಿಳಿಮಲೆ**

ಕೃಪೆ : ವಿಜಯ ಕರ್ನಾಟಕ

# ಕುಸುರು ಕುಸುರಿನ ಸಂಕ್ರಾಂತಿ ನೆನಪು

ಸಂಕ್ರಾಂತಿ ಅಂದಕೂಡಲೇ ನೆನಪಾಗುವುದು ನಮ್ಮೂರಿನ ಕೊರೆಯುವ ಛಳಿಗಾಲದ ಹುಡಿಮಣ್ಣಿನ ಒಣ ಹವೆ, ಬಚ್ಚಲಕಟ್ಟೆಯ ಕೆಳಗಿನ ಪುಟ್ಟ ಕಟ್ಟೆಯ ಆಚೀಚೆ ನೀರೊಲೆಯ ನಿಗಿನಿಗಿ ಬೆಂಕಿಯ ಮುಂದೆ ಬೆಚ್ಚಗೇ ಕಾಮೀ ಬೆಕ್ಕಿನಂತೆ ಕುಳಿತು ಚಹಾ ಹೀರುವ ಬೆಚ್ಚಗಿನ ಹಿತ. ಮುಂಬಾಗಿಲ ಅಂಗಳದ ಕಟ್ಟೆ ಮೇಲೆ ಹೂಬಿಸಿಲಿನ ಬಿಸಿಲಲ್ಲಿ ಕುಳಿತು ಬಿಸಿಲು ಕಾಸಿಕೊಳ್ಳುವುದು. ಒಡೆದು ಉರಿಯುವ ಕೈ ಕಾಲಿನ ಚರ್ಮಕ್ಕೆ ವ್ಯಾಸಲೀನ್ ಬಳಿದುಕೊಂಡರೂ ಪ್ರಯೋಜನವಾಗದೇ ಅವ್ವನನ್ನು ಪೀಡಿಸಿದ್ದು. ಸಂಕ್ರಾಂತಿ ಬಂತೆಂದರೆ ನಾವು ಚಿಕ್ಕವರಿರುವಾಗ ಛಳಿಗೆ ಒಡೆದು ಉರುಟಾದ ಕೈ ಮೈಗೆ ಅವ್ವ ಎಳ್ಳು ಅರಿಸಿನ ನುಣ್ಣಗೆ ಅರೆದು ಮೈಗೆ ತಿಕ್ಕಿ ತಿಕ್ಕಿ ಎಣ್ಣೆಸ್ನಾನ ಮಾಡಿಸುತ್ತಿದ್ದುದು. ಮುಂದೆ ದೊಡ್ಡವರಾದ ಮೇಲೆ "ಶೀ ಎನ್ ಹೊಲಸ ಹೊಗವ್ವಾ..." ಅಂತಾ ಹೇಸಿಕೊಂಡಿದ್ದು ನೆನಪಾಗುತ್ತದೆ ಮತ್ತೆ ಅವ್ವನಿಂದ ಗುದ್ದಿಸಿಕೊಂಡಿದ್ದು ಬೇರೆ ವಿಷಯ ಬಿಡಿ. ನೆನಪುಗಳ ಸರಮಾಲೆಯಲ್ಲಿ ಪೋಣಿಸಲು ಒಂದೇ ಎರಡೇ? ಮನೆಯಲ್ಲಿ ಸಜ್ಜೆ ಭಕ್ಕರೀ, ಬದನೆಕಾಯೀ ಭರತಾ, ಅವರೇಕಾಳು ಇತರ ಮಿಶ್ರತರಕಾರಿ ಪಲ್ಯ, ಚಟ್ನಿ ಇತ್ಯಾದಿ ಏನೇನೋ ಮಾಡಿರುತ್ತಿದ್ದಳು ನಮ್ಮ ಅವ್ವ. ಬಾಳಾಚಾರಿ ಸೊಸೆ ಮನೆ ಮನೆಗೂ ಹೋಗಿ ಸಂಕ್ರಾಂತಿಗೆ ಹೆಣ್ಣುಮಕ್ಕಳು ಹೊಸಮೊರದಲ್ಲಿ ಕೊಡುವ ಕಬ್ಬು ಗಜ್ಜರಿ, ಹಸೀಕಡ್ಲಿಗಿಡ,ಎಳ್ಳು, ಅಕ್ಕಿ, ಬೆಲ್ಲ ಇತ್ಯಾದಿ ಬಾಗಿನ ತಗೊಂಡು ಕುಶಲ ಸಮಾಚಾರವನ್ನೋ ಇಲ್ಲಾ ತನ್ನ ಅತ್ತೆ ಕಾಟವನ್ನೋ, ಅಕ್ಕ ಪಕ್ಕದವರ, ಆಗಾದಿ ಬಾಗಾದಿಗಳ ಚಾಡಿ, ಪಂಚಾಯಿತಿಯನ್ನು ಹೋದಲ್ಲೆಲ್ಲಾ ಬೀರುತ್ತಾ ಬಂದ ಕಾರ್ಯ ಸಫಲವಾಯಿತೆನ್ನುವಂತೆ ನಗಾಡಿಕೊಂಡು ಹೋಗುತ್ತಿದ್ದಳು. ಅವಳ ತಲೆಗೆ ಒಂದು ಟಿಶ್ಯೂ ಪೇಪರ ನಿಂದಾ ಒತ್ತಿದ್ದರೇ ಎಷ್ಟು ನೆನೆಯುತ್ತಿತ್ತೋ ಏನೋ !! ಮನೆಯಲ್ಲಿ ಇದ್ದ ಕೊಬ್ಬರೀ ಎಣ್ಣೆಯನ್ನೆಲ್ಲಾ ಒಬ್ಬಳೇ ನೆತ್ತಿಗೆ ಬಳಿದುಕೊಂಡವಳಂತೆ ಕಾಣುವ ತುಂಗಾಬಾಯಿ ಕೆನ್ನೆಗೆ ಅರಿಸಿನ, ಹಣೆತುಂಬಾ ಕುಂಕುಮಮಯವಾಗಿ ಕಸಬಾ ಗೌಡರ ಓಣಿಯ ದುರ್ಗಾ ದೇವಿ ಗುಡಿಯ ಮೂರ್ತಿಯಂತಾಗಿರುತ್ತಿದ್ದಳು. ನಾವು ಮಕ್ಳು ಪಿಸಿಪಿಸಿ ನಗುತ್ತಿರುವುದೇ ಆಗುತ್ತಿತ್ತು ಆಕೆ ಇರುವವರೆಗೂ.



ಮತ್ತೆ ಹುಡುಗರು-ಮಕ್ಕಳು ನಾವು ಸಂಜೆಯಾಗುವುದನ್ನೆ ಕಾಯುತ್ತಿರುತ್ತಿದ್ದೆವು ಸಂಭ್ರಮದಿಂದಾ. ಎಳ್ಳು ಬೆಲ್ಲ ಹಂಚಲು ಹೋಗಬೇಕಲ್ಲಾ ಅದಕ್ಕ ಗೆಳತಿಯರೊಂದಿಗೆ ಹೊಸ ಬಟ್ಟೆ, ಆಗ ಹೊಸ ಬಟ್ಟೆ ಅಂದ್ರೆ ಎನ್ರೀ ಈಗಿನಂತೆ ಚೂಡಿದಾರ್ ಇರಲಿಲ್ಲಾ, ಜೀನ್ಸ್ ಇರಲಿಲ್ಲಾ, ಉಟ್ಟರ ಅಥ ಪರಕಾರಾ ಬ್ಲೌಸು, ಇಲ್ಲ ಸ್ಕರ್ಟ ಬ್ಲೌಸ್, ಆಮೇಲೆ ಮ್ಯಾಕ್ಸಿ ಬಂತು. ಮುಂದೆ ಸಲವಾರ್ ಕಮೀಜ್. ನೀತೂ ಸಿಂಗ್ ಸಿನೇಮಾ ನೋಡಿದ ನನ್ನ ಗೆಳತ್ಯಾರೆಲ್ಲಾ ಸಲವಾರ್ ಹೊಲಿಸಿಕೊಂಡ ಮೇಲೇ ನಾನೂ ಅವ್ವನ್ನ ಕಾಡಿಸಿ ಹೊಲಿಸಿಕೊಂಡಿದ್ದೆ. ಅಕೀ ಅಂತೂ ನಾ ಸಲವಾರ ಕಮೀಜ್ ಹಾಕ್ಕೊಂಡ್ರ ಎಲ್ಲಿ ಮುಸಲರಾಕಿ ಆಗಿ ಬಿಡ್ತೀನೋ ಅನ್ನೊಹಂಗ ಮಕಾ ಮಾಡಿರ್ತಿದ್ದಳು. ಒಂದು ಸೆಟ್ ಏನಾರಾ ಸಂಕ್ರಾಂತಿಗೆ ಹೊಸದನ್ನು ಹೊಲಿಸಿದರೆ ಅದು ಯುಗಾದಿಯನ್ನು ಕಳೆದು, ಶ್ರಾವಣದ ನಾಗರಪಂಚಮಿಗೂ ಆಗುತ್ತಿತ್ತು. ಈಗಿನ ಕಥೀನೇ ಬ್ಯಾರೆ. ದಿನಕ್ಕೊಂದು ಉಡುವ ಗಳಿಕೆ ಮತ್ತು ಸೌಕರ್ಯ ಜನರಿಗಿದೆ. ಈಗಿನ ಪಾಲಕರು ಬೇಕಾದ್ದನ್ನು ಮಕ್ಕಳಿಗೆ ಕೊಡಿಸುವ ಸಹೃದಯರು. ಆಗ ನಮ್ಮ ಪಾಲಕರ ಕಥೀನ ಬ್ಯಾರೆ. ಇರ್ಲಿ! ಹಂಗ ಗೆಳತ್ಯಾರು, ತಂಗ್ಯಾರೊಂದಿಗೆ ಸಂಜೆಗೆ ಮನೆ ಮನೆಗೂ ಹೋಗಿ ಎಳ್ಳು ಬೆಲ್ಲ ಹಂಚಿ, "ಎಳ್ಳು ಬೆಲ್ಲ ತಗೊಂಡು ಎಳ್ಳು ಬೆಲ್ಲದಂತಿರೋಣ" ಎನ್ನುತ್ತಲೋ, ಇಲ್ಲಾ "ಎಳ್ಳು ಬೆಲ್ಲ ತಗೊಂಡು ಒಳ್ಳೆಯವರಾಗಿರೋಣ"-ಎಂದು ಬಾಯಿಪಾಠ ಒಪ್ಪಿಸುತ್ತಾ ಬಾಯಿಗೊಂದಿಷ್ಟು ರುಚಿಯಾದ ಎಳ್ಳುಬೆಲ್ಲ ಮುಕ್ಕುತ್ತಾ ಚಿಟ್ಟೆಯಂತೆ ಹಾರಾಡುತ್ತಿದ್ದುದು ನೆನಪಿಗೆ ಬರುತ್ತದೆ. ಬಣ್ಣ ಬಣ್ಣದ ಕುಸುರೆಳ್ಳಿನ ಜೊತೆ, ಮನೆಯಲ್ಲಿ ಎಳ್ಳು ಹುರಿದು ಮಾಡಿದ ದೇಸೀ ಎಳ್ಳು ಇರುತ್ತಿತ್ತು. ಅದರ ರುಚಿ ಇನ್ನೂ ಚೆಂದ. ಚಿಕ್ಕವರಿದ್ದಾಗ ಯಾಕೆ ಈ ಹಬ್ಬ ಆಚರಿಸುತ್ತೇವೆ, ಹಬ್ಬದ ಮಹತ್ವವೇನು ಯಾವುದೂ ನಮ್ಮನ್ನು ಕಾಡಿರಲಿಲ್ಲ. ಶಾಲೆಯಲ್ಲಿ ಮಾಸ್ತರೂ ಹೊರೆ ಹೋಂ ವರ್ಕ ಕೊಟ್ಟು ಕಾಡಿತಿರ್ಲಿಲ್ಲ. ಸಂಕ್ರಾಂತಿಯ ದಿನದಂದು ಸೂರ್ಯ ದಕ್ಷಿಣಾಯನದಿಂದ ಚಲಿಸಿ ಉತ್ತರಾಣವನ್ನು ಸೇರುತ್ತಾನೆ, ಜ್ಯೋತಿಷ್ಯಶಾಸ್ತ್ರದ ಪ್ರಕಾರ ಮೇಷ ರಾಶಿಯಿಂದ ಹೊರಟು ಮಕರ ರಾಶಿಗೆ ಪ್ರವೇಶಿಸುತ್ತಾನೆ ಅಂತಾಗಲಿ ಯಾರಿಗೆ ಬೇಕಿತ್ತು ? ಅಂತೂ ಮಾಘಮಾಸದ ಛಳಿ ಕಳೆದು, ಉತ್ತರಾಯಣ ಸೂರ್ಯನ ಬಿಸಿಲು ಹಿತವಾಗುವ, ಹೂವು ಕಾಯಾಗುವ, ಕಾಯಿ ಹಣ್ಣಾಗುವ, ಮಾಘ ಮಾಗಿಯಾಗುವ ಸಂಕ್ರಮಣ ಕಾಲ.

ಇನ್ನೊಂದು ಮನದಲ್ಲಿ ಹಸಿರಾಗಿ ಉಳಿದ ನೆನಪೆಂದರೆ ಕುಸುರೆಳ್ಳು ಹಚ್ಚುವ ಸಂಭ್ರಮ. ನಮ್ಮಲ್ಲಿ ಕುಸುರು ಕುಸುರಾದ ಕುಸುರೆಳ್ಳನ್ನು ಮನೆಯಲ್ಲೇ ತಯಾರಿಸುವ ಹೆಣ್ಣುಮಕ್ಕಳ ಕಲೆ ಅದ್ಭುತವಾದುದು. ಎಲ್ಲರೂ ಹಚ್ಚುತ್ತಿದ್ದಿಲ್ಲ ಗೊತ್ತಿದ್ದವರು ಮಾತ್ರ ಈ ಗೊಂದಲದಲ್ಲಿ ಬೀಳುತ್ತಾರೆ. ನನಗೂ ಒಮ್ಮೆ ಕುಸುರೆಳ್ಳನ್ನು ಮನೆಯಲ್ಲೇ ತಯಾರಿಸುವ ಹುಚ್ಚು ಹತ್ತಿ ಆಜೂ ಬಾಜೂ ಮನೆ ಮನೆ ಕಾಕೂ, ಮಾಮಿಯರನ್ನು ವಿಚಾರಿಸಿ ವಿಧಾನ ತಿಳಿದುಕೊಂಡು ಅವ್ವನನ್ನು ಪೀಡಿಸಿ, ಪೀಡಿಸಿ "ಏನ್ ಜೇಂವಾ ತಿಂತಿಯವಾ ನೀನು ಎನಾರ ಮಾಡ್ಕೋ"- ಅಂತ ಅವ್ವ ಒಂದು ದಪ್ಪ ತಳದ ಹಿತ್ತಾಳಿ ಬುಟ್ಟಿ, ಹಚ್ಚಲು ಬಿಳಿ ಎಳ್ಳು, ವಿಧಾನದ ಪ್ರಕಾರ ಸಕ್ಕರಿ ಪಾಕಾ ಮಾಡಿ, ಸೋಸಿ ಸೋಸಿ, ಮೊಸರು ಬೆರೆಸಿ ಪಾಕದ ಮೇಲಿನ ಹೊಲಸು ತೆಗೆದು, ಬೆಳ್ಳಂ ಬೆಳ್ಳಗಿನ ಪಾಕ ಮಾಡಿ ಕೊಟ್ಟಳು. ನಾನೂ ನನ್ನ ಬಾಜೂ ಮನೀ ಹತ್ತಿರದ ಗೆಳತಿ ಭಾರತಿ ಇಬ್ಬರೂ ಕುಸುರೆಳ್ಳು ಹಚ್ಚುವ ಮಹಾಯಜ್ಞವನ್ನು ಪ್ರಾರಂಭಿಸಿಯೇ ಬಿಟ್ಟೆವು. ಎಂದೂ ಬೆಳಿಗ್ಗೆ ಎದ್ದು ಓದದ ನಾವು ಬೆಳಗ್ಗೆ ನಾಲ್ಕೂವರೆಗೆ ಎದ್ದು, ಅವ್ವನ ನಿದ್ದೆ ಕೆಡಿಸಿ ಬೈಸಿಕೊಂಡು ಇದ್ದಲು ಒಲೆ ಹೊತ್ತಿಸಿಕೊಂಡು, ಕಣ್ಣು ಕೆಂಪಾಗಿ, ಕೈ ಮಸೀ ಮಾಡಿಕೊಂಡು ಹೊಗೆಯೆಲ್ಲ ಹೋದ ನಂತರ ನಮ್ಮ ಕುಸುರೆಳ್ಳಿನ ಪ್ರಯೋಗಶಾಲೆ ಶುರುಮಾಡುತ್ತಿದ್ದೆವು. ಯಾರೋ ಹೇಳಿಕೊಟ್ಟಂತೆ ಶುದ್ಧವಾಗಿ ಕೈಯಿಂದ ಎಳ್ಳಿಗೆ ಹನಿ ಹನಿ ಸಕ್ಕರೆ ಪಾಕ ಬಿಡುತ್ತಾ ನಿಧಾನವಾಗಿ ಕೈಯಾಡಿಸುತ್ತಾ, ಮಧ್ಯೆ ಮಧ್ಯೇ ತೂಕಡಿಸುತ್ತಾ, ಇದ್ದಲು ಒಲೆ ( ಶೆಗಡೀ) ಝಳ ಜಾಸ್ತಿಯಾಗಿ ಬೆರಳು ಚುರುಕ್ಕೆಂದು ಸುಟ್ಟಾಗ ಯಾಕಾದ್ರೂ ಈ ಕುಸುರೆಳ್ಳಿನ ಹುಚ್ಚು ತೆಲಿಗೆ ಹಚ್ಚಿಕೊಂಡೆವೋ ಅಂದು ಒದ್ದಾಡಿದ್ದೂ ಇದೆ. ಪುಟಾಣಿ ಎಳ್ಳಿಗೆ ಸಕ್ಕರೆ ಹತ್ತಿ ಮೆಲ್ಲ ಮೆಲ್ಲಗೆ ತುಸು ಉದ್ದಿನ ಬೇಳೆಯಷ್ಟು ದಪ್ಪಗಾದ ಆಕಾರವನ್ನು ನೋಡುತ್ತಾ ನೋಡುತ್ತಾ ಅದು ಯಾವಾಗ ಕುಸುರು ಒಡೆಯಬಹುದು ಎಂದು ಕಾಯುತ್ತಾ ಕಾಯುತ್ತಾ, ಮನದಲ್ಲೇ ಪುಳಕದಲ್ಲಿ ಹಿಗ್ಗುತ್ತಾ ಹಿಗ್ಗುತ್ತಾ ಮತ್ತೆ ಕುಸುರೆಳ್ಳಿಗೆ ಕೈಯಾಡಿಸುವ ಕೆಲ್ಸ ಮುಂದುವರೆಸುತ್ತಿದ್ದೆವು. ಈ ಮಧ್ಯೆ ನಾನು ಭಾರತೀ ನಮ್ಮ ಪಾಠಗಳು, ಸ್ಪೆಷಲ್ ಕ್ಲಾಸ್ ಪಾಠ ಮಾಡುವ ಮೇಷ್ಟ್ರುಗಳು ಹಾಗೂ ಟೀಚರ್ಸ್ ಬಗ್ಗೆ ಚರ್ಚಿಸುತ್ತಾ ಮಧ್ಯೆ ನಮ್ಮನ್ನು ವಿನಾಕಾರಣ ಗೋಳು ಹೊಯ್ಕ್ಯೊಳ್ಳೋ ಭೂಸಪ್ಪನ ಕೂಟಿಗೆ ನಿಲ್ಲುವ ಬೀದಿ ಕಾಮಣ್ಣರ ಬಗ್ಗೆ ಪಿಸುಗುಡುತ್ತಾ, ನಾವು ಪಿಸುಗುಟ್ಟಿದ್ದು ಅವ್ವನಿಗೆ ಕೇಳಿಸಿಲ್ಲವೆಂಬ ಖಾತರಿಯಿಂದ ಆ ಪಡ್ಡೆ ಹುಡುಗರಲ್ಲಿ ಇದ್ದುದರಲ್ಲಿ ಯಾವ ಸಭ್ಯನಂತಿದ್ದಾನೆ, ಯಾವನು ಜಾಸ್ತಿ ಪೋಲಿ, ಅವರ ಅವ್ವ-ಅಪ್ಪ ಯಾರು? ಮನೆ ಎಲ್ಲಿ ಇತ್ಯಾದಿ ವಿಚಾರಗೋಷ್ಠಿ ಆರಂಭವಾಗಿ ಕೊನೆಗೆ ತಂಗಿ ತಮ್ಮನ ಕಾಟ ಶುರುವಾಗಿ ಅವರಿಗೆ ಸ್ಕೂಲಿಗೆ ಹೋಗುವ ಗಡಿಬಿಡಿ. "ಆಯಿತು ಸಾಕಿನ್ನು ಮತ್ತ ಸಂಜೀಗೆ ಕುಸುರೆಳ್ಳು ಹಚ್ರೀ" ಅಂತಂದು. "ಏಳ್ರೇ...ಬೆಳಕಾತು, ಇನ್ನ ಬಾಗಿಲಿಗೆ ಕಸಾನಾದ್ರೂ ಹೊಡಿ ಇಲ್ಲಾ ರಂಗೋಲಿಯನ್ನಾರಾ ಹಾಕು" – ಅಂತಾ ಅವ್ವ ಕೆಲ್ಸ ಹಂಚಿ ಹೋದಾಗ ಅಂದಿನ ಕುಸುರೆಳ್ಳಿನ ಕಥೆ ಅಲ್ಲಿಗೆ ನಿಲ್ಲಿಸಿ ಮತ್ತೆ ಸಂಜೆಗೆ ಶುರುಮಾಡುವ ವೇಳೆಯನ್ನು ನಿಗದಿಸಿ ನಾವೂ ಹೊರಡುತ್ತಿದ್ದೆವು. ಬೆಳಗು-ಮುಂಜಾನೆ ಥಂಡಿ ಇರುವಾಗ ಎಳ್ಳು ಹಚ್ಚಿದರೆ ಕುಸುರು ಚೆನ್ನಾಗಿ ಏಳುತ್ತವೆಂದು ಯಾರೋ ಹೇಳಿ ಕೊಟ್ಟಿದ್ದಕ್ಕೆ ನಾವು ರಾತ್ರಿ ಹತ್ತು ಹನ್ನೊಂದರ ವರೆಗೆ ಕೂರುತ್ತಿದ್ದೆವು ಮತ್ತ ಬೆಳಿಗ್ಗೆ ನಾಲ್ಕೂವರೆ, ಐದಕ್ಕೆ ಎದ್ದು ಎಳ್ಳು ಹಚ್ಚಲು ಕೂರುತ್ತಿದ್ದೆವು. ಆಮೇಲೆ ನಮಗೂ ಶಾಲೆಗೆ ಹೋಗಬೇಕಿತ್ತಲ್ಲ. ಈಗ ಇಷ್ಟು ವರ್ಷಗಳ ನಂತರ ಎಲ್ಲಾ ರೆಡಿಮೇಡ್ ಸಿಗುವ ಕಾಲದಲ್ಲಿ ಅನಿಸುತ್ತೆ ಮತ್ತೆ ಆ ದಿನಗಳ ಸವಿ ನೆನಪು ಮತ್ತೆ ನಾನು ಆ ರೀತಿ ಕುಸುರೆಳ್ಳು ಮಾಡಿಯೇನೆ? ಆ ಇದ್ದಿಲು ಶೇಗಡಿ ಹಚ್ಚಿಕೊಳ್ಳುವ ಅಗತ್ಯವಿದೆಯೇ?

ಈ ಪಾಪ್ ಕಾರ್ನ್ ಯುಗದಲ್ಲಿ ಯಾವುದಕ್ಕಾದರೂ ಸಮಯವಿದೆಯೇ? ಸಮಯ ಇದ್ದರೂ ನಮಗೆ ತಾಳ್ಮೆ, ವ್ಯವಧಾನವಿದೆಯೇ? ಪ್ರಶ್ನೆಗಳು ಕಾಡುತ್ತವೆ. ನೆನಪುಗಳು ಒತ್ತರಿಸುತ್ತವೆ. ನಾನೇ ಉತ್ತರಿಸಿಕೊಳ್ಳಬೇಕು.

ಈಗ ದೂರದ ದೆಹಲಿಯಲ್ಲಿ ನಮಗೆ ಮಕರ ಸಂಕ್ರಾಂತಿಯ ಜತೆ ಇಲ್ಲಿನ ಪಂಜಾಬಿಗಳು ಆಚರಿಸುವ ಲೋರಿ, ಲೋಹ್ರಿ, ಅಥವಾ ಲೋಡಿ ಹಬ್ಬದಲ್ಲೂ ನಾವು ನೆರೆ ಹೊರೆಯವರೊಂದಿಗೆ ಒಂದಾಗುತ್ತೇವೆ. ಇಲ್ಲಿನ ಎಲ್ಲ ಆಚರಣೆಗಳೂ ನಮ್ಮದಾಗಿದೆ. ಊರು ನಮ್ಮದಲ್ಲ, ಜನರೂ ನಮ್ಮವರಲ್ಲ ಎಲ್ಲರೂ ಪರಿಚಿತರು. ಆದರೆ ಬಿಟ್ಟುಬಂದ ನಮ್ಮೂರಿನ ಆ ಸ್ನೇಹಿತರಂತಲ್ಲ, ಕುಸುರೆಳ್ಳಿನಂಥ ಸವಿ ಸವಿ ಸ್ನೇಹವೆಲ್ಲೂ ಇಲ್ಲ. ಆದರೆ ನಮ್ಮದಲ್ಲದ ಊರನ್ನು ನಮ್ಮವರಲ್ಲದ ಸ್ನೇಹಿತರನ್ನು ಸಂಪಾದಿಸಿಕೊಂಡು, ಅವರ ಸಂಪ್ರದಾಯದೊಡನೆ ನಮ್ಮ ಪರಂಪರೆಯನ್ನು ಹೊಸೆಯುತ್ತಾ ನಮ್ಮದರಂತೆಯೇ ಇರುವ, ನಮಗೆ ಬೇಕಾದಷ್ಟು ಅನುಕೂಲದ ಪರಂಪರೆಯೊಂದನ್ನು ನಾವಿದ್ದಲ್ಲಿ ಕಟ್ಟಿಕೊಂಡಿದ್ದೇವೆ ಹಾಗೂ ವಿಭಿನ್ನ ರೀತಿ–ನೀತಿಯ ಜನರೊಂದಿಗೆ ಸಾಮರಸ್ಯದಿಂದಿರುವಂತೆ ಹಾರೈಸಿ ಅಂದು ನಮ್ಮೂರಲ್ಲಿ ನಾವು ಎಳ್ಳು ಬೆಲ್ಲ ಕೊಟ್ಟು, ಒಳ್ಳೆಯವರಾಗಿರೋಣ ಅಂತಿದ್ದ ಮಾತಿನ ಅರ್ಥ ಇಲ್ಲಿ ದೂರ ತೀರದಲ್ಲಿ ಸಾಕಾರವಾಗಿದೆಯೇನೋ ಎಂದು ಸಮಾಧಾನ ಪಟ್ಟುಕೊಳ್ಳಬೇಕಾಗಿದೆ. ನಮ್ಮ ಕನ್ನಡಿಗ ಬಂಧುಗಳು, ಗುರುತು ಪರಿಚಯದವರು ಹತ್ತಿರವಿದ್ದರೆ ಅಲ್ಲಿ ಎಳ್ಳು ಬೀರಿ, ಅರಿಸಿನ ಕುಂಕುಮ ವಿನಿಮಯಿಸಿಕೊಂಡು ಬರುತ್ತೇವೆ. ಇಲ್ಲಿ ಲೋಹ್ರಿಯಂದು ನೆರೆಕೆರೆ, ಸ್ನೇಹಿತರು, ಬಂಧು ಬಾಂಧವರು ಕಲೆತು ಜನವರಿಯ ಕೊರೆಯುವ ಛಳಿಯಲ್ಲಿ ಕಟ್ಟಿಗೆ ಉರಿ ಹಾಕಿಕೊಂಡು , ಸುತ್ತಲೂ ದುಂಡಾಗಿ ಕುಳಿತು ಶೇಂಗಾ, ಪಾಪ್ ಕಾರ್ನ್, ರೇವಡಿ, ಗಜಕ್ ತಿನ್ನುತ್ತಾ (ಅವು ಎಳ್ಳು–ಬೆಲ್ಲ ಅಥವಾ ಎಳ್ಳು ಸಕ್ಕರೆಯ ಪದಾರ್ಥ), ಹಾಡು, ಡಾನ್ಸ್, ಜೋಕ್ಸ್ ಇತ್ಯಾದಿಗಳಲ್ಲಿ ನಾವೂ ಒಂದಾಗುತ್ತೇವೆ. ಹೊಸದಾಗಿ ಮದುವೆಯಾದ, ಮಗುವಾದ ಮನೆಗಳಲ್ಲಿ ದೊಡ್ಡ ಹಬ್ಬದ ವಾತಾವರಣ. ಬಂಧು–ಬಾಂಧವರಿಗೆಲ್ಲ ಭೋಜನ ಕೂಟ ನಡೆಯುತ್ತದೆ. ಢೋಲ್ ಬಾಜಾದವರು ಹುರುಪಿನಿಂದ ಬಾರಿಸಿದಂತೆಲ್ಲ ತಾಳಕ್ಕೆ ತಕ್ಕಂತೆ ಹೆಜ್ಜೆಹಾಕಿ ಜನ ಕುಣಿದು ನಲಿಯುತ್ತಾರೆ. ನಮ್ಮ ಕುಸುರೆಳ್ಳಿನ ಸೊಬಗು, ಎಳ್ಳು ಬೆಲ್ಲದ ಸದ್ದು ಗದ್ದಲವಿಲ್ಲದ, ಚೆಂದವಾದ, ಒಳ್ಳೆ ಹಾಡನ್ನು ಗುನುಗುನಿಗಿಸಿಕೊಂಡಂಥಾ ಸಂಕ್ರಾಂತಿಯ ಹಬ್ಬದ ನೆನಪಿನ ಗುಂಗಿನಲ್ಲಿ ನಾವೂ ಒಂದಾಗುತ್ತೇವೆ.

*ಎಲ್ಲರಿಗೂ ಮಕರ ಸಂಕ್ರಾಂತಿಯ ಶುಭಾಶಯಗಳು.*

■ ರೇಣುಕಾ ನಿಡಗುಂದಿ

## ಮಾತೃಭಾಷೆಗೆ ಮಾತ್ರ ಎಲ್ಲರನ್ನೂ ಒಗ್ಗೂಡಿಸುವ ಶಕ್ತಿಯಿದೆ– ಎಂ.ರಾಮಾ ಜೋಯಿಸ್
## ನೋಯಿಡಾದಲ್ಲಿ ವಾರ್ತಾ ಇಲಾಖೆ ವತಿಯಿಂದ ಕರ್ನಾಟಕ ರಾಜ್ಯೋತ್ಸವ



ಎಲ್ಲರನ್ನೂ ಒಗ್ಗೂಡಿಸುವ ಶಕ್ತಿ ಮಾತೃಭಾಷೆಗೆ ಮಾತ್ರ, ಕನ್ನಡಿಗರು ಎಲ್ಲಾ ಭಾಷೆಗಳನ್ನು ಪ್ರೀತಿಸಿ, ಆದರೆ ಮಾತೃಭಾಷೆಯಿಂದ ಎಂದಿಗೂ ದೂರಾಗದಿರಿ, ಎಲ್ಲಾದರೂ ಇರಿ, ಎಂತಾದರೂ ಇರಿ, ಕನ್ನಡ ನಾಡಿನ ಸಂಸ್ಕೃತಿಯನ್ನು ಸದಾ ಉಸಿರಾಡಿ ಎಂದು ರಾಜ್ಯಸಭಾ ಸದಸ್ಯ ಎಂ. ರಾಮಾ ಜೋಯಿಸ್ ಅವರು ಹೊರನಾಡ ಕನ್ನಡಿಗರಿಗೆ ಕರೆ ನೀಡಿದರು. ವಾರ್ತಾ ಇಲಾಖೆಯು ನೋಯಿಡಾದ ಜೆ.ಎಸ್.ಎಸ್ ಅಕಾಡೆಮಿ ಆಫ್ ಟೆಕ್ನಿಕಲ್ ಎಜುಕೇಶನ್ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ರಾಮಾ ಜೋಯಿಸ್ ಮಾತನಾಡಿದರು.

ಕನ್ನಡಿಗರು ವಿಶಾಲ ಹೃದಯದವರು, ಶಾಂತಿ ಪ್ರಿಯರು ಇತರೆ ಭಾಷಿಕರೊಂದಿಗೆ ಸೌಹಾರ್ದಯುತ ಸಂಬಂಧವನ್ನು ಹೊಂದಿ, ಪ್ರೀತಿ ವಿಶ್ವಾಸವನ್ನೇ ಧಾರೆ ಎರೆದು ಮನಗೆಲ್ಲುವವರೇ ಕನ್ನಡಿಗರು, ಹಾಗಾಗಿ ಕನ್ನಡವನ್ನು ನಮ್ಮ ಉಸಿರಾಗಿರಿಸಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಿದರು. ವಾರ್ತಾ ಇಲಾಖೆಯು ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮಗಳ ಮೂಲಕ ಹೊರನಾಡ ಕನ್ನಡಿಗರಿಗೆ ಕನ್ನಡ ಸಂಸ್ಕೃತಿ, ಕಲೆ, ಸಾಹಿತ್ಯ, ಹತ್ತು ಹಲವಾರು ವಿಷಯಗಳನ್ನು ಪರಿಚಯ ಮಾಡಿಕೊಡುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಪ್ರಥಮ ಸ್ಥಾನ ಕರ್ನಾಟಕದ್ದಾಗಿದೆ. ಇದಕ್ಕೆ ಉತ್ತಮ ಉದಾಹರಣೆ ಎಂದರೆ ನೋಯಿಡಾದಲ್ಲಿನ ಜೆ.ಎಸ್.ಎಸ್ ಅಕಾಡೆಮಿ ಆಫ್ ಟೆಕ್ನಿಕಲ್ ಎಜುಕೇಶನ್ ಸಂಸ್ಥೆ. ಈ ಸಂಸ್ಥೆ ಸ್ಥಾಪಿತವಾದ ಕೆಲವೇ ವರ್ಷಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಮೇರು ಸ್ಥಾನವನ್ನು ಪಡೆದಿದೆ. ಶಿಕ್ಷಣ ನೀಡುವುದರ ಜೊತೆಗೆ ಇಲ್ಲಿ ಕನ್ನಡದ ಸಂಸ್ಕೃತಿಯನ್ನು ಉಳಿಸಿ–ಬೆಳೆಸಿಕೊಂಡು ಬರುತ್ತಿರುವುದು ಸಂತಸ ತಂದಿದೆ ಎಂದು ಇದೇ ಸಂದರ್ಭದಲ್ಲಿ ಎಂ. ರಾಮಾ ಜೋಯಿಸ್ ಅವರು ಹರ್ಷ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಭಾರತೀಯ ಭೂಸೇನೆಯ ಲೆಫ್ಟಿನೆಂಟ್ ಕರ್ನಲ್ ಸತೀಶ್ ಬಿ.ಎಸ್ ಮಾತನಾಡಿ, ಹೊರನಾಡಿನಲ್ಲೂ ರಾಜ್ಯೋತ್ಸವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದರಿಂದ ಹೊರನಾಡಿನ ಕನ್ನಡಿಗರಲ್ಲಿ ನಾವೆಲ್ಲರೂ ಒಂದು ಎಂಬ ಭಾವನೆ ಮತ್ತಷ್ಟು ಗಟ್ಟಿಯಾಗಲು ಸಹಕಾರಿಯಾಗಿದೆ ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜೆಎಸ್ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಬಿ.ಎನ್.ಬೆಟ್‌ಕೆರೂರ್ ಅವರು, ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಆಂಗ್ಲ ಭಾಷೆಯ ಸಂಸ್ಕೃತಿ ಹೆಚ್ಚಾಗುತ್ತಿರುವುದು ವಿಷಾದನೀಯ, ಆದರೆ, ಹೊರನಾಡಿನಲ್ಲಿ ನೆಲಸಿರುವ ಕನ್ನಡಿಗರ ಮಕ್ಕಳು ಕನ್ನಡ ಸಂಸ್ಕೃತಿಯ ಜೊತೆಗೆ ಬೆರೆಯುತ್ತಿರುವುದು ಉತ್ತಮ ಬೆಳವಣಿಗೆ ಎಂದು ನುಡಿದರು.

ಕರ್ನಾಟಕ ವಾರ್ತಾ ಕೇಂದ್ರದ ಉಪ ನಿರ್ದೇಶಕ ಗಿರೀಶ್ ಎಲ್.ಪಿ ಅವರು ಸ್ವಾಗತಿಸಿದರು. ಜೆ.ಎಸ್.ಎಸ್ ಅಕಾಡೆಮಿ ಆಫ್ ಟೆಕ್ನಿಕಲ್ ಎಜುಕೇಶನ್ ಸಂಸ್ಥೆಯ ಶಿರೂರು ನಿರೂಪಿಸಿದರು. ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಮಾಜಿ ಅಧ್ಯಕ್ಷ ಶ್ರೀನಿವಾಸ್ ಜಿ.ಕಪ್ಪಣ್ಣ ಅವರ ಪರಿಕಲ್ಪನೆ ಮತ್ತು ನಿರ್ದೇಶನದಲ್ಲಿ ಕರ್ನಾಟಕದ ಕಲಾವಿದರಿಂದ ತರಬೇತಿ ಪಡೆದ ದೆಹಲಿಯ ಕಲಾವಿದರಿಂದ ರಂಗಗೀತೆ, ಜಾನಪದಗೀತೆ, ಕೋಲಾಟ, ಕಂಸಾಳೆ, ಲಂಬಾಣಿ ನೃತ್ಯ, ಸಮೂಹ ನೃತ್ಯ ಕಾರ್ಯಕ್ರಮಗಳು ಪ್ರೇಕ್ಷಕರ ಮನ ಗೆಲ್ಲುವಲ್ಲಿ ಯಶಸ್ವಿಯಾದವು.

ಸಫ್ದರ್‌ಜಂಗ್‌ನಲ್ಲಿರುವ ಶ್ರೀ ಮಧ್ವ ಸಂಘವು ಪುರಂದರ ದಾಸರ ಆರಾಧನೆಯ ಪ್ರಯುಕ್ತ ಜನವರಿ 15, 2012ರಂದು ಮಧ್ಯಾಹ್ನ 1 ಗಂಟೆಗೆ ಹಾಡಿನ ಸ್ಪರ್ಧೆಯನ್ನು ಹಮ್ಮಿಕೊಂಡಿದೆ. ಇದರಲ್ಲಿ ವಿಜೇತರಾದವರಿಗೆ 23.01.2012ರಂದು ಸಾಯಂಕಾಲ 6 ಗಂಟೆಗೆ ಬಹುಮಾನ ವಿತರಣೆ ಹಾಗೂ ಪುರಂದರದಾಸರ ಆರಾಧನಾ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದ ಬಗ್ಗೆ ಹೆಚ್ಚಿನ ಮಾಹಿತಿಗಳಿಗಾಗಿ ಡಾ. ಮಧುಸೂದನ ರಾವ್ (9810357065), ಶ್ರೀ ನಾರಾಯಣ ಕುಲಕರ್ಣಿ (9971801407) ಹಾಗೂ ಶ್ರೀ ಕೆ.ಆರ್. ರಾಮಮೂರ್ತಿ (9810432362) ಅವರನ್ನು ಸಂಪರ್ಕಿಸಬಹುದು.

# ರಕ್ತದಾನ ಜೀವನದಾನ

"ಒಲವಿನ ಉಡುಗೊರೆ ಕೊಡಲೇನು ರಕುತದಿ ಬರೆದಿಹೆ ಇದನಾನು" ಈ ಸಾಲು ಅದೆಷ್ಟೋ ಬಾರಿ ನಮ್ಮ ಕಿವಿಗಳಿಗೆ ಬಿದ್ದಿದೆ–ಚಿತ್ರಗೀತೆಗಳ ಮೂಲಕ. ಒಬ್ಬ ಪ್ರೇಮಿ ತನ್ನ ಪ್ರೇಯಸಿಗೆ ಅಥವಾ ಪ್ರಿಯಕರನಿಗೆ ಈ ಸಾಲನ್ನು ಹೇಳುವಾಗ ಆತ ಅಥವಾ ಆಕೆ ಕೊಡುವ ಆ ಉಡುಗೊರೆಗೆ ಮಹತ್ವ ಬರುವುದು ಅದನ್ನು ರಕ್ತದಿಂದ ಬರೆದಿರುವ ಕಾರಣ. ರಕ್ತ ಒಂದು ಜೀವ ಸೆಲೆ. ಶರೀರದಲ್ಲಿ ಇಲ್ಲದಿದ್ದರೆ ರಕ್ತ; ಜೀವನ ಅವ್ಯಕ್ತ. ನಿಜವಾದ ಅರ್ಥದಲ್ಲಿ ರಕ್ತ ಜೀವಿಯ ಶರೀರದಲ್ಲಿರುವ ಓಜಸ್ಸು. ಜೀವಿಯ ಹುಟ್ಟಿನಿಂದಲೂ ಈ ರಕ್ತದ ಬಗ್ಗೆ ಒಂದು ರೀತಿಯ ಅನಿರ್ವಚನೀಯ ಭಯ, ಗೌರವ. ಜಗತ್ತಿನ ಇತಿಹಾಸದ ಪುಟಗಳಲ್ಲಂತೂ ಅದೆಷ್ಟೋ ರಕ್ತರಂಜಿತ ಅಧ್ಯಾಯಗಳು ! ಅದೆಷ್ಟೋ ರಕ್ತತರ್ಪಣಗಳಾಗಿಯೇ ಸಾಮ್ರಾಜ್ಯಗಳು ಸ್ಥಾಪನೆಯಾಗಿವೆ, ಅಳಿದಿವೆ. ಇನ್ನು ಅದೆಷ್ಟೋ ದೇವರುಗಳಿಗೆ, ಭೂತಗಳಿಗೆ ಬಲಿರೂಪವಾಗಿ ರಕ್ತದ ಕೋಡಿಯೇ ಹರಿದಿದೆ. ಕಾರಣವೇನು? ರಕ್ತ ಜೀವ–ಪ್ರಾಣದ ಸಂಕೇತ. ಬದುಕು ಹಾಗೂ ಸಾವಿನ ಮಧ್ಯೆಯ ಕೊಂಡಿಯೇ ಓತಪ್ರೋತವಾಗಿ ಪ್ರವಹಿಸುವ ರಕ್ತ ಸಂಚಾರ. ರಕ್ತ ಮತ್ತು ಪ್ರಾಣ ಒಂದು ಜೀವನ ನಾಣ್ಯದ ಎರಡು ಮಗ್ಗುಲುಗಳು. ಇತ್ತೀಚಿನವರೆಗೂ ಅಂದರೆ ಸುಮಾರು ಆಧುನಿಕ ಯುರೋಪಿನ ನಿರ್ಮಾಣ ಕಾಲದವರೆಗೂ ಜನರು ಮಾನವ ಶರೀರದ ತುಂಬಾ ರಕ್ತ ತುಂಬಿಕೊಂಡಿದೆ ಎಂದೇ ತಿಳಿದಿದ್ದರು. ತದನಂತರದ ಆವಿಷ್ಕಾರಗಳು ಕ್ರಮೇಣ ಶರೀರ ರಚನೆ, ಅಂಗಾಂಗಳು, ರಕ್ತ ಇತ್ಯಾದಿಗಳ ಪಾತ್ರವನ್ನು ಸಂಶೋಧಿಸುತ್ತಾ ಬಂದ ಕಾರಣ ಇಂದು ಮನುಷ್ಯನಿಗೆ ರಕ್ತದ ಮಹತ್ವ ಇನ್ನಷ್ಟು ಚೆನ್ನಾಗಿ ಅರಿವಿಗೆ ಬರುತ್ತಿದೆ.

## ರಕ್ತದಾನ ಮಹಾ ಯಜ್ಞ

ಅನ್ನದಾನದಿಂದ ವ್ಯಕ್ತಿಗೆ ಕ್ಷಣಿಕವಾಗಿ ಹಸಿವು ಇಂಗಿಸಬಹುದು.
ವಿದ್ಯಾ ದಾನದಿಂದ ಇತರರನ್ನು ಸುಶಿಕ್ಷಿತಗೊಳಿಸಬಹುದು.
ಆದರೆ . . .
ರಕ್ತದಾನದ ಮೂಲಕ ನೀವು ಇನ್ನೋರ್ವ ವ್ಯಕ್ತಿಗೆ ಜೀವದಾನ ನೀಡುತ್ತೀರಿ
ಇದಕ್ಕಿಂತ ಮಿಗಿಲಾದ ಪುಣ್ಯ ಕಾರ್ಯ ಉಂಟೇ?

ರಕ್ತದ ಅಭಾವದಿಂದಲೂ ರೋಗ ರುಜಿನಗಳ ಉಗಮವಾದರೆ, ರಕ್ತದ ಒತ್ತಡ ಕೂಡಾ ಶರೀರಕ್ಕೆ ಹಾನಿಕಾರಕ. ರಕ್ತದ ಸಂಸ್ಕರಣ, ವಿತರಣ ಹಾಗೂ ಪ್ರತ್ಯಾರೋಹಣ (Transfusion) ಆಧುನಿಕ ವಿಜ್ಞಾನದ ವಿಶಿಷ್ಟ ಕೊಡುಗೆ. ಅಪಘಾತಕ್ಕೆ ಈಡಾದ ವ್ಯಕ್ತಿಯನ್ನು ಶಸ್ತ್ರಕ್ರಿಯೆಯ ಮೂಲಕ ಬದುಕಿಸಬಲ್ಲ ಏಕೈಕ ದಿವ್ಯ ಔಷಧ ರಕ್ತದಾನ. ವಿಪರ್ಯಾಸವೆಂದರೆ ಈ ದಿವ್ಯ ಔಷಧ ಸಕಾಲಕ್ಕೆ ಸಿಗದೇ ಮೃತ್ಯುವಿಗೆ ಬಲಿಯಾದ ಅನೇಕ ಉದಾಹರಣೆಗಳನ್ನು ನೋಡುತ್ತೇವೆ. ಇಂತಹ ಗಂಭೀರ ಸಮಸ್ಯೆಗಳಿಗೆ ಪರಿಹಾರದ ರೂಪದಲ್ಲಿರುವ ವರದಾನವೇ ರಕ್ತದಾನ. ಅಪಘಾತಗಳಷ್ಟೇ ಅಲ್ಲ ಆಧುನಿಕ ವೈದ್ಯಕೀಯ ಚಿಕಿತ್ಸೆಗೆ ಸವಾಲಾಗಿರುವ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುವಲ್ಲಿ ಪ್ರಮುಖವಾದ ಸಂಜೀವಿನಿ ಆವಿಷ್ಕಾರಗಳಲ್ಲಿ ರಕ್ತದಾನ ಕೂಡಾ ಒಂದು. ರಕ್ತಕ್ಕೆ ಸಂಬಂಧಪಟ್ಟ ಕ್ಯಾನ್ಸರ್ ಹಾಗೂ ಇನ್ನಿತರ ರೋಗಗಳಲ್ಲಿ (ಹಿಮೋಫಿಲಿಯಾ, ಲ್ಯೂಕೊಮಿಯಾ, ಪ್ಲಾಸ್ಟಿಕ್ ಅನಿಮಿಯಾ) ರಕ್ತದ ಪ್ರತ್ಯಾರೋಹಣ ಅನಿವಾರ್ಯ. ಏಡ್ಸ್ ಮಹಾಮಾರಿಗೆ ಬಲಿಯಾದ ವ್ಯಕ್ತಿಗಳಿಗೆ ಕೂಡಾ ರಕ್ತದ ಕೊರತೆ ಸ್ವಾಭಾವಿಕ ಇಷ್ಟೇ ಅಲ್ಲ ಯಾವುದೇ ಪ್ರಕಾರದ ಶಸ್ತ್ರಕ್ರಿಯೆಯ ಸಂದರ್ಭದಲ್ಲಿ ರೋಗಿಗೆ ರಕ್ತದ ಕೊರತೆ ನೀಗಿಸುವ ಏಕೈಕ ಸಾಧನ ರಕ್ತದ ಪ್ರತ್ಯಾರೋಹಣ.

ರಕ್ತದ ಬಗೆಗಿನ ಮೌಢ್ಯಗಳು ಕಡಿಮೆಯಾಗುತ್ತಿದ್ದರೂ ಕೂಡ ಇನ್ನೂ ಬಹುಪಾಲು ಜನರಿಗೆ ಅದರ ಬಗ್ಗೆ ಎಚ್ಚೆತ್ತುಕೊಳ್ಳುವ ಆಸಕ್ತಿಯ ಕೊರತೆ ಜನಸಂಖ್ಯೆಯಿಂದ ತುಂಬಿ ತುಳುಕುತ್ತಿರುವ ಭಾರತದಂತಹ ದೇಶದಲ್ಲಿ ಕಂಡು ಬರುತ್ತಿರುವುದು ನಿಜಕ್ಕೂ ವಿಷಾದನೀಯ. ರಕ್ತದ ಅಭಾವದ ಮೂಲಕ ಅನೇಕ ಜೀವಗಳು ಅಪರೇಷನ್ ಥಿಯೇಟರ್‌ನಲ್ಲಿಯೇ ತಣ್ಣಗಾಗಿರುವ ಅನೇಕ ಉದಾಹರಣೆಗಳಿವೆ. ಜಗತ್ತಿನ ಅತ್ಯಂತ ಜನ ನಿಬಿಡ ದೇಶದಲ್ಲಿ ರಕ್ತದಾನದ ಕೊರತೆ ಏಕೆ? ರಕ್ತ

## ಬೇಕಾಗಿದ್ದಾರೆ

ಜಾತಿ, ಮತ, ಪಂಥಗಳ ಅಡ್ಡಗೋಡೆಯನ್ನು ಮೆಟ್ಟಿ, ಕೇವಲ ಮಾನವೀಯತೆಯನ್ನು ಆದರಿಸುತ್ತಾ, ಇತರರಿಗಾಗಿ ಅನುಕಂಪ ತೋರಬಲ್ಲ ವ್ಯಕ್ತಿ ನೀವಾಗಿದ್ದರೆ...

ಸಂಪರ್ಕಿಸಿ. ನಿಮ್ಮ ಸಮೀಪದ ಬ್ಲಡ್ ಬ್ಯಾಂಕ್.

ವಯಸ್ಸು : 18 ರಿಂದ 60ರವರೆಗೆ; ಸ್ತ್ರೀ / ಪುರುಷ

ಅರ್ಹತೆ : ನಿರೋಗಿಯಾಗಿರತಕ್ಕದ್ದು

ಶೈಕ್ಷಣಿಕ ಅರ್ಹತೆ / ಅನುಭವ / ಕೌಶಲ್ಯ : ಬೇಕಾಗಿಲ್ಲ !!!

ಸಹೃದಯತೆ, ಸಂವೇದನಾಶೀಲತೆಗೆ ಆದ್ಯತೆ.

ಕಳೆದುಕೊಳ್ಳುತ್ತಿರುವವರಿಗೆ ಅವರ ರಕ್ತಕ್ಕೆ ಅನುಗುಣವಾದ ರಕ್ತದ ಒದಗಣೆ ಬಹಳ ಮುಖ್ಯ. ಇಂತಹ ಒದಗಣೆಗೆ ಸಾಕಷ್ಟು ಪ್ರಮಾಣದಲ್ಲಿ ಬ್ಲಡ್ ಬ್ಯಾಂಕ್‌ಗಳು ಇದ್ದರೂ ಕೂಡ, ನಮ್ಮ ದೇಶದಲ್ಲಿ ಅಂತಹ ಬ್ಲಡ್ ಬ್ಯಾಂಕ್‌ಗಳಿಗೆ ರಕ್ತದಾನ ಮಾಡುವವರ ಸಂಖ್ಯೆ ಜನಸಂಖ್ಯೆಗೆ ಹೋಲಿಸಿದರೆ ಅತೀ ಕಡಿಮೆ. ಜನಸಾಮಾನ್ಯರಲ್ಲಿ ರಕ್ತದಾನದ ಕುರಿತು ಮಾಹಿತಿ ಹಾಗೂ ಸಾಕಷ್ಟು ಪ್ರಚಾರ ಇವುಗಳ ಕೊರತೆ, ದೇಶದಾದ್ಯಂತ ಇರಬೇಕಾದ 'ಸುಸಜ್ಜಿತ' ಬ್ಲಡ್ ಬ್ಯಾಂಕ್‌ಗಳ ಅಭಾವ ಇವುಗಳು ಮುಖ್ಯವಾಗಿ ರಕ್ತದ ಲಭ್ಯತೆಯ ಕೊರತೆಗೆ ಕಾರಣ.

ಇನ್ನು ನಮ್ಮ ದೇಶದಲ್ಲಿ ಅರ್ಧದಷ್ಟು ಮಹಿಳೆಯರು ರಕ್ತ ಹೀನತೆಯಿಂದ ಬಳಲುತ್ತಿದ್ದಾರೆ. ಇದು ಯೋಜನಾ ಆಯೋಗದ ಘಟಕವಾಗಿರುವ ಸಂಶೋಧನಾ ಸಂಸ್ಥೆಯೊಂದು ಸಿದ್ಧಪಡಿಸಿರುವ ಭಾರತ ಮಾನವ ಅಭಿವೃದ್ಧಿ ವರದಿ (IDHR) ಯಲ್ಲಿ ವ್ಯಕ್ತವಾಗಿರುವ ಈ ಅಂಶದಲ್ಲಿ ಬಹುತೇಕ ಭಾರತೀಯ ಮಹಿಳೆಯರಲ್ಲಿ ಹಿಮೋಗ್ಲೋಬಿನ್ ಮಟ್ಟ ಆರೋಗ್ಯವಂತ ಮಹಿಳೆಯರಲ್ಲಿ ಇರಬೇಕಾದ 12 ಗ್ರಾಂ/ ಡೆಸಿ ಲೀಟರ್ ಪ್ರಮಾಣಕ್ಕಿಂತ ಕಡಿಮೆ ಇರುವುದು ವ್ಯಕ್ತವಾಗಿದೆ. ಈ ಸಮಸ್ಯೆಗೆ ಮುಖ್ಯ ಕಾರಣ ನಾವು ಹೆಣ್ಣು ಮಕ್ಕಳನ್ನು ಸಾಂಸ್ಕೃತಿಕವಾಗಿ ನೋಡುವ ದೃಷ್ಟಿಕೋನ ಇನ್ನೂ ಬದಲಾಗದಿರುವುದು. ಹೆಣ್ಣು ಗಂಡು ಎಂಬ ತಾರತಮ್ಯದ ಧೋರಣೆಗಳಿಂದಾಗಿ ಹೆಣ್ಣು ಮಕ್ಕಳಿಗೆ ಬಾಲ್ಯದಲ್ಲಿ ಸಿಗಬೇಕಾದ ಪೋಷಣೆ ಸಿಗದೇ ಇರುವುದು, ಭಾರತೀಯ ಆಹಾರ ಕ್ರಮದಲ್ಲಿ ಕಬ್ಬಿಣಾಂಶದ ಕೊರತೆ, ನೀರು ಹಾಗು ಆಹಾರಜನ್ಯ ಸೋಂಕುಗಳಿಂದಾಗುವ ತೀವ್ರ ರಕ್ತದ ನಷ್ಟವೂ ಈ ರಕ್ತ ಹೀನತೆಗೆ ಕಾರಣವಾಗಿದೆ. ನಮ್ಮ ದೇಶದಲ್ಲಿ ಗರ್ಭಿಣಿಯರಲ್ಲಾಗುವ ರಕ್ತಹೀನತೆಯ ದುಷ್ಪರಿಣಾಮಗಳು ಹಲವು ಪೀಳಿಗೆಗಳವರೆಗೆ ಹರಿದುಬರುವುದು ಸಮಸ್ಯೆಯ ಗಂಭೀರತೆಯನ್ನು ಇನ್ನಷ್ಟು ಹೆಚ್ಚಿಸುತ್ತದೆ. ಇಂತಹ ಸಮಸ್ಯೆಗಳಲ್ಲಿ ರಕ್ತದ ಬೇಡಿಕೆ ಹೆಚ್ಚಾಗಿರುತ್ತದೆ. ಆದರೆ ಪೂರೈಕೆ ಹಾಗೂ ಬೇಡಿಕೆಗಳ ಅಂತರ ಬಹಳವಾಗಿರುತ್ತದೆ. "ಪರೋಪಕಾರಾರ್ಥಂ ಇದಂ ಶರೀರಂ", "ಸರ್ವೇ ಜನಾಃ ಸುಖಿನೋ ಭವಂತು" ಇತ್ಯಾದಿ ಸಂದೇಶಗಳನ್ನು ಪಠಿಸುತ್ತಿರುವ ನಮ್ಮ ಸಮಾಜ ರಕ್ತದಾನಕ್ಕೆ ಹಿಂಜರಿಯುತ್ತಿರುವುದು ಒಂದು ಕಟು ಸತ್ಯ. ಅನ್ಯ ವ್ಯಕ್ತಿಗೆ ರಕ್ತ ಬೇಕಾದ ಸಂದರ್ಭದಲ್ಲಿ "ಅಯ್ಯೋ ಪಾಪ, ರಕ್ತ ಬೇಕಿತ್ತಂತೆ. ಆದರೆ ನಾವೇನು ಮಾಡೋಣ? ಅವರ ಸಂಬಂಧಿಗಳೇ ಕೊಟ್ಟುಕೊಳ್ಳಲಿ, ನಾವ್ಯಾಕೆ ತಲೆಕೆಡಿಸಿಕೊಳ್ಳಬೇಕು, ನಮಗೆ ಸಮಸ್ಯೆ ಬಂದಾಗ ನೋಡಿಕೊಳ್ಳೋಣ" ಎಂಬ ಮನೋವೃತ್ತಿಯೇ ರಕ್ತದಾನದ ಮಹಾ ಶತ್ರು.

ಈ ಸಮಯದಲ್ಲಿ ದೆಹಲಿ ಕರ್ನಾಟಕ ಸಂಘವು ಕೂಡ ರಕ್ತದಾನದಲ್ಲಿ ತನ್ನದೇ ಆದ ಪಾತ್ರವನ್ನು ವಹಿಸಲಿದ್ದು ಸಂಘದ ಎಲ್ಲಾ ಸದಸ್ಯರು ಆದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಮುಂದೆ ಬಂದು ಫೆಬ್ರವರಿ 26ರಂದು ಸಂಘದ ಆವರಣದಲ್ಲೇ ನಡೆಯಲಿರುವ ರಕ್ತದಾನ ಶಿಬಿರದಲ್ಲಿ ಪಾಲ್ಗೊಳ್ಳುವರೆಂಬ ಅಭಿಮತ ನಮ್ಮದು. ಈ ಹಿಂದೆಯೂ ಕೂಡ ಸಂಘ, ಅಖಿಲ ಭಾರತ ಆಯುರ್ವಿಜ್ಞಾನ ಸಂಸ್ಥೆ (AIIMS) ಯ ತಜ್ಞರ ಸಹಕಾರದಿಂದ ರಕ್ತದಾನ ಶಿಬಿರಗಳನ್ನು ಯಶಸ್ವಿಯಾಗಿ ಆಯೋಜಿಸಿತ್ತು. ಈ ಬಾರಿಯೂ ಕೂಡಾ ನಮ್ಮವರೇ ಆದ ಡಾ. ಬಿ.ವಿ. ಅಡ್ಡೊಳಿ ಅವರ ಮಾರ್ಗದರ್ಶನದಲ್ಲಿ ಸಂಘ ರಕ್ತದಾನ ಶಿಬಿರವನ್ನು ನಡೆಸಲಿದೆ. ಜೊತೆಗೆ AIIMS ನ ತಜ್ಞ ವೈದ್ಯರ ಸಹಕಾರದಿಂದ ಹೃದ್ರೋಗ ಹಾಗೂ ಜೀರ್ಣಾಂಗ ರೋಗಗಳ ಬಗ್ಗೆ ಉಚಿತ ಸಲಹಾ ಶಿಬಿರವನ್ನೂ ನಡೆಸುವ ಬಗ್ಗೆ ಆಲೋಚನೆ ನಡೆದಿದೆ. ಆರೋಗ್ಯದ ಸಮಸ್ಯೆಗಳು ಹೆಚ್ಚುತ್ತಿರುವ ಈ ಒತ್ತಡದ ಸಮಯದಲ್ಲಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಇಂತಹ ಮಾಹಿತಿಯುಕ್ತ ಶಿಬಿರಗಳ ಲಾಭ ಪಡೆಯುವಂತಾಗಲಿ ಎಂಬುದು ನಮ್ಮೆಲ್ಲರ ಬಯಕೆ.



## ರಕ್ತದಾನ ಕುರಿತು ಹೆಚ್ಚಿನ ಮಾಹಿತಿಗಾಗಿ ಡಾ. ಬಿ.ವಿ. ಅಡ್ಕೊಳಿ ಅವರನ್ನು ಸಂದರ್ಶಿಸಿದಾಗ ಅವರು ನಮ್ಮ ಜೊತೆ ಈ ಕೆಳಗಿನ ವಿಷಯಗಳನ್ನು ಹಂಚಿಕೊಂಡರು

ಅಭಿಮತ :– ಡಾ. ಅಡ್ಕೊಳಿಯವರೆ ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ, ಆರೋಗ್ಯ ಶಿಕ್ಷಣ ಕಾರ್ಯಗಳಲ್ಲಿ ತಾವು ಬಹಳ ಸಕ್ರಿಯರು. ಈ ಹಿಂದೆ ನಡೆದ ಶಿಬಿರಗಳಲ್ಲಿ ತಮ್ಮ ಮಾರ್ಗದರ್ಶನ ನಮಗೆಲ್ಲಾ ಅತ್ಯಂತ ಸ್ಫೂರ್ತಿದಾಯಕವಾಗಿತ್ತು. ಇನ್ನು ಕೆಲವೇ ತಿಂಗಳಲ್ಲಿ ತಾವು ಹಾಗು ತಮ್ಮ ಂಖಖಿಖಿಖ ನ ವೈದ್ಯರುಗಳ ತಂಡ ಮತ್ತೊಮ್ಮೆ ರಕ್ತದಾನ ಶಿಬಿರ ಹಾಗು ಸಾಮಾನ್ಯ ಆರೋಗ್ಯ ಶಿಬಿರವನ್ನು ನಡೆಸಿಕೊಡ್ತಾ ಇದ್ದೀರಾ. ಅದಕ್ಕಾಗಿ ಸಂಘ ಸದಾ ಕೃತಜ್ಞ. ಈ ರಕ್ತದಾನ ಶಿಬಿರಕ್ಕೂ ಮೊದಲು ನಮ್ಮ ಸದಸ್ಯರಿಗೆ ಇನ್ನಷ್ಟು ತಿಳುವಳಿಕೆ ನೀಡುವುದಕ್ಕಾಗಿ ತಮ್ಮಲ್ಲಿ ಕೆಲವು ಪ್ರಶ್ನೆಗಳು.

ಅಡ್ಕೊಳಿ :– ಧನ್ಯವಾದ. ಸಂಘದ ಜೊತೆ ಕೆಲಸ ಮಾಡುವುದು ಬಹಳ ಸಂತೋಷ ಕೊಡುವಂತಹದ್ದು. ಆರೋಗ್ಯ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡ್ತಾ ಇರೋ ನನಗೆ ಈ ಕೆಲಸ ಒಂದು ರೀತಿಯಲ್ಲಿ ಕರ್ತವ್ಯ ಕೂಡಾ. ಅಂದಹಾಗೆ ರಕ್ತದಾನ ಬಗ್ಗೆ ಕೆಲವು ತಪ್ಪು ನಂಬಿಕೆಗಳಿವೆ. ಅದನ್ನ ನಾನಿಲ್ಲಿ ತಿದ್ದೋ ಪ್ರಯತ್ನ ಮಾಡ್ತೀನಿ.

ಅಭಿಮತ :– ರಕ್ತದಾನ ಮಾಡೋದಕ್ಕೆ, ದಾನಿಗೆ ಯಾವ ಅರ್ಹತೆ ಇರಬೇಕು?

ಅಡ್ಕೊಳಿ :– ರಕ್ತದಾನಿಯ ವಯಸ್ಸು 18 ಅಥವಾ ಮೇಲ್ಪಟ್ಟು ಹಾಗು 60ರ ಒಳಗೆ ಇರಬೇಕು. ಅವರ ಆರೋಗ್ಯ ಚೆನ್ನಾಗಿರಬೇಕು, ಯಾವುದೇ ರೀತಿ ಆಯಾಸಗೊಂಡಿರಬಾರದು, ಉಪವಾಸ ಮಾಡುತ್ತಿರಬಾರದು, ಜಿಡ್ಡು ಪದಾರ್ಥ ಸೇವಿಸಿರಬಾರದು.

ಅಭಿಮತ :– ರಕ್ತದಾನಕ್ಕಾಗಿ ಬಂದಾಗ ದಾನಿ ಏನೇನು ಮಾಡಬೇಕು?

ಅಡ್ಕೊಳಿ :– ದಾನಿಗಳು ತಮ್ಮ ಕುರಿತು ಕೆಲವು ಮಾಹಿತಿಗಳನ್ನು ನೀಡಬೇಕಾಗುತ್ತದೆ. ಉದಾ: ನಿಮ್ಮ ಹೆಸರು, ವಿಳಾಸ ಇತ್ಯಾದಿಗಳನ್ನು ಪ್ರಾಮಾಣಿಕವಾಗಿ ನೀಡಬೇಕು. ಈ ಎಲ್ಲಾ ವಿವರಗಳನ್ನು ಗೌಪ್ಯವಾಗಿ ಇಡಲಾಗುತ್ತದೆ. ನಿಮ್ಮ ರಕ್ತವನ್ನು ಬಿಡಿ ಅಂಶಗಳಾಗಿ ಪ್ರತ್ಯೇಕಿಸಲು, ವೈರಸ್ಸುಗಳು ಇವೆಯೋ ಅಂತ ಪರೀಕ್ಷೆ ಮಾಡಲು ಹಾಗೂ ಇದ್ದಲ್ಲಿ ನಿಮಗದನ್ನು ತಿಳಿಸಲು ನಿಮ್ಮ ಒಪ್ಪಿಗೆ ಇದ್ದಲ್ಲಿ, ಒಪ್ಪಿಗೆಯನ್ನು ಲಿಖಿತವಾಗಿ ನೀಡಬೇಕಾಗುತ್ತದೆ. ರಕ್ತದಾನಕ್ಕೂ ಮೊದಲು ರಕ್ತ ಬ್ಯಾಂಕಿನ ಉದ್ಯೋಗಿಯೊಬ್ಬರು ನಿಮ್ಮಲ್ಲಿ ಕೆಲವು ಪ್ರಶ್ನೆಗಳನ್ನು ಕೇಳುತ್ತಾರೆ ಹಾಗೂ ಕೆಲವು ಸರಳ ಪರೀಕ್ಷೆಗಳನ್ನು ಮಾಡುತ್ತಾರೆ. ನಿಮ್ಮ ನಾಡಿ ಬಡಿತ, ದೇಹದ ಉಷ್ಣತೆ, ರಕ್ತದ ಒತ್ತಡಗಳನ್ನೂ ಪರೀಕ್ಷಿಸಲಾಗುತ್ತದೆ. ನಿಮ್ಮ ಕೈಬೆರಳ ತುದಿಯಿಂದ ಸ್ವಲ್ಪವೇ ರಕ್ತವನ್ನು ತೆಗೆದು ನಿಮ್ಮ ರಕ್ತದಲ್ಲಿ ಕಬ್ಬಿಣದ ಕೊರತೆ ಇಲ್ಲವೆಂದು ದೃಢಪಡಿಸಿಕೊಳ್ಳಲಾಗುವುದು. ಈ ಎಲ್ಲಾ ಪರೀಕ್ಷೆಗಳಿಗೆ ಬಳಸುವ ಉಪಕರಣಗಳು ಅತ್ಯಂತ ಸ್ವಚ್ಛ, ಕ್ರಿಮಿ ರಹಿತವಾಗಿರುವಂತೆ ನೋಡಿಕೊಳ್ಳಲಾಗುವುದು. ಹಾಗೂ ಒಬ್ಬರಿಗೆ ಉಪಯೋಗಿಸಿದ ಸೂಜಿ ಇತ್ಯಾದಿಗಳನ್ನು ಇನ್ನೊಬ್ಬರಿಗೆ ಉಪಯೋಗಿಸಲಾಗುವುದಿಲ್ಲ.

ಅಭಿಮತ :– ರಕ್ತದಾನ ಸಂದರ್ಭದಲ್ಲಿ ಹಾಗೂ ನಂತರದಲ್ಲಿ ಏನೇನು ಮಾಡಬೇಕು?

ಅಡ್ಕೊಳಿ :– ಎಲ್ಲಾ ಪರೀಕ್ಷೆಗಳಾದ ನಂತರ ನೀವು ರಕ್ತದಾನ ಮಾಡುವ ಮಂಚದ ಮೇಲೆ ವಿಶ್ರಾಂತಿ ಮಾಡಬೇಕಾಗುತ್ತದೆ. ಅಲ್ಲಿ ನಿಮ್ಮ ತೋಳನ್ನು ನಂಜು ನಿರೋಧಕ ದ್ರಾವಣವೊಂದರಿಂದ ಸ್ವಚ್ಛ ಮಾಡಲಾಗುವುದು. ನಿಮಗೇನಾದರೂ ಅಯೋಡಿನ್ ಅಲರ್ಜಿ ಇದ್ದಲ್ಲಿ ಮೊದಲೇ ಹೇಳಿ. ನಿಮ್ಮಿಂದ ಸಾಮಾನ್ಯವಾಗಿ ಒಂದು ಯೂನಿಟ್ ರಕ್ತವನ್ನು ಪಡೆಯಲಾಗುವುದು. ಈ ಪ್ರಕ್ರಿಯೆಗೆ ಸುಮಾರು ಹತ್ತು ನಿಮಿಷಗಳಷ್ಟು ಹಿಡಿಯುತ್ತದೆ. ರಕ್ತದಾನದ ನಂತರ ನಿಮಗೆ ಲಘು ಉಪಾಹಾರ ಅಥವಾ ಪಾನೀಯಗಳನ್ನು ನೀಡಲಾಗುವುದು. ಸ್ವಲ್ಪ ಹೊತ್ತಿನ ನಂತರ ನಿಮಗೆ ವಿಶ್ರಾಂತಿ ಸಾಕೆನಿಸಿದ ಕೂಡಲೇ ನೀವು ರಕ್ತ ದಾನದ ಸ್ಥಳದಿಂದ ನಿರ್ಗಮಿಸಬಹುದು. ಮುಂದಿನ ಒಂದೆರಡು ದಿನಗಳಲ್ಲಿ ಪೌಷ್ಟಿಕ ಆಹಾರವನ್ನು ಸೇವಿಸಬೇಕು ಮತ್ತು ದ್ರವ ಆಹಾರವನ್ನು ಹೆಚ್ಚು ಸೇವಿಸುವುದು ಒಳ್ಳೆಯದು. ವಿಪರೀತ ಆಯಾಸವಾಗುವಂತಹ ಕೆಲಸಗಳನ್ನು ಮಾಡಬಾರದು. ರಕ್ತದಾನ ಮಾಡಿದ ಕೈಯಿಂದ ಭಾರ ಎತ್ತುವ ಇತ್ಯಾದಿ ಕೆಲಸಗಳನ್ನು ಕನಿಷ್ಠ 5 ಗಂಟೆಗಳ ಕಾಲ ಮಾಡದಿರುವುದು ಒಳ್ಳೆಯದು. ರಕ್ತದಾನದ ಮೊದಲು ಹಾಗು ನಂತರ ಬೀಡಿ, ಸಿಗರೇಟು ಸೇವನೆ, ಮದ್ಯಪಾನ ಮಾಡಬಾರದು. ಸಾಧಾರಣವಾಗಿ ರಕ್ತದಾನದ ನಂತರ ಯಾವ ತೊಂದರೆಯೂ ಆಗುವುದಿಲ್ಲ. ಆದಾಗ್ಯೂ ನಿಮಗೆ ತಲೆಸುತ್ತಿ ಬಂದಂತೆ ಅನಿಸಿದಲ್ಲಿ ಕೂಡಲೇ ಮಲಗಿ ತಲೆಸುತ್ತುವಿಕೆ ಕಡಿಮೆ ಆಗುವವರೆಗೂ ವಿಶ್ರಾಂತಿಪಡೆಯತಕ್ಕದ್ದು. ಸೂಜಿ ಚುಚ್ಚಿದ ಜಾಗದಿಂದ ಬ್ಯಾಂಡೇಜ್/ಹತ್ತಿಯನ್ನು ತೆಗೆದಾಗ ಇನ್ನೂ ರಕ್ತ ನಿಂತಿಲ್ಲವಾದರೆ ಬ್ಯಾಂಡೇಜ್/ ಹತ್ತಿಯನ್ನು ಒತ್ತಿ ಹಿಡಿದು ಸುಮಾರು ನಾಲ್ಕೈದು ನಿಮಿಷ ಕೈಗಳನ್ನು ಮೇಲಕ್ಕೆತ್ತಿ.

ಅಭಿಮತ :– ರಕ್ತದಾನದಿಂದ ಏನಾದರೂ ತೊಂದರೆಗಳಾಗುತ್ತವೆಯೇ? ಏಕೆಂದರೆ ಆ ರೀತಿಯ ಅಪನಂಬಿಕೆ ಇದೆಯಲ್ಲಾ?

ಅಡ್ಕೊಳಿ :– ಇಲ್ಲ ಖಂಡಿತಾ ಇಲ್ಲ. ಬೇಕಿದ್ದರೆ ರಕ್ತದಾನ ಮಾಡಿರುವ ಯಾರನ್ನೇ ಆಗಲಿ ಕೇಳಿ ನೋಡಿ. ಮೊದಲ ಬಾರಿಗೆ ರಕ್ತದಾನ ಮಾಡಿರುವವರಲ್ಲಿ ಕೆಲವೇ ಕೆಲವರು ಒಂದೆರಡು ನಿಮಿಷಗಳ ಕಾಲ ತಲೆಸುತ್ತಿ ಬಂದಂತೆ ಅನಿಸಿತೆಂದು ಹೇಳುವುದನ್ನು ಬಿಟ್ಟರೆ ರಕ್ತದಾನದಿಂದ ಬೇರೆ ಯಾವ ತೊಂದರೆಗಳೂ ಇಲ್ಲ. ಸಾಧಾರಣವಾಗಿ ಒಮ್ಮೆ ರಕ್ತ ನೀಡಿದವರು ಮತ್ತೆ ಮತ್ತೆ ರಕ್ತದಾನ ಮಾಡಲು ಬಯಸುತ್ತಾರೆ. 100ಕ್ಕೂ ಹೆಚ್ಚು ಬಾರಿ ರಕ್ತದಾನ ಮಾಡಿರುವ ಬಹಳಷ್ಟು ಜನರಿದ್ದಾರೆ. ರಕ್ತದಾನ ಮಾಡುವ ಮೂಲಕ ಏಡ್ಸ್ ಬರುವುದಿಲ್ಲ. ಈ ಕುರಿತು ಮುಂಜಾಗ್ರತೆ ವಹಿಸಲಾಗುವುದರಿಂದ ಅಂತಹ ಸಾಧ್ಯತೆ ಇಲ್ಲ.

ಅಭಿಮತ :– ರಕ್ತದಾನ ಏಕೆ ಮಾಡಬೇಕು? ನಿಮ್ಮ ಸಂದೇಶ?

ಅಡ್ಕೊಳಿ :– ಅತ್ಯಂತ ಅರ್ಥಪೂರ್ಣವಾಗಿ ಇನ್ನೊಬ್ಬರಿಗೆ ಸಹಾಯ ಮಾಡುವ ಒಂದು ಸುಂದರ ಪ್ರಕ್ರಿಯೆ ರಕ್ತದಾನ. ಹಾಗಾಗಿ ಇದು ನಮಗೆ ಆತ್ಮ ಗೌರವವನ್ನು ತರುತ್ತದೆ. ರಕ್ತದಾನ ಮಾಡಿದ ನಂತರ ಅನುಭವಕ್ಕೆ ಬರುವ ಹೆಮ್ಮೆಯ ಅನುಭವವನ್ನು ಹೇಳುವುದು ಸ್ವಲ್ಪ ಕಷ್ಟ. ನೀವು ರಕ್ತದಾನ ಮಾಡಿಯೇ ಅನುಭವ ಪಡೀಬೇಕು. ರಕ್ತ ಯಾರೊಬ್ಬರಿಗೂ ಯಾವ ಸಮಯದಲ್ಲೂ ಬೇಕಾಗಬಹುದು. ನಿಮಗೆ ಮತ್ತು ನಿಮ್ಮ ಪ್ರೀತಿಪಾತ್ರರಿಗೂ ಸಹ. ಹಾಗಾಗಿ ರಕ್ತದಾನದ ಮೂಲಕ ರಕ್ತ ಸುಲಭವಾಗಿ ಲಭ್ಯವಾಗಿರುವಂತೆ ಮಾಡಿಕೊಳ್ಳುವುದು ಒಂದು ಸುಖೀ ಹಾಗೂ ಆರೋಗ್ಯಶಾಲಿ ಸಮಾಜಕ್ಕೆ ನೀವು ಕೊಡಬಹುದಾದ ಒಂದು ಉತ್ತಮ ಕೊಡುಗೆ. ರಕ್ತದಾನದಿಂದ ನಿಮಗೆ ಬೇರೆ ಅನುಕೂಲಗಳು ಆಗಬಹುದು. ರಕ್ತದಾನದಿಂದ ಕೆಲವು ಹೃದಯ ಸಂಬಂಧಿತ ಕಾಯಿಲೆಗಳ ಸಾಧ್ಯತೆ ಕಡಿಮೆಯಾದೀತು. ದೇಹದಲ್ಲಿ ಅಗತ್ಯಕ್ಕಿಂತ ಹೆಚ್ಚಾಗಿ ಕಬ್ಬಿಣದ ಅಂಶ ಶೇಖರವಾಗಬಹುದಾದ ಸಾಧ್ಯತೆಗಳು ತಪ್ಪಬಹುದು. ಅಲ್ಲದೆ ಸಾಧಾರಣವಾಗಿ ರಕ್ತದಾನದ ನಂತರ ರಕ್ತ ಬ್ಯಾಂಕಿನಿಂದ ನಿಮಗೆ ರಕ್ತದ ವಿಮೆ ಸಿಗುತ್ತದೆ. ರಕ್ತದಾನಕ್ಕೆ ಪ್ರತಿಯಾಗಿ ಡೋನರ್ ಕಾರ್ಡ್ ಲಭ್ಯ. ನಿಮಗೆ ಅಥವಾ ನಿಮ್ಮವರಿಗೆ ಇದರಿಂದ ಸಹಾಯವಾಗುತ್ತದೆ.

ರಕ್ತದಾನ ಅಂದರೆ ಜೀವನ ದಾನ.

**(ಮಾಹಿತಿ ಒದಗಣೆ ಹಾಗೂ ಸಹಕಾರ : ಡಾ. ಶಿವರಾಮ ಶಾಸ್ತ್ರಿ)**

**ಸಂತೋಷ್ ಕುಮಾರ್ ಉಪಾಧ್ಯಾಯ**


**ದೆಹಲಿ ಕರ್ನಾಟಕ ಸಂಘ**

**ಮ್ಯಾಕ್ಸ್ ಹೆಲ್ತ್‌ಕೇರ್ ಹಾಗೂ**

**ಲಯನೆಸ್ ಕ್ಲಬ್ ದೆಹಲಿ ಗ್ರೇಟರ್**

ಸಂಯುಕ್ತವಾಗಿ ಆಯೋಜಿಸುವ

**ಉಚಿತ ಆರೋಗ್ಯ ತಪಾಸಣಾ ಶಿಬಿರ**

**21.01.2012ನೇ ಶನಿವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆ**

**ಸ್ಥಳ : ದೆಹಲಿ ಕರ್ನಾಟಕ ಸಂಘ**

*Investigations*
- Blood Pressure
- Random Blood Sugar
- ECG

*Consultation with:*
- Gyanecologist
- Cardiologist
- Neurologist

**ದೆಹಲಿ ಕನ್ನಡಿಗರು ಶಿಬಿರದ ಸದುಪಯೋಗಪಡಿಸಿಕೊಳ್ಳಬೇಕಾಗಿ ವಿನಂತಿ**

**ಸರೋಜಾ ಮಾಧವ**
ಅಧ್ಯಕ್ಷೆ–ಮಹಿಳಾ ಉಪಸಮಿತಿ

**ಹೇಮಲತ ಎಸ್.ಪಿ**
ಸಂಚಾಲಕಿ–ಮಹಿಳಾ ಉಪಸಮಿತಿ

**For information Call: 26109615/65643615**

# ನನಸಾದ ಕನಸು–ಅಂಟಾರ್ಟಿಕ ಐಸ್ ಮ್ಯಾರಥಾನ್–2011

ಕಣ್ಣಲ್ಲಿ ಆನಂದ ಭಾಷ್ಪ! ಉದ್ವೇಗದಿಂದ ಗಂಟಲು ಗದ್ಗದಿತ! ಬಾಯಿಂದ ಒಂದು ಮಾತೂ ಇಲ್ಲ! ಓಹ್! ದೇವರೇ ಕೊನೆಗೂ ನನ್ನಾಸೆ ಪೂರೈಸಿದೆ ಎಂಬ ಸಂತೃಪ್ತ ಭಾವ! ಶಬ್ದಗಳಲ್ಲಿ ಹೇಳಲಾಗದ ಮೂಕ ಭಾವ! ಎತ್ತೆತ್ತ ನೋಡಿದರತ್ತ ಹಿಮರಾಶಿಯ ನಡುವೆ ನಾನು ನಿಂತ ಅಂಟಾರ್ಟಿಕದಿಂದ ಮುಗಿಲೆತ್ತರಕ್ಕೆ ಏರಿದ ಅನುಭಾವ! ಡಿಸೆಂಬರ್ 1, 2011 ನನ್ನ ಜೀವಮಾನದಲ್ಲಿ ಮರೆಯಲಾಗದ ಸುದಿನ! ಅಂಟಾರ್ಟಿಕದ ಐಸ್ ಮ್ಯಾರಥಾನ್ ಸ್ಪರ್ಧೆಯಲ್ಲಿ ನಾನು ಭಾಗವಹಿಸಬೇಕೆಂಬ ನನ್ನ ಬಹುಕಾಲದ ಕನಸು ಕೊನೆಗೂ ನನಸಾಯಿತು!.

ನಾನು ಅಮೆರಿಕ, ನೇಪಾಳ, ಭಾರತ ಮೊದಲಾದೆಡೆಯಲ್ಲಿ ಮ್ಯಾರಥಾನ್ ಮಾಡಿದ್ದರೂ ಸಹ ಉತ್ತರ ಧೃವ ಹಾಗೂ ದಕ್ಷಿಣ ಧೃವದಲ್ಲಿ ಮ್ಯಾರಥಾನ್ ಮಾಡಬೇಕು ಅನ್ನೋದು ನನ್ನ ಬಹುದಿನಗಳ ಬಯಕೆ. ಆದರೆ ಇದಕ್ಕೆ ಬಹಳಷ್ಟು ಹಣ ಬೇಕಾಗಿದ್ದರಿಂದ, ಅಷ್ಟು ಆರ್ಥಿಕವಾಗಿ ಶಕ್ತಳಾಗಿಲ್ಲದ ಕಾರಣ ಇದನ್ನು ಬಹಳ ದಿನಗಳಿಂದ ಮುಂದೂಡ್ತಾನೇ ಬಂದೆ. ನನ್ನ ಈ ಕನಸು ಸಾಕಾರವಾಗಲು ಯಾವ ಪವಾಡವು ನಡೆದು ಹಣ ಆಕಾಶದಿಂದ ಉದುರೋಲ್ಲ ಅನ್ನೋ ಸತ್ಯ ನನಗೆ ಗೋಚರವಾಗಿ ಒಂದಿನ ನಾನು ಅಂಟಾರ್ಟಿಕ ಮ್ಯಾರಥಾನ್‌ಗೆ ಕಳ್ಳತನ ಮಾಡಿಯೋ, ಬೇಡಿಯೋ, ಸಾಲ ಮಾಡಿಯಾದ್ರೂ ಹೋಗಲೇಬೇಕೆಂಬ ದೃಢ ನಿರ್ಧಾರ, ಮಾಡಿಯೇ ಬಿಟ್ಟೆ. ಕಳ್ಳತನವಂತೂ ಮಾಡಲಲ್ಲಿ, ಆದರೆ ಎಂ.ಪಿ., ಮಂತ್ರಿಗಳು, ಸರ್ಕಾರ ಹಾಗೂ ಪ್ರಾಯೋಜನೆ ಮಾಡಬಲ್ಲ ಹಲವಾರು ಸಂಸ್ಥೆಗಳನ್ನು ಸಂಪರ್ಕಿಸಿದೆ–ಯಥಾ ಪ್ರಕಾರ ಎಲ್ಲೂ ಫಲ ಸಿಗಲಿಲ್ಲ. ಬಹಳಷ್ಟು ವಶೀಲಿ ಮಾಡುವವರಿಗೆ ಇದು ಸಾಧ್ಯವೇನೋ! ನನ್ನಂತಹ ಉತ್ಸಾಹಿಗಳ ಮೊರೆ ಕೇಳುವವರಾರು? ಬರೇ ಹಣ, ಪ್ರತಿಷ್ಠೆ ಇರುವವರಿಗೇ ಇಂತಹ ಸೌಲಭ್ಯಗಳು ಸಿಗುತ್ತವೆನೋ! 58ರ ಈ ನನ್ನ ಪ್ರಾಯದಲ್ಲಿ ಇಂತಹ ಸಾಧನೆಗಾಗಿ ಹೊರಟ ಕರ್ನಾಟಕ ಮೊದಲ ಮಹಿಳೆ ನಾನೇ! (ಬಹುಶಃ ಅಡಿಚಿದಥಿ ಅಂದ್ಕೊಂಡಿರಬಹುದು) ಚಿಂತೆಯಿಲ್ಲ, ಉಳಿದ ಒಂದು ಮಾರ್ಗ ಸಾಲ ಮಾಡಿಯಾದ್ರೂ ಸರಿ ಹೊರಡಲೇಬೇಕೆಂಬ ಹಠದಿಂದ ನನ್ನ ಬಳಿ ಇದ್ದ ಕೆಲವು ಬೆಲೆ ಬಾಳುವ ವಸ್ತುಗಳನ್ನು ಇಟ್ಟು ಬ್ಯಾಂಕಿನಿಂದ ಸಾಲ ಪಡೆದೆ. ನನ್ನ ಈ ಮ್ಯಾರಥಾನ್‌ಗೆ ತಗುಲಿದ ಪೂರ್ಣ ವೆಚ್ಚ ಸುಮಾರು ರೂ. 10 ಲಕ್ಷ.

1911, ಡಿಸೆಂಬರ್ 14ರಂದು ನಾರ್ವೆಯ ರೋಲ್ಡ್ ಅಮುಂಡ್ಸೆನ್ ಅಂಟಾರ್ಟಿಕವನ್ನು ಮೊದಲ ಬಾರಿ ಅನ್ವೇಷಿಸಿದ ಪ್ರಯುಕ್ತ ಶತಮಾನೋತ್ಸವದ ಈ ಸಂದರ್ಭದಲ್ಲಿ ಹಲವಾರು ದೇಶಗಳು ಕಾರ್ಯಕ್ರಮಗಳನ್ನು ಆಯೋಜಿಸಿದ್ದವು. ಇದಕ್ಕಿಂತ ಸುವರ್ಣಾವಕಾಶ ಬೇಕೇ? ವಿಶ್ವ ಪರ್ಯಟನೆ ಮಾಡಬೇಕೆಂಬ ನನ್ನಾಸೆ ಈಡೇರಲು ಇದೇ ಸರಿಯಾದ ಸಂದರ್ಭವೆಂದು ತೀರ್ಮಾನಿಸಿ ಎಲ್ಲವನ್ನೂ ಆನ್‌ಲೈನ್ ಮೂಲಕ ನೊಂದಾಯಿಸಿ ಬಿಟ್ಟೆ.

ವಿಶ್ವದೆಲ್ಲೆಡೆ ನೂರಾರು ಮ್ಯಾರಥಾನ್‌ಗಳು ನಡೆದರೂ ಅಂಟಾರ್ಟಿಕ ಐಸ್ ಮ್ಯಾರಥಾನ್ ಓಟದ ವೈಶಿಷ್ಟ್ಯವೇ ಬೇರೆ. ಮ್ಯಾರಥಾನ್ ಓಟದ ಸಂಪೂರ್ಣತೆಯಾಗಬೇಕೆಂದರೆ ಅಂಟಾರ್ಟಿಕ ಐಸ್ ಮ್ಯಾರಥಾನ್ ಮಾಡಿದ್ರೆ ಮಾತ್ರ ಸಾಧ್ಯ. ಅದರ ಅನುಭವವೇ ವಿಶಿಷ್ಟ. ಎರಡು ದಿನಗಳ ವಿಮಾನ ಪ್ರಯಾಣ. ನಂತರ ನಾಲ್ಕೂವರೆ ಗಂಟೆಗಳ ಚಾರ್ಟಡ್ ವಿಮಾನ ಪ್ರಯಾಣ, (ಅಲ್ಲಿಗೆ ಹೋಗಲು ಬೇರಾವ ವಾಣಿಜ್ಯ ವಿಮಾನಯಾನ ಸೌಕರ್ಯವಿಲ್ಲ) ಅಲ್ಲದೇ ಹವಾಮಾನ ವೈಪರೀತ್ಯ–20 ಡಿಗ್ರಿ ಸೆಂಟಿಗ್ರೇಡ್ ತಾಪಮಾನ ಹಾಗೂ ಗಂಟೆಗೆ 200ಕಿ.ಮೀ ಗಾಳಿ ವೇಗ. ಕಣ್ಣು ಹಾಯಿಸಿದಷ್ಟೂ ಬರೇ ಬಿಳಿಯ ಮಂಜಿನ ರಾಶಿ. ಇದರಿಂದಾಗಿ ಅಲ್ಲಿಗೆ ಹೋಗುವುದು ಅಷ್ಟು ಸುಲಭ ಸಾಧ್ಯವಿಲ್ಲ.

ಪ್ರಯಾಣಕ್ಕೆ ಬೇಕಾದ ಎಲ್ಲ ಸಿದ್ಧತೆ ಹಾಗೂ ಮುಂಜಾಗ್ರತೆಯನ್ನು ಕುರಿತಾದ ಮಾಹಿತಿಯ ಪ್ರಕಾರದಂತೆ ಅತ್ಯಂತ ಹುಮ್ಮಸ್ಸಿನಿಂದ ನವೆಂಬರ್ 25ರಂದು ಸಂಜೆ ದೆಹಲಿಯಿಂದ ಹೊರಟೆ. ಮೂರು ವಿವಿಧ ಏರ್‌ಲೈನ್ಸ್‌ನಲ್ಲಿ ದುಬೈ, ನಾವೋ ಪಾಲೋ (ಬ್ರೆಜಿಲ್), ಸ್ಯಾಂಟಿಯಾಗೋ (ಚಿಲಿ) ಮಾರ್ಗವಾಗಿ ಎರಡು ದಿನಗಳ ಪ್ರಯಾಣದ ನಂತರ ಪುಂಟಾ ಎರಿನಾ (Point of Sand) ನಗರವನ್ನು 27ರಂದು ತಲುಪಿದೆ. ಚಿಲಿಯ ದಕ್ಷಿಣ ತುದಿಯಲ್ಲಿರುವ ಪುಂಟಾ ಎರಿನಾ ಒಂದು ಪುಟ್ಟ, ಸುಂದರ, ಸ್ವಚ್ಛ ಬಂದರು ನಗರ. ಒಟ್ಟು 38 ಸ್ಪರ್ಧಿಗಳು ಇಲ್ಲಿ ಒಂದೆಡೆ ಸೇರಿದೆವು. ಇಲ್ಲಿ ನಮಗೆಲ್ಲಾ ಮುಂದಿನ ಸ್ಪರ್ಧೆಗೆ ಅನುಸರಿಸಬೇಕಾದ ವಿಧಾನ, ನಿಯಮ, ಸಲಹೆ, ಸೂಚನೆ, ಅಂತರ್‌ರಾಷ್ಟ್ರೀಯ ಒಪ್ಪಂದಗಳು ಮುಂತಾದ ವಿಷಯಗಳ ಸಂಪೂರ್ಣ ಮಾಹಿತಿ ನೀಡಲಾಯಿತು.

28ರ ಬೆಳಿಗ್ಗೆ ಸ್ಲೈಡ್ ಶೋ ಮೂಲಕ ನಾವು ಪಾಲಿಸಬೇಕಾದ ಕಟ್ಟುನಿಟ್ಟಾದ ನಿಯಮಗಳು ಹಾಗೂ ಮಾರ್ಗದರ್ಶನವನ್ನು ನೀಡಿದರು. ಪರಿಸರ ಸಂರಕ್ಷಣೆ, ಶುಚಿತ್ವ, ಉಡುಗೆ–ತೊಡುಗೆ, ಸುರಕ್ಷತೆ, ಗಾಳಿ ಮತ್ತು ಶೀತದಿಂದ ರಕ್ಷಣೆ, ಅಲ್ಲದೇ ಅಂಟಾರ್ಟಿಕ ಪರಿಸರ ಸಂರಕ್ಷಣೆ ಕುರಿತಾದ ಅಂತರ್‌ರಾಷ್ಟ್ರೀಯ ಒಪ್ಪಂದಗಳ ನಿಯಮಾವಳಿಗಳನ್ನು ತಿಳಿಸಿದರು. ಪರಿಸರ ಕಲುಷಿತವಾಗದಿರಲು ನಾವು ಮಣ್ಣು, ಬೀಜ ಅಥವಾ ಕ್ರಿಮಿಕೀಟಗಳನ್ನು ಸಾಗಿಸದಂತೆ ಎಚ್ಚರಿಕೆ ಮಹಿಸಲಾಗುತ್ತದೆ. ವಿಮಾನ ಹತ್ತುವ ಮೊದಲು ನಾವು ಧರಿಸಿದ ಶೂಗಳನ್ನು ಸಹ ಶುದ್ಧೀಕರಿಸಲಾಯಿತು!

29ರಂದು ಬೆಳಿಗ್ಗೆಯಿಂದಲೂ ನಾವು ತಯಾರಾಗಿದ್ದರೂ ಸಹ ಹವಾಮಾನ ವೈಪರೀತ್ಯದಿಂದಾಗಿ ರಾತ್ರಿ 10 ಗಂಟೆಯವರೆಗೂ ಕಾಯಬೇಕಾಯ್ತು. ಇಲ್ಲಿ ಹಗಲು ಮತ್ತು ರಾತ್ರಿಯ ವ್ಯತ್ಯಾಸವೇ ತಿಳಿಯುವುದಿಲ್ಲ. ಪ್ರಖರ ಸೂರ್ಯನ ಬೆಳಕಿನಲ್ಲಿ ರಾತ್ರಿ 10ಗಂಟೆಗೆ ನಾವು ಪುಂಟಾ ಎರಿನಾದಿಂದ ವಿಮಾನ ನಿಲ್ದಾಣಕ್ಕೆ ಹೊರಟೆವು ದಕ್ಷಿಣದ ತುಟ್ಟ ತುದಿಯಲ್ಲಿರುವ ಯೂನಿಯನ್ ಗ್ಲೇಸಿಯರ್ ಕ್ಯಾಂಪ್‌ಗಾಗಿ ನಾಲ್ಕೂವರೆ ಗಂಟೆಯ ಚಾರ್ಟರ್ಡ್ ವಿಮಾನ ಪ್ರಯಾಣ. ಸೋವಿಯತ್ ದೇಶ ವಿನ್ಯಾಸಗೊಳಿಸಿ ನಿರ್ಮಿಸಲಾದILYUSHIN II-76 ವಿಮಾನದಲ್ಲಿ ಎಲ್ಲರೂ ಕುಳಿತೆವು. ಮುಂಭಾಗದಲ್ಲಿ ಸುಮಾರು 40 ಮಂದಿ ಕುಳಿತುಕೊಳ್ಳಲು ಆಸನಗಳು ಹಾಗೂ ಹಿಂಭಾಗದಲ್ಲಿ ಸರಕು ಸಾಮಾಗ್ರಿಗಳನ್ನು ಇಡಲು ವ್ಯವಸ್ಥೆ ಇತ್ತು. ಸುಮಾರು ಅರ್ಧದಷ್ಟು ನಿಯಂತ್ರಣ ಫಲಕಗಳು ನಮ್ಮ ಮುಂದೆ ಇತ್ತು ಹಾಗೂ ನಿಯಮಿತ ಸಿಬ್ಬಂದಿ ವರ್ಗ ಕಾರ್ಯ ನಿರ್ವಹಿಸುತ್ತಿದ್ದರು. ಭೋರ್ಗರೆಯುವ ಯಂತ್ರದ ಅಬ್ಬರದಂತಿದ್ದ ಇಂಜಿನ್‌ನ ಶಬ್ದ ತಡೆಯಲು ಮೊದಲು ನಮಗೆ ಕಿವಿಗೆ ಹಾಕಿಕೊಳ್ಳುವ ಪ್ಲಗ್ ಕೊಡಲಾಯಿತು. ಅಂಟಾರ್ಟಿಕದ ಮಂಜಿನ ಮೇಲೆ ಕಾಲಿಡುವ ಮೊದಲು ಅಲ್ಲಿಯ ಹವಾಮಾನಕ್ಕೆ ಹೊಂದಿಕೊಳ್ಳಲು ಬೇಕಾದ ಬೆಚ್ಚಗಿನ ಡಾನ್ ಕೋಟು, ಸ್ಕೀ (Ski) ಹಾಗೂ Wind Proof ಪ್ಯಾಂಟ್‌ಗಳನ್ನು ಧರಿಸಿಕೊಂಡು ತಯಾರಾಗಿದ್ದೆವು. ಇಷ್ಟೆಲ್ಲಾ ಧರಿಸಿದ್ದರೂ ಮಂಜಿನ ಮೇಲೆ ಕಾಲಿಡುವ ಮೊದಲು ರನ್‌ವೇಯಲ್ಲಿ ಒಂದೆರಡು ಫೋಟೋಗಳನ್ನು ತೆಗೆಯಲು ಪ್ರಯತ್ನಿಸ ುವಷ್ಟರಲ್ಲಿಯೇ ನನ್ನ ಬೆರಳು ಹಾಗೂ ಮುಖ ಕೆಲವೇ ನಿಮಿಷಗಳಲ್ಲಿ ನಿಶ್ಚೇಷ್ಟಿತವಾದವು !!!



ರನ್‌ವೇಯಿಂದ 10 ಕಿ.ಮೀ ದೂರದಲ್ಲಿದ್ದ ಯೂನಿಯನ್ ಗ್ಲೇಸಿಯರ್ ಕ್ಯಾಂಪ್‌ಗೆ ವಾಹನದಲ್ಲಿ

ಕರೆದೊಯ್ಯಲಾಯಿತು. ಸುಮಾರು ಬೆಳಿಗ್ಗೆ 5ಗಂಟೆಗೆ ನಾವು ನಿದ್ರಿಸಲು ಹೋದೆವು. ಆಗ ಕೂಡ ಪ್ರಕಾಶಮಾನವಾದ ಸೂರ್ಯನ ಬೆಳಕು! ನಾವು ಅಲ್ಲಿರುವಷ್ಟೂ ದಿನ ಬೆಳಿಗ್ಗೆ ಹಾಗೂ ರಾತ್ರಿಯ ವ್ಯತ್ಯಾಸವೇ ತಿಳಿಯುವಂತಿರಲಿಲ್ಲ. ಇಬ್ಬರು ಉಳಿಯಬಹುದಾದ ಗಾಳಿ ನಿಯಂತ್ರಿತ ಟೆಂಟ್‌ನಲ್ಲಿ ಬಹಳ ಉತ್ಕೃಷ್ಟಮಟ್ಟದ ಅತ್ಯಂತ ಬೆಚ್ಚಗಿಡಬಲ್ಲ ಸ್ಲೀಪ್ ಬ್ಯಾಗ್ ಹಾಗೂ ಟೇಬಲ್‌ಗಳನ್ನು ಕೊಟ್ಟಿದ್ದರು. ಇವುಗಳನ್ನು ಬಿಸಿಮಾಡಲಿಲ್ಲವಾಗಿದ್ದರೂ –40ಡಿಗ್ರಿ ಸೆಂಟಿಗ್ರೇಡ್ ತಾಪಮಾನದಲ್ಲೂ ಬೆಚ್ಚಗಿಡಬಲ್ಲ ಸ್ಲೀಪ್ ಬ್ಯಾಗ್ ಹಾಗೂ 24 ಗಂಟೆಯೂ ಇದ್ದ, ಸೂರ್ಯನ ಬೆಳಕು ನಾವು ಬೆಚ್ಚಗಿರಲು ಸಹಾಯಕವಾಗಿದ್ದವು. ಉಳಿದಂತೆ ಭೋಜನಾಲಯ, ವೈದ್ಯಕೀಯ, ಕಮ್ಯೂನಿಕೇಶನ್ ಮತ್ತು ಮನರಂಜನಾ ಟೆಂಟ್‌ಗಳನ್ನು ಬಿಸಿಯಾದ ತಾಪಮಾನದಲ್ಲಿ ಇರಿಸಲಾಗಿತ್ತು.

ಒಂದು ಸಣ್ಣ ನಿದ್ದೆಯ ನಂತರ ಮಧ್ಯಾಹ್ನ ನಮ್ಮನ್ನು ಸ್ಪರ್ಧೆಯಲ್ಲಿ ವಹಿಸಬೇಕಾದ ಮುಂಜಾಗ್ರತೆಗಳ ಬಗ್ಗೆ ವಿವರಿಸಲು ಕ್ಯಾಂಪಿನ ವೀಕ್ಷಣೆಗಾಗಿ ಕರೆದುಕೊಂಡು ಹೋದರು. –20ಡಿಗ್ರಿ ಸೆಂಟಿಗ್ರೇಡ್ ದಿಂದ –40 ಡಿಗ್ರಿ ಸೆಂಟಿಗ್ರೇಡ್ ತಾಪಮಾನದಲ್ಲಿ Frost bite ಮತ್ತು ಹಿಮಕುರುಡು Snow blindness) ಆಗುವ ಸಾಧ್ಯತೆಯಿರುವುದರಿಂದ ಹೊರಗೆಲ್ಲೂ ಸುತ್ತಾಡಬಾರದಾಗಿ ಎಚ್ಚರಿಸಿದರು. ಓಝೋನ್‌ನ ಪದರ ನೇರವಾಗಿ ನಮ್ಮ ಮೇಲೆ ಬೀಳುವ ಸಾಧ್ಯತೆ ಅಲ್ಲದೇ ಹಿಮನದಿಯ ಮೇಲಿರುವ ಕಣ್ಣಿಗೆ ಕಾಣದ ಅಪಾಯಕಾರಿ ಬೃಹತ್ ರಂಧ್ರಗಳು ಇರುವುದರಿಂದ ಸುರಕ್ಷಿತವಾದ ಟೆಂಟ್ ಸ್ಥಳದಿಂದ ಬೇರೆಲ್ಲೂ ಹೋಗದಂತೆ ಎಚ್ಚರಿಕಾ ಕ್ರಮಗಳನ್ನು ಬಹಳ ವಿಶದವಾಗಿ ತಿಳಿಸಿದರು.



ಅಕ್ಟೋಬರ್‌ನಿಂದ ಫೆಬ್ರವರಿ ತಿಂಗಳಿನ ಇಲ್ಲಿಯ ಬೇಸಿಗೆಯಲ್ಲಿ ನಡೆಯುವ ತಾತ್ಕಾಲಿಕ ಕ್ಯಾಂಪ್‌ಗಳಿಗಾಗಿ ಎಲ್ಲ ಅಗತ್ಯ ಸೌಲಭ್ಯಗಳನ್ನು ವಿಮಾನದ ಮೂಲಕ ಸರಬರಾಜು ಮಾಡಲಾಗುತ್ತದೆ. ಅಂಟಾರ್ಟಿಕದ ಪರಿಶುದ್ಧ ನಿಸರ್ಗದ ಮೂಲರೂಪವನ್ನು ಸಂರಕ್ಷಿಸುವ ಸಲುವಾಗಿ ಮುಂಜಾಗ್ರತಾ ಕ್ರಮವನ್ನು ಬಹಳ ಕಟ್ಟುನಿಟ್ಟಾಗಿ ಪಾಲಿಸಲಾಗುತ್ತದೆ. ಇಲ್ಲಿ ಸ್ನಾನ ಮಾಡಲು ಅಥವಾ ಶೌಚಾಲಯದಲ್ಲಿ ಬಳಸಲು ಹರಿಯುವ ನೀರಿಲ್ಲ. ಪಾತ್ರೆ ತೊಳೆದ ನೀರು ಮತ್ತು ಸ್ಪಾಂಜ್ ಸ್ನಾನ ಮಾಡಿದ ನೀರನ್ನು ಮಂಜಿನ ಕೆಳಭಾಗಕ್ಕೆ ಬೋರ್ ಮೂಲಕ ಬಿಡಲಾಗುತ್ತದೆ. ಮುಖ ತೊಳೆದ ನೀರು, ಹಲ್ಲುಜ್ಜಿದ ನೀರನ್ನು ಸಹ ಪ್ರತ್ಯೇಕವಾಗಿ ಶೇಖರಿಸಿ ಅಲ್ಲದೇ ಮನುಷ್ಯರ ಮಲ, ಮೂತ್ರಗಳನ್ನೂ ಸಹ ಪ್ರತ್ಯೇಕವಾದ ಡ್ರಮ್‌ನಲ್ಲಿ ಶೇಖರಿಸಿ ಅದನ್ನು ಚಿಲಿಗೆ ವಿಮಾನದಲ್ಲಿ ರವಾನಿಸಲಾಗುತ್ತದೆ !!. ಅಂಟಾರ್ಟಿಕದ ಅಂತರರಾಷ್ಟ್ರೀಯ ಒಪ್ಪಂದದ ಪ್ರಕಾರ ಪ್ರಕೃತಿಯನ್ನು ಕಲುಷಿತಗೊಳಿಸದಿರುವ ಹೊಣೆಗಾರಿಕೆಯನ್ನು ಅತ್ಯಂತ ಸಮರ್ಥವಾಗಿ ನಿರ್ವಹಿಸಲಾಗುತ್ತದೆ.

100 ವರ್ಷಗಳ ಹಿಂದೆ ಸ್ಕಾಟ್ ಮತ್ತು ಅಮುಂಡ್ಸೆನ್ ಎದುರಿಸಿದ ಅಂಟಾರ್ಟಿಕಕ್ಕೆ ಹೋಲಿಸಿದರೆ ಈಗ ಯೂನಿಯನ್ ಗ್ಲೇಸಿಯರ್ ಒಂದು ಪಂಚ ತಾರಾ ಹೋಟೆಲ್‌ನಂತಿದೆ. ಸಮೃದ್ಧವಾಗಿ ತಿನ್ನಲು, ಕುಡಿಯಲು ಬೇಕಾದ ಸಮಯಕ್ಕೆ, ಬೇಕಾದ್ದನ್ನು ತಿನ್ನಲು, ಕುಡಿಯಲು ಅನುಕೂಲವಿತ್ತು. ಅಲ್ಲಿ ಭಾಗವಹಿಸಲು ಬಂದಿದ್ದ ಎಲ್ಲಾ ಉತ್ಸಾಹಿ ಸ್ಪರ್ಧಿಗಳು ಒಂದೆಡೆ ಕಲೆತು ತಂತಮ್ಮ ಅನುಭವಗಳನ್ನು ಎಲ್ಲರೊಡನೆ ಹಂಚಿಕೊಳ್ತಾ ಇದ್ದರು. 7ಬಾರಿ ಮ್ಯಾರಥಾನ್ ಗ್ರ್ಯಾಂಡ್ ಸ್ಲಾಮ್ ಮಾಡಿದ 63 ವರ್ಷದ ಅಮೆರಿಕೆಯ ಬ್ರೆಂಟ್, 100 ಮ್ಯಾರಥಾನ್ ಪೂರ್ಣಗೊಳಿಸಿದ ಹೃದಯ ತಜ್ಞ ವೈದ್ಯ 61 ವರ್ಷದ ಡಾ. ಜಾರ್ಜ್ ಇವರೊಡನೆ ಕಳೆದ ಕಾಲ ನನ್ನ ಬದುಕಿನಲ್ಲಿ ಎಂದೆಂದೂ ಅವಿಸ್ಮರಣೀಯ. ಇವರುಗಳಲ್ಲದೇ ಎಲ್ಲ ಖಂಡಗಳಲ್ಲೂ ಮ್ಯಾರಥಾನ್ ಮಾಡಬೇಕೆಂಬ ಹಂಬಲವುಳ್ಳ ನನ್ನಂತಹವರು, ಮತ್ತಿತರರು ಈ ಅಂಟಾರ್ಟಿಕದಲ್ಲಿ ದೇಶಾತೀತ, ಭಾಷಾತೀತ, ಪ್ರಾಂತ್ಯಾತೀತ, ಹೆಣ್ಣು–ಗಂಡುಗಳೆಂಬ ಬೇಧವಿಲ್ಲದ ಕೇವಲ ಉತ್ಸಾಹಿ ಮಾನವ ಸ್ಪರ್ಧಿಗಳು ಮಾತ್ರ!!

ನವೆಂಬರ್ 30ರಂದು ನಾವೆಲ್ಲಾ ಒಂದು ಅಭ್ಯಾಸ ಓಟವನ್ನು ಮಾಡಿದೆವು. ಡಿಸೆಂಬರ್ 1, ನನ್ನ ಗುರಿ ತಲುಪುವ ಸುದಿನ! ಏನೋ ಒಂದು ರೀತಿಯ ಹೇಳಲಾಗದ ಕಾತುರ, ತಳಮಳ, ಉದ್ವೇಗದ ಅನುಭವವಾಗ್ತಿತ್ತು. ಯೂನಿಯನ್ ಗ್ಲೇಸಿಯರ್ ಕ್ಯಾಂಪ್ ಪರ್ವತಗಳಿಂದ ಸುತ್ತುವರಿದಿದ್ದು ಗಾಳಿಯ ವೇಗವನ್ನು ತಡೆಗಟ್ಟುತ್ತಿತ್ತು. ಆದರೆ, ಕ್ಯಾಂಪ್‌ನಿಂದ ಹೊರಗೆ ಊಹಿಸಲಾಗದ ಹವಾಮಾನವನ್ನು ಎದುರಿಸಬೇಕಾಗಿತ್ತು. ಹೊರಗೆ ಗಾಳಿಯ ತಾಪಮಾನ –12ಡಿಗ್ರಿ ಸೆಂಟಿಗ್ರೇಡ್ ದಿಂದ –25ಡಿಗ್ರಿ ಸೆಂಟಿಗ್ರೇಡ್ ವರೆಗೆ ಇರುವುದಾಗಿ ತಜ್ಞರು ತಿಳಿಸಿದ್ದರಿಂದ ಯಾವ ರೀತಿಯ ಬೆಚ್ಚಗಿನ ಉಡುಪನ್ನು ಧರಿಸಬೇಕೆಂದು ನಮ್ಮೊಳಗೆ ಚರ್ಚೆ ನಡೆಯುತ್ತಿತ್ತು. ಪ್ರತಿಯೊಬ್ಬರೂ ಹೆಚ್ಚು ಕಮ್ಮಿ 3ಪದರುಗಳಲ್ಲಿ ವಿಶೇಷವಾದ ಉಷ್ಣ ಹಾಗೂ ಉಣ್ಣೆಯ ಉಡುಪು, 2 ಕೈಚೀಲ ಹಾಗೂ ಸಾಕ್ಸ್, ಮುಖಕ್ಕೆ 50 SPF ಕ್ರೀಮ ಹಚ್ಚಿ, ಮುಖದ ಮಾಸ್ಕ್, ಸನ್ ಗ್ಲಾಸ್ ಧರಿಸಿ ಶಿಸ್ತಿನ ಸಿಪಾಯಿಗಳಂತೆ ದಿಗ್ವಿಜಯ ಸಾಧಿಸಲು ಹೊರಟೇ ಬಿಟ್ಟೆವು! ಹೇಳಲಾಗದ ಉದ್ವೇಗದಿಂದ ನಾನು ಎರಡೆರಡು ಬಾರಿ ಶೌಚಾಲಯಕ್ಕೆ ಓಡಿದೆ ! ಅಂತೂ ಇಂತೂ ದೈಹಿಕ ಹಾಗೂ ಮಾನಸಿಕವಾಗಿ ಸಿದ್ಧತೆಗೊಂಡು ಬೆಳಗಿನ ಉಪಾಹಾರದ ನಂತರ ಓಡಬೇಕಾದ ಸ್ಥಳ ತಲುಪಲು ಮೋಟಾರ್ ಸ್ಲೆಡ್ಜ್ ಏರಿದೆವು!

## ಮ್ಯಾರಥಾನ್ ಓಟ ಆರಂಭ:

ಬೆಳಿಗ್ಗೆ 11ಗಂಟೆಗೆ ಪ್ರಕಾಶಮಾನವಾದ ಸೂರ್ಯನ ಬೆಳಕಿನಲ್ಲಿ ಏಳನೆಯ ಅಂಟಾರ್ಟಿಕ ಐಸ್ ಮ್ಯಾರಥಾನ್‌ನ ಗುರಿ ಸಾಧಿಸುವ ಸಲುವಾಗಿ 17ದೇಶದ ಒಟ್ಟು 32 ಓಟಗಾರರು ಕಾತುರದಿಂದ ಓಟ ಪ್ರಾರಂಭಿಸಿಯೇ ಬಿಟ್ಟೆವು! ಪ್ರತಿ 50 ಮೀಟರ್ ಅಂತರದಲ್ಲಿ ಕಿತ್ತಳೆ ಬಣ್ಣದ ಧ್ವಜಗಳನ್ನು ಓಟದ ಗುರುತಿಗಾಗಿ ಹಾಕಲಾಗಿತ್ತು. ಈ ಮಾರ್ಗದಲ್ಲಿ ಒಂದು ವಾರದ ಮೊದಲಿನಿಂದಲೇ ವಾಹನಗಳ ಓಡಾಟವನ್ನು ನಿಷೇಧಿಸಿ ರಸ್ತೆಯನ್ನು ಓಡಲು ಸಾಧ್ಯವಾಗುವಂತೆ ಸಮತಟ್ಟಾಗಿ ತಯಾರು ಮಾಡಲಾಗಿತ್ತು. ಐಸ್ ಮೇಲಿನ ಓಟದ ಅನುಭವ ಅನುಭವಿಸಿದವರಿಗೇ ಗೊತ್ತು, ಅದನ್ನು ಶಬ್ದಗಳಲ್ಲಿ ತೆರೆದಿಡುವುದು ನಿಜಕ್ಕೂ ಅಸಾಧ್ಯ! ಯಾಕೆಂದರೆ ಸಂಪೂರ್ಣ ಹೆಪ್ಪುಗಟ್ಟಿದ ಮಂಜು ಗಾಜಿನಂತಿತ್ತು. ಪ್ರತಿ ಹೆಜ್ಜೆಯಲ್ಲೂ ಗಾಜು ಒಡೆದು ಕಾಲುಗಳು ಮೃದುವಾದ ಹಿಮದ ಒಳಗೆ ಹೂತು ಹೋಗಿ ಮುಂದಿನ ಹೆಜ್ಜೆ ಎತ್ತಿಡುವುದು ಭಾರವಾಗಿ ಕಷ್ಟವಾಗುತ್ತಿತ್ತು. ಸಮಯ ಏರುತ್ತಿದ್ದಂತೆ ಸೂರ್ಯನ ಕಿರಣಗಳಿಂದ ಹಿಮ ಕರಗಿ ಕೊಚ್ಚೆಯಂತಾಗುತ್ತಿತ್ತು.! ಇದರ ಪರಿಣಾಮವಾಗಿ ಮೊದಲ ಸುತ್ತಿಗಿಂತಲೂ ಎರಡನೆಯ ಸುತ್ತು ಮತ್ತೂ ಕಠಿಣವಾಗುತ್ತಿತ್ತು. ಪ್ರತಿ ಹೆಜ್ಜೆಗೂ ಹೆಚ್ಚು ಶಕ್ತಿವಹಿಸಿ ಮುಂದಡಿ ಇಡಬೇಕಾಗುತ್ತಿತ್ತು.

ಸುತ್ತಲೂ ಹಿಮಾವೃತವಾದ ನಿರ್ಜನವಾದ 6ಮೈಲಿ ನೇರ ದಾರಿಯನ್ನು ಒಬ್ಬಂಟಿಯಾಗಿ ಓಡುವುದು ನಿಜಕ್ಕೂ ಒಂದು ರೀತಿಯ ದೈಹಿಕ ಹಾಗೂ ಮಾನಸಿಕವಾದ ಯುದ್ಧವೇ ಸರಿ! ಯಾಕೆಂದರೆ ಬೇರೆ ಮ್ಯಾರಥಾನ್‌ಗಳ ರಸ್ತೆಯ ಇಕ್ಕೆಲಗಳಲ್ಲೂ ನೂರಾರು ಜನರು ನಿಂತು ನಮ್ಮನ್ನು ಚಪ್ಪಾಳೆ ತಟ್ಟಿ, ಕೂಗುತ್ತಾ ಪ್ರೋತ್ಸಾಹಿಸುವಾಗ ಒಂದು ರೀತಿಯ ಶಕ್ತಿ ನೀಡುತ್ತದೆ. ಆದರೆ, ಇಲ್ಲಿ ಶೂನ್ಯತೆ, ಒಂಟಿತನ ನಮ್ಮನ್ನು ಆವರಿಸುತ್ತದೆ. ಪ್ರತಿ 10 ಕಿ.ಮೀ ಅಂತರದಲ್ಲಿ ಚಿಕಿತ್ಸಾ ಶಿಬಿರಗಳು ಹಾಗೂ ತಂಗುದಾಣವಿರುತ್ತವೆ. ಅಲ್ಲಿ ಬಿಸಿ ಮತ್ತು ತಂಪು ಪಾನೀಯ, ಬಿಸ್ಕತ್ ಮತ್ತು ಚಾಕೋಲೇಟ್ ವ್ಯವಸ್ಥೆ ಮಾಡಲಾಗಿತ್ತು. ಸಣ್ಣ ವಿರಾಮ ಪಡೆದು ಏನಾದ್ರೂ ತಿಂದು, ಕುಡಿದು ಅಲ್ಲಿರುವ ಜನರೊಂದಿಗೆ ಮಾತನಾಡಿ ಮತ್ತೆ ಶಕ್ತಿಯನ್ನು ಕ್ರೋಢಿಕರಿಸಿಕೊಂಡು ಮುಂದೆ ಓಡುತ್ತಿದ್ದೆವು. ಅಲ್ಲಿರುವ ಸಿಬ್ಬಂದಿಗಳು ನಮ್ಮನ್ನು ಪ್ರೋತ್ಸಾಹದಿಂದ ಹುರಿದುಂಬಿಸಿ ಬೀಳ್ಕೊಡುತ್ತಿದ್ದರು. ಇಂತಹ ನಿರ್ಜನವಾದ ರಸ್ತೆಯಲ್ಲಿ ಸಮಯದ ಪರಿವೇ ಇಲ್ಲದೇ ಸತತ 7ಗಂಟೆಗಳನ್ನು ನಾನು ಕಳೆದದ್ದರ ಅರಿವೇ ಆಗಲಿಲ್ಲ. ಕೆಲವೊಮ್ಮೆ ನನ್ನ ಕೈ ಕಾಲುಗಳು ನಿಶ್ಚೇಷ್ಟಿತವಾಗುತ್ತಿತ್ತು, ಮತ್ತು ನನ್ನ ಕಿವಿಗಳು ನಿಸ್ಪರ್ಶವಾಗುತ್ತಿತ್ತು. ಸುರಿಯುತ್ತಿದ್ದ ನನ್ನ ಮೂಗನ್ನು ಒರೆಸಿಕೊಳ್ಳಲು ಅಥವಾ ಸರಿಯಾಗಿ

ಉಸಿರಾಡುವ ಸಲುವಾಗಿ ನನ್ನ ಮುಖದ ಮಾಸ್ಕ್ ಅನ್ನು ತೆಗೆದ ಕೂಡಲೇ ಕೊರೆಯುವ ಗಾಳಿಯಿಂದ ನನ್ನ ಮೂಗು ಮತ್ತು ಮುಖ ಹೆಪ್ಪುಗಟ್ಟುತ್ತಿದ್ದವು. ಹಿಮದ ಮೇಲಿನ ಓಟದಿಂದ ನನ್ನ ಮೂಳೆ ಮತ್ತು ಕೀಲುಗಳಿಗೆ ಹೆಚ್ಚು ಒತ್ತಡವಾಗುತ್ತಿರಲಿಲ್ಲ. ಆದರೆ ನನ್ನ ನಡು ಮತ್ತು ಮಂಡಿಸ್ನಾಯುಗಳಿಗೆ ಬಹಳ ಒತ್ತಡವೆನಿಸುತ್ತಿತ್ತು. ಅಂತಿಮ ಘಟ್ಟ ಕಾಣುವವರೆಗೆ ಏಕಾಂಗಿ ಹೋರಾಟ!

ಅಂತೂ ಇಂತೂ ಮುಕ್ತಾಯದ ಗೆರೆಯನ್ನು ನಾನು ದಾಟಿಯೇ ಬಿಟ್ಟೆ! ಕಾಣದ ದೇವರಿಗೆ ವಂದನೆ ಸಲ್ಲಿಸುವಂತೆ ಎರಡೂ ಕೈಗಳನ್ನು ಮೇಲೆತ್ತಿ (ಅಥವಾ ಕೊನೆಗೂ ಮುಗಿಯಿತಲ್ಲಾ ಎಂಬ ಸಮಾಧಾನದಿಂದಲೋ) ಉಬ್ಬಿದ ಗಂಟಲು, ಕಣ್ಣೀರು, ಹೃದಯದಲ್ಲಿ ಸಾಧಿಸಿದ ಸಂತೃಪ್ತಿಯ ಭಾವ ತುಂಬಿ ಬಂದಿತ್ತು. ಅಪ್ಪಿಕೊಂಡು ಅಭಿನಂದಿಸಿ ಕೈ ಕುಲುಕಿದವರಿಗೆ ಥ್ಯಾಂಕ್ಸ್ ಕೂಡಾ ಹೇಳಲಾಗದಂತೆ ಮೂಕಳಾದೆ!! ನೂರಾರು ಭಾವಗಳಿಗೆ ಮೌನ ಸಾಕ್ಷಿಯಾಯಿತು!! 11 ಮಹಿಳೆಯರಲ್ಲಿ ಹಿರಿಯಳಾದ ನಾನು ಒಟ್ಟು 42ಕಿ.ಮೀ ದೂರವನ್ನು 7ಗಂಟೆ 11 ನಿಮಿಷಗಳಲ್ಲಿ ಮುಟ್ಟಿ 6ನೆಯ ಸ್ಥಾನವನ್ನು ಪಡೆದದ್ದು ನನಗಂತೂ ಒಲಂಪಿಕ್ ಪದಕವನ್ನು ಪಡೆದಷ್ಟೇ ಸಂತೋಷವಾಯ್ತು! ಅಂದರೆ ಖಂಡಿತಾ ಉತ್ಪ್ರೇಕ್ಷೆಯಲ್ಲ. ಹೆಮ್ಮೆಯಿಂದ 'ಝುಂಡಾ ಊಂಚೇ ರಹೇ ಹಮಾರಾ' ಎನ್ನುತ್ತಾ ನಮ್ಮ ರಾಷ್ಟ್ರೀಯ ಧ್ವಜದೊಂದಿಗೆ ಫೋಟೋ ತೆಗೆಸಿಕೊಂಡು ಒದ್ದೆಯಾದ ನನ್ನ ಬಟ್ಟೆಗಳನ್ನು ಬದಲಾಯಿಸಲು ಟೆಂಟ್‌ಗೆ ಹೋದೆ. ಕರ್ನಾಟಕದಿಂದ ಈ ಸಾಧನೆ ಮಾಡಿದ ಪ್ರಪ್ರಥಮ ಮಹಿಳೆ ಎಂಬ ಹೆಗ್ಗಳಿಕೆ ನನ್ನದು. ರಾತ್ರಿಯೆಲ್ಲಾ ಅತಿಯಾದ ಸಂತೋಷದಿಂದ ನಿದ್ದೆಯೇ ಬರಲಿಲ್ಲ. ಕಣ್ಮುಚ್ಚಿದರೂ ಹಿಮರಾಶಿ! ಕಣ್ಣು ತೆರೆದರೂ ಹಿಮರಾಶಿ!

ಡಿಸೆಂಬರ್ 2ರಂದು ನಾವೆಲ್ಲಾ ಮ್ಯಾರಥಾನ್ ಓಟದ ಸ್ಪರ್ಧಿಗಳು ಆರಾಮವಾಗಿ ವಿಶ್ರಾಂತಿ ಪಡೆದೆವು. ಆ ದಿನ ಅಲ್ಟ್ರಾ ಮ್ಯಾರಥಾನ್ ಓಟ, 100ಕಿ.ಮೀ. ಹಾಗೂ 100ಮೈಲಿ ಓಟದ ಸ್ಪರ್ಧೆಗಳಿದ್ದವು. ಅಂದು ಮೋಡ ಕವಿದ ವಾತಾವರಣವಿದ್ದು ಹೆಚ್ಚಿದ ರಭಸವಾದ ಗಾಳಿಯಿಂದ ತಾಪಮಾನ ಮತ್ತಷ್ಟು ಕುಸಿದಿತ್ತು, ಆದರೆ ಸ್ಪರ್ಧಿಗಳ ಹುರುಪು, ಹುಮ್ಮಸ್ಸು ಕುಸಿದಿರಲಿಲ್ಲ. 2002ರಲ್ಲಿ ದಕ್ಷಿಣ ಧ್ರುವದ ಮ್ಯಾರಥಾನ್ ವಿಜಯಿಯಾದ ಮೊದಲ ವ್ಯಕ್ತಿ ರಿಚರ್ಡ್ ಡೊನೊವನ್ ಅಂಟಾರ್ಟಿಕ ಮ್ಯಾರಥಾನ್‌ನ ಶತಮಾನೋತ್ಸವದ ಈ ಸಂದರ್ಭದಲ್ಲಿ 100 ಮೈಲಿ ಸ್ಪರ್ಧೆಯನ್ನು ಏಕಾಂಗಿಯಾಗಿ 24 ಗಂಟೆ 35 ನಿಮಷಗಳ ಅವಧಿಯಲ್ಲಿ ಪೂರೈಸಿದರು. ಈ ಎಲ್ಲಾ ಸ್ಪರ್ಧೆಗಳನ್ನು ನಾವು ಪ್ರೋತ್ಸಾಹದಿಂದ ಹುರಿದುಂಬಿಸುತ್ತಾ ಅತ್ಯಂತ ಸಂತೋಷದಿಂದ ಕಾಲ ಕಳೆದೆವು ಭಾರತದ ಪರಿಚಿತ ಸಾಹಸಿ ಕರ್ನಲ್ ಬಜಾಜ್ ಅವರು ದಕ್ಷಿಣ ಧ್ರುವವನ್ನು ಮುಟ್ಟಿದ ಮೊದಲ ಭಾರತೀಯರು. ಅವರ ಹೆಸರಿನಲ್ಲಿ ಒಂದು ಟೆಂಟ್ ಕೂಡಾ ಇದೆ. ಡಿಸೆಂಬರ್ 3ರ ರಾತ್ರಿ 9.30ಕ್ಕೆ ಪ್ರಕಾಶಮಾನವಾದ ಸೂರ್ಯನ ಬೆಳಕಿನಲ್ಲಿ ನನ್ನ ಜೀವಿತದಲ್ಲಿ ಮತ್ತೊಮ್ಮೆ ಕಾಣಲಾರದ ರುದ್ರ ರಮಣೀಯ ಅಂಟಾರ್ಟಿಕ




ಝುಂಡಾ ಊಂಚೇ ರಹೇ ಹಮಾರ

ನಿಸರ್ಗ ಸೌಂದರ್ಯವನ್ನು ಕೊನೆಯ ಕ್ಷಣದವರೆಗೂ ಆಸ್ವಾದಿಸುತ್ತಾ ಕಣ್ತುಂಬಾ, ಮನದ ತುಂಬಾ ತುಂಬಿಕೊಂಡು ನಾವು ಬಂದಿದ್ದ ಚಾರ್ಟರ್ಡ್ ವಿಮಾನವನ್ನು ಕೊನೆಯವಳಾಗಿ ಏರಿದೆ! ಡಿಸೆಂಬರ್ 4ರಂದು ಬೆಳಗಿನ ಜಾವ ಪುಂಟಾ ಎರಿನಾ ನಗರವನ್ನು ಮುಟ್ಟಿದೆವು. ಅಂದು ನಾವೆಲ್ಲಾ ಆ ಪುಟ್ಟ ನಗರವನ್ನು ವೀಕ್ಷಿಸಿ ಚಿಕ್ಕ ಪುಟ್ಟ ವಸ್ತುಗಳನ್ನು ಖರೀದಿಸಿದೆವು. ಗುರಿ ಸಾಧಿಸಿದ ಸಾರ್ಥಕ ಭಾವದೊಡನೆ 5ರಂದು ಬೆಳಿಗ್ಗೆ 11.30ಕ್ಕೆ ವಿಮಾನವೇರಿ ಅದೇ ಮಾರ್ಗವಾಗಿ ಡಿಸೆಂಬರ್ 7ರಂದು ದೆಹಲಿ ಮುಟ್ಟಿದೆವು.

ಮನುಷ್ಯ ಮನಸ್ಸು ಮಾಡಿದರೆ ಏನನ್ನಾದರೂ ಸಾಧಿಸಬಹುದು ಎಂಬುದಕ್ಕೆ ನಾನೇ ಸಾಕ್ಷಿ. ಕೇವಲ ಓದು, ಕೆಲಸಗಳ ಯಾಂತ್ರಿಕ ಬದುಕಿನ ನಡುವೆ ಇಂತಹ ಸಾಹಸ, ಹವ್ಯಾಸಗಳು ಬದುಕಿನ ಸಾರ್ಥಕವನ್ನು ಹೆಚ್ಚಿಸುವುದರ ಜೊತೆಗೆ ಆತ್ಮ ತೃಪ್ತಿಯನ್ನು ನೀಡುತ್ತದೆ.

**ಮಾಲಾ ಹೊನ್ನತ್ತಿ**

**ಭಾವಾನುವಾದ–ಉಷಾ ಭರತಾದ್ರಿ**

# ದೆಹಲಿ ಒಕ್ಕಲಿಗ ಗೌಡ ಸಂಘದಿಂದ ಪಿಕ್‌ನಿಕ್




ದೆಹಲಿ ಒಕ್ಕಲಿಗ ಗೌಡ ಸಂಘವು ಪ್ರತಿ ವರ್ಷದಂತೆ ಈ ಬಾರಿಯು ಡಿಸೆಂಬರ್ 4ರಂದು ನೆಹರು ಪಾರ್ಕ್‌ನಲ್ಲಿ ಪಿಕ್‌ನಿಕ್ ಏರ್ಪಡಿಸಿತ್ತು. ಡಾ. ಬಿ.ಟಿ. ಚಿದಾನಂದ ಮೂರ್ತಿಯವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ಪ್ರಾರಂಭವಾಯಿತು. ಈ ಬಾರಿಯ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪಡೆದ ಡಾ. ಪುರುಷೋತ್ತಮ ಬಿಳಿಮಲೆಯವರಿಗೆ ಮತ್ತು ನಿವೃತ್ತಿ ಹೊಂದಿದ ಡಾ ಬಿ.ಟಿ. ಚಿದಾನಂದ ಮೂರ್ತಿ, ಎಂ.ಎನ್ ಗೌಡರಿಗೆ ಸನ್ಮಾನಿಸಲಾಯಿತು. ಹೊಸ ವರ್ಷದಲ್ಲಿ ಮಾಡಬೇಕಾದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಲಾಯಿತು. ನಾಡ ಗೌಡ ಕೆಂಪೇಗೌಡರ ಉತ್ಸವವನ್ನು ರಾಷ್ಟ್ರದ ರಾಜಧಾನಿಯಲ್ಲಿ ಅದ್ದೂರಿಯಾಗಿ ಆಚರಿಸಲು ತೀರ್ಮಾನಿಸಲಾಯಿತು.

ಮಕ್ಕಳಿಗೆ, ಮಹಿಳೆಯರಿಗೆ ಹಾಗು ಪುರುಷರಿಗೆ ಆಟೋಟಗಳನ್ನು ಏರ್ಪಡಿಸಲಾಗಿತ್ತು, ಭೋಜನದ ನಂತರ ಆಟೋಟದಲ್ಲಿ ಗೆದ್ದ ಮಕ್ಕಳು,ಮಹಿಳೆಯರು, ಪುರುಷರು ಗಳಿಗೆ ಬಹುಮಾನ ವಿತರಿಸಲಾಯ್ತು.ಕೊನೆಯದಾಗಿ ತಂಬೋಲ ಆಡಿ, ಬಂದಿದ್ದ ಎಲ್ಲರಿಗೂ ವಂದನೆ ತಿಳಿಸಿ ಪಿಕ್‌ನಿಕ್‌ಗೆ ವಿದಾಯ ಹೇಳಲಾಯಿತು. ಮನೆಮಂದಿಯೆಲ್ಲಾ ಒಟ್ಟಾಗಿ ಕಲೆತು ಎಲ್ಲರೊಡನೆ ಬೆರೆತು ಸಂತೋಷದಿಂದ ಕಾಲ ಕಳೆಯುವುದು ನಿಜಕ್ಕೂ ಸಂತಸದ ಸಂಗತಿ ಎಂಬುದು ಭಾಗವಹಿಸಿದ ಎಲ್ಲ ಸದಸ್ಯರ ಅಭಿಪ್ರಾಯ.

■ **ಎಸ್. ಸಿ. ಹೇಮಲತ**

ಅಭಿನಂದನೆ

# ಕೊಂಕಣಿ ಸಮುದಾಯದ ಹಿರಿಮೆಗೆ ಗರಿ ಮೂಡಿಸಿದ ಗೋಪಾಲಕೃಷ್ಣ ಪೈ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ



ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಬಳ್ಳಂಬೆಟ್ಟು ಗೋಪಾಲಕೃಷ್ಣ ಪೈ ಆಯ್ಕೆಯಾಗಿದ್ದು ನಮ್ಮೆಲ್ಲ ಕನ್ನಡಿಗರ ಹೆಮ್ಮೆ ಮತ್ತು ನಾಡಿಗೆ ಸಂದ ಗೌರವವೆಂದರೂ ತಪ್ಪಿಲ್ಲ. ಗೋಪಾಲಕೃಷ್ಣ ಪೈ ಅವರ ಐತಿಹಾಸಿಕ ಕಾದಂಬರಿ 'ಸ್ವಪ್ನ ಸಾರಸ್ವತ' ಕೃತಿಗೆ ಈ ಪುರಸ್ಕಾರ ಲಭಿಸಿದೆ.

ಕಾಸರಗೋಡು ತಾಲೂಕಿನ ಪೆರ್ಲ ಬಳಿಯ ಬಳ್ಳಂಬೆಟ್ಟು ಕುಟುಂಬದಲ್ಲಿ 1947 ರಲ್ಲಿ ಸುಬ್ರಾಯ ಪೈ-ಸುಭದ್ರ ಪೈ ದಂಪತಿ ಪುತ್ರರಾಗಿ ಜನಿಸಿದ ಗೋಪಾಲಕೃಷ್ಣ ಪೈ ಹೈಸ್ಕೂಲು ವಿದ್ಯಾಭ್ಯಾಸ ಮುಗಿಸಿ, ಪುತ್ತೂರು ಮತ್ತು ಮುಲ್ಕಿಯಲ್ಲಿ ವಿಜ್ಞಾನದಲ್ಲಿ ಪದವೀಧರರಾಗಿ ಕೆನರಾ ಬ್ಯಾಂಕ್ ಉದ್ಯೋಗದ ನಿಮಿತ್ತ ಬೆಂಗಳೂರು, ಮುಂಬೈ, ದೆಹಲಿ, ಹುಬ್ಬಳ್ಳಿ ಮುಂತಾದ ಸ್ಥಳಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಸೀನಿಯರ್ ಮ್ಯಾನೇಜರ್ ಹುದ್ದೆಯಿಂದ ನಿವೃತ್ತರಾಗಿ ಈಗ ಬೆಂಗಳೂರಿನಲ್ಲಿ ವಾಸಿಸುತ್ತಿರುವ ಗೋಪಾಲಕೃಷ್ಣ ಪೈ ಅವರಿಗೆ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಪತ್ನಿ ಶ್ಯಾಮಲಾ ತೀರಿ 9ವರ್ಷಗಳು ಗತಿಸಿವೆ.

ಸಾಹಿತ್ಯ ಕೃಷಿಯನ್ನು ಮಾಡುತ್ತಾ ಬಂದಿರುವ ಬಿ.ಜಿ.ಪೈ ಎಂದೇ ಖ್ಯಾತರಾಗಿರುವ ಗೋಪಾಲಕೃಷ್ಣ ಪೈ ಅವರು 'ವಿಚ್ಛಿನ್ನರು' ಕಿರು ಕಾದಂಬರಿ, 'ಈ ಬೆರಳ ಗುರುತು', 'ಹಾರುವ ಹಕ್ಕಿಯ ಗೂಡಿನ ದಾರಿ', 'ಮೂರು ಮತ್ತಿಪ್ಪು' ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. 'ತಿರುವು' ಕೃತಿಯನ್ನು ರಚಿಸಿದ್ದಾರೆ. ಚೀನೀ ಆಧುನಿಕ ಸಣ್ಣ ಕಥೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

'ಗುಡುಗುಡು ಗುಮ್ಮಟ್ಟ' ಎಂಬ ನಾಟಕವನ್ನು ರಚಿಸಿರುವ ಅವರು ಗಿರೀಶ್ ಕಾಸರವಳ್ಳಿ ನಿರ್ದೇಶನದ 'ಕನಸೆಂಬೊ ಕುದುರೆಯನೇರಿ' ಚಿತ್ರದ ಚಿತ್ರಕಥೆಗೆ ರಾಷ್ಟ್ರೀಯ ಪ್ರಶಸ್ತಿ ಪಡೆದಿದ್ದಾರೆ. ಕಾಸರಗೋಡು ಚಿನ್ನಾ ನಿರ್ದೇಶನದ 'ಉಜ್ವಾಡು' ಕೊಂಕಣಿ ಚಿತ್ರದ ಚಿತ್ರಕಥೆಯೂ ಅವರದ್ದು. 'ಚೀನೀ ಕಥೆಗಳು' ಅವರಿಗೆ ಹೆಸರು ತಂದುಕೊಟ್ಟ ಅನುವಾದ ಕೃತಿ. ರಾಷ್ಟ್ರಪ್ರಶಸ್ತಿ ಪಡೆದ ಪಿ.ಶೇಷಾದ್ರಿಯವರ - 'ಬೆಟ್ಟದ ಜೀವ' ಚಿತ್ರಕ್ಕೂ ಪೈ ಸಂಭಾಷಣೆ ಬರೆದಿದ್ದಾರೆ.

470 ಪುಟಗಳ ಸ್ವಪ್ನ ಸಾರಸ್ವತ ಕಾದಂಬರಿ ಒಂದು ಸಾರಸ್ವತ ಮಹಾಭಾರತ ಎಂದು ಬಣ್ಣಿಸಲ್ಪಟ್ಟಿದೆ. ಇಪ್ಪತ್ತು ವರ್ಷಗಳ ನಿರಂತರ ಸಂಶೋಧನೆ ಮತ್ತು ಐದು ವರ್ಷದಲ್ಲಿ ರಚಿಸಿದ, ಆರು ಬಾರಿ ತಿದ್ದಿ ಬರೆದ ಗೋಪಾಲ ಕೃಷ್ಣ ಪೈ ಅವರ ಸ್ವಪ್ನ ಸಾರಸ್ವತ ಇತಿಹಾಸವನ್ನು ಕಥಾರೂಪಕ್ಕಿಳಿಸಿದ ಮಹಾಕೃತಿ. 9ತಲೆಮಾರುಗಳು, 2ಶತಮಾನಗಳು, 150ಕ್ಕಿಂತಲೂ ಹೆಚ್ಚು ಪಾತ್ರಗಳು, ನೂರಾರು ಮೈಲಿ ವಿಸ್ತೀರ್ಣದ ಸ್ಥಳಗಳು, ಸಂಸ್ಕೃತಿ, ಕರ್ಮ, ಪ್ರೇಮ, ಕಾಮ, ಮತಾಂತರ, ವಲಸೆ, ಸಾವು, ನೋವು, ಭಾಷೆ,ಅಂಜನ,ಮಾಟ ಮಂತ್ರ,ಜಾನಪದ,ನಾಗ್ದೊ ಬೇತಾಳ,ಕುಟ್ಟಿ ಚಾತ,ಭೂತಾರಾಧನೆ, ಭೀಭತ್ಸ-ಹೀಗೆ ನೂರಾರು ವಿಚಾರಗಳು. ಇವುಗಳಿಂದ ಕೂಡಿದ 470 ಪುಟಗಳ 'ಸ್ವಪ್ನ ಸಾರಸ್ವತ 'ಕಾದಂಬರಿ ಒಂದು 'ಸಾರಸ್ವತ ಮಹಾಕಾವ್ಯ'

ಪೋರ್ಚುಗೀಸರು ಗೋವೆಯ ನೆಲದ ಮೇಲೆ ಕಾಲಿಟ್ಟ ದಿನದಿಂದ ಆರಂಭವಾಗಿ ಬ್ರಿಟಿಷರು ಭಾರತಕ್ಕೆ ಬರುವವರೆಗೆ ಚಾಚಿಕೊಳ್ಳುವ ಈ ಕಾದಂಬರಿ ಆಳವಾದ ಇತಿಹಾಸದ ಅಧ್ಯಯನ ಮತ್ತು ಸೃಜನಶೀಲ ಪ್ರತಿಭೆಯಿಂದ ಮೂಡಿಬಂದ ಅನನ್ಯ ಕೃತಿ.

ಬರೇ ಕನ್ನಡದ ಜಾಯವಾನಕ್ಕೆ ಮಾತ್ರವಲ್ಲ ಇಡೀ ಭಾರತೀಯ ಕಥಾಸಾಹಿತ್ಯದಲ್ಲೇ ಮುಖ್ಯ ವಾಗಿರುವ ಕೃತಿ ಎಂಬುದು ವಿಮರ್ಶಕರ ಅಭಿಪ್ರಾಯ.450ವರ್ಷಗಳ ಹಿಂದೆ ಆಳವಾಗಿ ಬೇರೂರಿ ಸಂತೃಪ್ತ ಜೀವನ ನಡೆಸುತ್ತಿದ್ದ ಸಾರಸ್ವತ ಜನಾಂಗ ಪೋರ್ಚುಗೀಸರ ಮತಾಂಧತೆಯಲ್ಲಿ ನಲುಗಿ, ತಾವು ನಂಬಿದ ಧರ್ಮ ಭಾಷೆಗಳನ್ನು ಉಳಿಸಿಕೊಳ್ಳಲು ದಕ್ಷಿಣಾಭಿಮುಖವಾಗಿ ವಲಸೆ ಹೋಗುತ್ತಾರೆ. ಅವರಲ್ಲಿ ಕಾಸರಗೋಡಿನ ಸಮೀಪದ ಕುಂಬಳೆಯಲ್ಲಿ ಕಥೆಯನ್ನು ಮೊಮ್ಮಗ ರಾಮಚಂದ್ರ ಪೈಗೆ ಹೇಳುವ ಮೂಲಕ ಇಲ್ಲಿ ಕಾದಂಬರಿ ಆರಂಭವಾಗುತ್ತದೆ. ಸಾರಸ್ವತರು ವಲಸೆ ಹೋಗುವ ಎರಡನೆಯ ಭಾಗವಂತೂ ಅದ್ಭುತವಾಗಿ ಚಿತ್ರಣಗೊಂಡಿದೆ. ವಲಸೆಯ ಪ್ರಕ್ರಿಯೆಯಲ್ಲಿ ಸಾವು, ರೋಗ ರುಜಿನ, ಬಡತನಗಳಿಂದ ನುಚ್ಚುನೂರಾಗಿದ್ದರೂ ತಮ್ಮ ಚೈತನ್ಯದ ಛಲದಿಂದ ಮತ್ತೆ ಎದ್ದುನಿಲ್ಲುವ ಹೋರಾಟದ ಕಥನವಿದು.

'ಸ್ವಪ್ನ ಸಾರಸ್ವತ'ವಿಶೇಷವೆಂದರೆ ಎಸ್.ಎಲ್. ಭೈರಪ್ಪನವರ ಕಾದಂಬರಿಗಳು ಮರುಮುದ್ರಣವಾಗುವುದು ಸಾಮಾನ್ಯ.ಆದರೆ ಇದುವರೆಗೆ ನಾಲ್ಕು ಕಥಾ ಸಂಕಲನಗಳಿಂದ ಕಥೆಗಾರ ಎಂದಷ್ಟೇ ಪರಿಚಿತರಾಗಿದ್ದ ಗೋಪಾಲಕೃಷ್ಣ ಪೈಯವರ 'ಸ್ವಪ್ನ ಸಾರಸ್ವತ' ಎರಡೇ ವರ್ಷದಲ್ಲಿ ನಾಲ್ಕು ಬಾರಿ ಅಚ್ಚಾಗಿ ರಾಜ್ಯದ ಮೂಲೆಮೂಲೆಗಳಿಂದ ಉತ್ತಮ ಪ್ರತಿಕ್ರಿಯೆ ದೊರೆಯುತ್ತಿದೆ.

ಈಗಾಗಲೇ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸೇರಿದಂತೆ, ಸೂರ್ಯನಾರಾಯಣ ಚಡಗ ಪ್ರಶಸ್ತಿ, ಡಾ. ಶಾಂತಾರಾಂ ಪ್ರಶಸ್ತಿ ಲಭಿಸಿದೆ.

5ಭಾಷೆಗಳಲ್ಲಿ ಮಲಯಾಳಂ, ಮರಾಠಿ, ತಮಿಳು, ಹಿಂದಿ, ಇಂಗ್ಲಿಷ್‌ನಲ್ಲಿಯೂ ಅನುವಾದವಾಗುತ್ತಿದ್ದು, ಇಂಗ್ಲಿಷ್‌ನ ಭಾಷಾಂತರ (ಸುಮತಿ ಶೆಣೈ) ಸದ್ಯದಲ್ಲಿಯೇ ಪುಸ್ತಕ ಪ್ರಕಟವಾಗಲಿದೆ.

*ಕೇಂದ್ರ ಸಾಹಿತ್ಯ ಅಕಾಡೆಮಿಯ 2011ನೇ ಸಾಲಿನ ಪ್ರಶಸ್ತಿ ಪಡೆದ ಗೋಪಾಲಕೃಷ್ಣ ಪೈಯವರಿಗೆ ದೆಹಲಿ ಕರ್ನಾಟಕ ಸಂಘ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು.*


# ಮೆಲ್ವಿನ್ ರೊಡ್ರಿಗಸ್ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ



ಪ್ರಸಿದ್ಧ ಕೊಂಕಣಿ ಕವಿ ಮಂಗಳೂರಿನ ಮೆಲ್ವಿನ್ ರೊಡ್ರಿಗಸ್ ಅವರ 'ಪ್ರಕೃತಿಚೊ ಪಾಸ್' (ಕವನ ಸಂಕಲನ) ಕೃತಿಗೆ ಈ ಬಾರಿಯ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ದೊರೆತಿದೆ. ಕೇವಲ ಕವಿ ಹಾಗೂ ಲೇಖಕರಲ್ಲದೇ ಇವರು ಕೊಂಕಣಿ ಭಾಷೆ ಹಾಗೂ ಸಾಹಿತ್ಯದ ಪ್ರಚಾರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಇವರು ಹಲವಾರು ಸಣ್ಣಕತೆಗಳು, ಅನುವಾದ, ಕವನ ಸಂಕಲನ, ಪ್ರಬಂಧಗಳು ಹಾಗೂ ಕೊಂಕಣಿ ಸಾಹಿತ್ಯ ರಚನೆಯನ್ನು ಮಾಡಿದ್ದಾರೆ. ಇವರ ಇನ್ನಿತರ ಪ್ರಮುಖ ಕೃತಿಗಳು-'ಮೊಗ ಪೆಲ್ಲೊ' (ಕವನ ಸಂಕಲನ), 'ಕನ್ನಿ ಜಾಲಿ ಚೊಲಿ' (ಯಶವಂತ ಚಿತ್ತಾಲರ ಸಣ್ಣ ಕತೆಗಳ ಅನುವಾದ) 'ವಾಟ್' (ಕವನ ಸಂಕಲನ) 'ಫಿಂಟಂ' (ಕವನ ಸಂಕಲನ) 'ಶಬ್ದುಲಂ' (ಪ್ರಬಂಧ ಸಂಕಲನ) ಮೊದಲಾದವು. ಅಲ್ಲದೇ ಹಲವಾರು ಕೃತಿಗಳನ್ನು ಸಂಪಾದಿಸಿದ್ದಾರೆ. ಡೈಜಿ ವರ್ಲ್ಡ್‌ನ ಸ್ಥಾಪಕ ಸದಸ್ಯರಲ್ಲದೇ 'ಜಾಗೇ ಕವಿ' ಮತ್ತು 'ಕವಿತಾ ಟ್ರಸ್ಟ್'ನ ಸ್ಥಾಪಕರೂ ಹಾಗೂ 'ಕೊಂಕಣೀ ಪೊಯಿಟ್ರಿ ಡಾಟ್ ಕಾಮ್'ನ ಸಂಪಾದಕರು ಸಾಹಿತ್ಯ ಅಕಾಡೆಮಿಯಿಂದ ಅವರ ಕೆಲವು ಕೊಂಕಣಿ ಕವನಗಳು ಪಂಜಾಬಿ ಭಾಷೆಗೆ ಇತ್ತೀಚೆಗೆ ಅನುವಾದಗೊಂಡಿವೆ.

ಡಾ. ಟಿ.ಎಂ. ಪೈ ಪ್ರತಿಷ್ಠಾನದ 'ಅತ್ಯುತ್ತಮ ಕೊಂಕಣಿ ಕೃತಿ ಪ್ರಶಸ್ತಿ' 2009 ಇವರ 'ಪ್ರಕೃತಿಚೊ ಪಾಸ್' ಕೃತಿಗಾಗಿ ಲಭಿಸಿದೆ. ಅಲ್ಲದೇ ಕರ್ನಾಟಕ ಕೊಂಕಣಿ ಅಕಾಡೆಮಿ ಗೌರವ ಪುರಸ್ಕಾರ, ಕೊಂಕಣಿ ಭಾಷಾ ಮಂಡಲ ಮೊದಲಾದ ಪ್ರಶಸ್ತಿ ಪುರಸ್ಕಾರಗಳು ಪಡೆದಿರುವ ರೊಡ್ರಿಗಸ್ ಅವರು ತಮ್ಮ ಪ್ರಕೃತಿಚೊ ಪಾಸ್ ಕವನಗಳ ಮೂಲಕ ಕೊಂಕಣಿ ಕವನ ಸಾಹಿತ್ಯವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ದಿದ್ದಾರೆ. ತಮ್ಮ ಕವನಗಳ ಮೂಲ ವಸ್ತುವಿನ ಮೂಲಕ ಜಾಗತಿಕ ಸಮಸ್ಯೆಗಳನ್ನು ವಿಶಾಲವಾದ ದೃಷ್ಟಿಕೋನದಿಂದ ಪರಾಮರ್ಶಿಸಿದ ಕರ್ನಾಟಕದ ಮೊದಲ ಕೊಂಕಣಿ ಕವಿ ಎಂಬ ವಿಮರ್ಶಕರ ಪ್ರಶಂಸೆಗೆ ಪಾತ್ರರಾಗಿರುವ ಮೆಲ್ವಿನ್ ರೊಡ್ರಿಗಸ್ *ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು. ಅವರ ಸಾಹಿತ್ಯ ಕೃಷಿ ನಿರಂತರವಾಗಿ ಸಾಗಲಿ, ಮತ್ತಷ್ಟು ಪುರಸ್ಕಾರಗಳು ಲಭಿಸಲಿ ಎಂದು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರೈಸುತ್ತೇವೆ.*

Delhi Karnataka Sangha's Abhimatha Monthly,
Jan -2012, Price Rs.1/- RNI Regn. No. 53405/91, DL-SW-15/4016/10-11-12
Printout Date : Jan 8th / 9th, Postal Date :10th / 11th, Total Pages-28



Experience the joy of
online banking wherever you are


MoneyClick™ Internet Banking

Services accessible:
• Inquiries and Requests • Funds Transfer • Corporate Services
• Trade Finance • Utility Bill Payment • SMS Banking / Alert



E-COMMERCE
ONLINE PAYMENT THROUGH
DEBIT CARD

Bill Payments, Online Shopping. Anytime. Anywhere.



MOBILE BANKING
MOBILE PAYMENT SERVICE

Start transacting with your mobile. Anytime. Anywhere.



NRI SERVICES

Non Resident Rupee Account (NRE),
Foreign Currency Non-Resident (Bank) Scheme (FCNR[B])
Non Resident (Ordinary) Account (NRO)
Resident Foreign Currency (RFC) (Domestic)

NRIs are also eligible for services such as
• KBL Quik Remit • KBL Internet Banking • KBL Apna Ghar




DP SERVICES
&
ONLINE
TRADING FACILITY

Karnataka Bank Ltd.
Your Family Bank. Across India.

Regd. & Head Office: Mangalore - 575 002
E-mail: info@ktkbank.com Visit us at: www.karnatakabank.com

Editor: Smt.Usha Bharatadri, Printed & Published by C.M. Nagaraja General Secretary on behalf of Delhi Karnataka Sangha (R), Rao Tularam Marg, Sector-12, R.K.Puram, New Delhi-110022, Tel: 26109615 and printed at Saujanya Printing Press, C-95, Okhla Industrial Area, Phase-I, New Delhi-110020, Tel: 26815778, 40520770